# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ - 2016



# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 33
ಸಂಚಿಕೆ - 10
ಜುಲೈ - 2016

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಎಂ. ಶಿವಕುಮಾರ್

ಟ್ರಸ್ಟಿಗಳು
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ .....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ವೈಫ್ ಅಥವಾ ವೈಫೈ ? | **ಪ್ರಶಾಂತ ಅಡೂರ** | 4 |
| ಸೀರೆ ಖರೀದಿ ಆಗ-ಈಗ | **ನಂದಿನಿ ಕಾಪಡಿ** | 6 |
| ವೆಂಕಟರಮಣಪ್ಪನ...... | **ಡಾ. ಎ. ಕುಮಾರ್** | 10 |
| ಬಿತ್ತಿದಂತೆ ಬೆಳೆ | **ಬೇಲೂರು ರಾಮಮೂರ್ತಿ** | 14 |
| ಬಿಸಿ ಬೇಳೆ... ಮಾತು | **ನಳಿನಿ ಸೂರ್ಯಪ್ರಕಾಶ್** | 17 |
| ತುಂತುರು | **ದಂನಾಳ** | 19 |
| ತುಂಟಾಟದ ಗೊರೂರರು | **ವೈ.ಎನ್. ಗುಂಡೂರಾವ್** | 22 |
| ಬೆಳ್ಳಗಾಯಿತೆ...... | **ಶಾಂತಮೂರ್ತಿ** | 27 |
| ಗಡ್ಡ ಮತ್ತು ಉಳ್ಳಾಗಡ್ಡಿ | **ಬಾಲಚಂದ್ರ ಬಹದೂರ್ ದೇಸಾಯಿ** | 29 |
| ಜಡ್ಜ್ಮೆಂಟ್ ಡೇ | **ಸಿ.ಆರ್. ಸತ್ಯ** | 31 |
| ಊಟ ಕೊಟ್ಟಿರೋ ದೇವರು | **ಎಚ್. ಗೋಪಾಲಕೃಷ್ಣ** | 35 |
| ಕಥಾ ಗಾಯಕನ.... | **ಎಂ.ಕೆ. ಭಾಸ್ಕರ ರಾವ್** | 38 |

**ಮುಖಪುಟ ವ್ಯಂಗ್ಯಚಿತ್ರ - ಆನಂದ, ರವೀಂದ್ರ ರಾವ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಪೋಲೀಸ್ ಪ್ರತಿಭಟನೆ ರದ್ದು – ಸುದ್ದಿ

***● ಸುದ್ದಿ ಕೇಳಿ ಅಪರಂಜಿ ನಸುನಕ್ಕಳಂತೆ !!***

★★★

ಪಾಕಿಸ್ತಾನ ಸರ್ಕಾರಕ್ಕೆ ನೋಟೀಸ್ – ಶೀರ್ಷಿಕೆ

***● ಚರ್ವಿತ ಚರ್ವಣ ಎಂದರೆ ಇದೇ !!***

★★★

ನೀರು ಬರದಿದ್ದರೂ ಬಿಲ್ ಕಟ್ಟಬೇಕು – ಹೇಳಿಕೆ

***● ಆರ್ಥಿಕ ವ್ಯವಸ್ಥೆ ಬಲವಾಗಿದೆ !!***

★★★

ಆತ್ಮಸಾಕ್ಷಿಯ ಮತ ನೀಡಿ – ಶ್ರೀ ಕುಮಾರಸ್ವಾಮಿ

***● ಆತ್ಮಕ್ಕೆ ಬಂಧನವಿಲ್ಲವಲ್ಲ !!***

★★★

ಕಸದ ತೊಟ್ಟಿಗಳಿಗೆ ತಜ್ಞರಿಂದಲೇ ವಿರೋಧ – ಸುದ್ದಿ

***● ಅವು 'ತುಟ್ಟಿ'ಯಾಗಿವೆಯಂತೆ !!***

★★★

ಅಮೆರಿಕದ ಮಾಧ್ಯಮಗಳು ಅಪ್ರಾಮಾಣಿಕ – ಟ್ರಂಪ್

***● ಯಥಾ ರಾಜಾ, ತಥಾ ಪ್ರಜಾಃ !!***

★★★

ಹಿರಿಯ ಚೇತನ ದೇಜಗೌ ಅವರಿಗೆ ಅಪರಂಜಿಯ

ಹೃತ್ಪೂರ್ವಕ ಶ್ರದ್ಧಾಂಜಲಿಗಳು !!

★★★

ಭಾರತ – ಪಾಕಿಸ್ತಾನ ಘರ್ಷಣೆ ಆತಂಕಕಾರಿ – ಅಮೆರಿಕ

***● ಹಾಗಲಕಾಯಿ, ಬೇವಿನಕಾಯಿ ನೆನಪಿಗೆ ಬರುತ್ತೆ !!***

★★★

## ನಮ್ಮ ನಿಮ್ಮಲ್ಲಿ

MPBIM

ಭಾರತೀಯ ವಿದ್ಯಾಭವನಕ್ಕೂ ಅಪರಂಜಿಗೂ ಒಂದು ಅವಿನಾಭಾವ ನಂಟು ಇರುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ಇದು ಶುರುವಾದದ್ದು ಅಪರಂಜಿಯ ಹತ್ತನೆಯ ಹುಟ್ಟುಹಬ್ಬದಂದು. ಆ ಸಂಭ್ರಮವನ್ನು ಆಚರಿಸಿದ್ದು ಭಾರತೀಯ ವಿದ್ಯಾಭವನದ ರಾಜಮ್ ಸಭಾಂಗಣದಲ್ಲಿ. ಬಹು ಸೊಗಸಾಗಿ ನಡೆದ ಆ ಸಮಾರಂಭದಲ್ಲಿ ಮಾಸ್ಟರ್ ಹಿರಣ್ಣಯ್ಯ, ಸಿ.ಆರ್. ಸಿಂಹ, ಎಚ್.ಕೆ. ರಂಗನಾಥ್ ಇತ್ಯಾದಿಯಾಗಿ ಅನೇಕ ಪ್ರತಿಭಾವಂತರು ಪಾಲ್ಗೊಂಡಿದ್ದರು. ನನ್ನ ಆತ್ಮೀಯ ಗೆಳೆಯ ಹಾಗೂ ಆ ದಿನಗಳಲ್ಲಿ ಎಚ್.ಎಂ.ಟಿ.ಯ ಮುಖ್ಯಾಧ್ಯಕ್ಷರಾಗಿದ್ದ ರಾಮಾನುಜ ಅವರು ಅಂದಿನ ಸಂಭ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದು ಇಂದಿಗೂ ನನ್ನ ನೆನಪಿನಲ್ಲಿ ಹಸಿರಾಗಿದೆ. ಅಂದು ಪ್ರಾರಂಭವಾದ ಅವರೊಂದಿಗಿನ ಅಪರಂಜಿಯ ನಂಟು ಇಂದಿನವರೆಗೂ ಬಹು ಸಜ್ಜನಿಕೆಯಿಂದ, ಸಹೃದಯತೆಯಿಂದ ಬೆಳೆದು ಬಂದಿದೆ. ಹಾಗಾಗಿ ಶ್ರೀಯುತರು ಭಾರತೀಯ ವಿದ್ಯಾಭವನದ ಚುಕ್ಕಾಣಿ ಹಿಡಿದಂದಿನಿಂದ ಅಪರಂಜಿಗೆ ಒಬ್ಬ ದೊಡ್ಡಣ್ಣ ಸಿಕ್ಕಿದಂತೆಯೇ ಆಯಿತು. ನಮ್ಮ ಎಲ್ಲಾ ಸಮಾರಂಭಗಳಿಗೂ ವಿದ್ಯಾಭವನದ ಹಾಗೂ ಎಂ.ಪಿ.ಬಿ.ಐ.ಎಂ ಸಂಸ್ಥೆಯ ಸಹಾಯ ಹಸ್ತ ಸಿದ್ಧವಾಗಿರುತ್ತಿತ್ತು. ಅಲ್ಲಿನ ಸಭಾಂಗಣವನ್ನು ಅಪರಂಜಿಯ ಉಪಯೋಗಕ್ಕೆ ಮುಫತ್ತಾಗಿ ಕೊಡುವುದೇ ಅಲ್ಲದೇ ಇನ್ನೂ ಅನೇಕ ಸೌಲಭ್ಯಗಳನ್ನು ನಾವು ಪಡೆಯುತ್ತಾ ಬಂದಿರುವುದು ಶ್ರೀ ರಾಮಾನುಜ ಹಾಗೂ ವಿದ್ಯಾಭವನದ ಎಲ್ಲ ಸಿಬ್ಬಂದಿಗಳ ಹಾರ್ದಿಕ ಔದಾರ್ಯದಿಂದಲೇ ಎಂದು ತಿಳಿಸಬಯಸುವೆ.

ಭಾರತೀಯ ವಿದ್ಯಾಭವನದ ಸಹಕಾರದಿಂದ ಅಪರಂಜಿ ಕಳೆದ ಎರಡು ದಶಕಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿ ನಗೆ ರಸಿಕರನ್ನು ರಂಜಿಸುವುದರಲ್ಲಿ ಸಫಲವಾಗಿದೆ. ಬೆಂಗಳೂರೇ ಅಲ್ಲದೇ ಮೈಸೂರು, ಗರ್ವಾಲೆ ಈ ಸ್ಥಳಗಳಲ್ಲಿಯೂ ಸಹಾ ಅಪರಂಜಿ ಮತ್ತು ವಿದ್ಯಾಭವನದ ಸಂಯುಕ್ತ ಆಶ್ರಯದಲ್ಲಿ ಬಹು ಸುಂದರ ಕಾರ್ಯಕ್ರಮಗಳು ಮೂಡಿಬಂದಿವೆ.

ಭಾರತೀಯ ವಿದ್ಯಾಭವನದ ಸಹಾಯ ಹಸ್ತದ ಇತ್ತೀಚಿನ ಉದಾಹರಣೆಯೆಂದರೆ ಅಪರಂಜಿಯ ಹಣಕಾಸಿನ ವಹಿವಾಟಿಗೆ ಬೇಕಾದ ಸಾಫ್ಟ್‌ವೇರ್ ಸಹಾಯವನ್ನು ವಿದ್ಯಾಭವನದ ಅಂಗವಾದ ಎಂ.ಪಿ. ಬಿರ್ಲಾ ಇನ್ಸ್ಟಿಟ್ಯೂಟ್‌ನ ಮೂಲಕ ಒದಗಿಸುವ ಮನೋವೈಶಾಲ್ಯತೆ. ಈ ಕಾರ್ಯದಲ್ಲಿ ನಮಗೆ ನೆರವಾದವರೆಂದರೆ ಶ್ರೀ ರಾಮಾನುಜ, ಶ್ರೀ ರಾಮದಾಸ್ ಹಾಗೂ ಶ್ರೀ ಸದಾನಂದ ಇವರುಗಳು. ಅಪರಂಜಿಯಂತಹ ಅಲ್ಪ ಬಡ್ಜೆಟ್ ವಹಿವಾಟಿಗೆ ಆಫೀಸ್ ಸಿಬ್ಬಂದಿ ಮುಂತಾದ ಸೌಕರ್ಯಗಳು ಗಗನ ಕುಸುಮ. ಈ ಕೊರತೆಯನ್ನು ಮೇಲೆ ಉಲ್ಲೇಖಿಸಿರುವ ಸಹಾಯ ಬಹುಮಟ್ಟಿಗೆ ನೀಗಿಸಿದೆ. ಇದಕ್ಕಾಗಿ ಅಪರಂಜಿ ತನ್ನ ದೊಡ್ಡಣ್ಣ ಮತ್ತು ಇತರ ಹಿತೈಷಿಗಳ ಸಹಕಾರವನ್ನು ತುಂಬುಹೃದಯದಿಂದ ಸ್ಮರಿಸಿಕೊಳ್ಳುತ್ತಾಳೆ.

ಶಿವಕುಮಾರ್

# ವೈಫ್ ಅಥವಾ ವೈಫೈ?

**- ಪ್ರಶಾಂತ ಆಡೂರ**

ಇವತ್ತ ನಮ್ಮ ಪರಿಸ್ಥಿತಿ ಹೆಂಗ ಆಗೇದ ಅಂದರ ಮನ್ಯಾಗ ಒಂದು ವೈಫೈನರ ಇರಬೇಕು ಇಲ್ಲಾ ವೈಫ್ ಅಂದರ ಹೆಂಡ್ತಿನರ ಇರಬೇಕು ಅನ್ನೊಹಂಗ ಆಗೇದ. ಅಲ್ಲಾ ಹಂಗ ಒಂದ ಒಪ್ಪತ್ತ ಹೆಂಡ್ತಿ ಇಲ್ಲಾ ಅಂದರ ನಡದಿತ್ತ ಆದರ ವೈಫೈ ಅಂತೂ ಇರಬೇಕು. ಅಷ್ಟ ನಾವ ಇವತ್ತ ಇಂಟರ್ನೆಟ್ ಮ್ಯಾಲೆ ಡಿಪೆಂಡ ಆಗಿಬಿಟ್ಟೇವಿ. ದೇವರ ಮನಿ ಒಳಗ ಗಾಯತ್ರಿ ಮಂತ್ರ ಮೊಬೈಲನಾಗ ಹಚಗೊಂಡ ಸಂಧ್ಯಾವಂದನಿ ಮಾಡೋದರಿಂದ ಹಿಡದ ಬಾಥ್‌ರೂಮ ಒಳಗ ಕ್ಯಾಂಡಿ ಕ್ರಶ್ ಸಾಗಾ ಕ್ಲೀಯರ್ ಆಗಲಿಕ್ಕೆ ಸಹಿತ ವೈಫೈ ಬೇಕ. ಹಂತಾ ಪರಿಸ್ಥಿತಿ ಇವತ್ತ ಬಂದದ.

> **ನನಗಂತೂ ಇವತ್ತ ವೈಫ್‌ಕಿಂತ ವೈಫೈ ಅನಿವಾರ್ಯ ಆಗೇದ ಬಿಡ್ರಿ....**

ಅಲ್ಲಾ ಈಗ ಎಲ್ಲಾ ಬಿಟ್ಟ ವೈಫೈ ಮ್ಯಾಲೆ ಯಾಕ ಬಂತು ವಿಷಯ ಅನಲಿಕ್ಕೆ. ಮೊನ್ನೆ ರಶ್ಯಾದವರು ಇನ್ನಮ್ಯಾಲೆ ಸುಡಗಾಡ ಗಟ್ಟಿ (ಸಿಮೆಟ್ರಿ) ಒಳಗೂ ಫ್ರೀ ವೈಫೈ ಕೊಡಬೇಕು ಅಂತ ಡಿಸೈಡ ಮಾಡ್ಯಾರಂತ. ಅಲ್ಲಾ ಸತ್ತ ಮ್ಯಾಲೂ ಫ್ರೀ ನೆಟವರ್ಕ ಇರಲಿ. ಸತ್ತವರ ಸ್ವರ್ಗದಿಂದನೂ ಜೀವಂತ ಇದ್ದವರಿಗೆ ಪಿಂಗ್ ಮಾಡಲಿ ಅಂತ ಅಲ್ಲಾ ಮತ್ತ, ಅಲ್ಲೇ ಸುಡಗಾಡಗಟ್ಟಿಗೆ ಬಂದ ಮಂದಿಗೆ ಹೆಣಾ ಹುಗಿಯೋತನಕ ಟೈಮ ಪಾಸ ಮಾಡಲಿಕ್ಕೆ ಫ್ರೀ ಇಂಟರ್ನೆಟ್ ಸಿಗಲಿ ಅಂತ ಹಂಗ ಮಾಡ್ಯಾರ. ಇತ್ತೀಚಿಗೆ ಮಂದಿ ಎಲ್ಲೇ ಹೋಗಬೇಕಂದರು ಮೊದ್ಲ ಅಲ್ಲೇ ವೈಫೈ ಅದನೋ ಇಲ್ಲೊ ಅನ್ನೋದನ್ನ ಚೆಕ್ ಮಾಡಿ ಹೋಗ್ತಾರಲಾ ಅದಕ್ಕ ಜನಾ ಎಲ್ಲರ ವೈಫೈ ಇಲ್ಲಾ ಅಂತ ಸತ್ತವರನ ಮಣ್ಣ ಮಾಡಲಿಕ್ಕೆ ಬರೋದ ಬಿಟ್ಟ ಗಿಟ್ಟಾರಂತ ಸ್ಮಶಾನದಾಗೂ ಫ್ರೀ ವೈಫೈ ಕೊಡಸೋರ ಇದ್ದಾರ. ಹಂಗ ಕ್ಯಾಂಟಿನದಾಗ, ಹೋಟೆಲದಾಗ, ಮಾಲ್ ಒಳಗ, ರೇಲ್ವೆ ಸ್ಟೇಶನ ಒಳಗ, ಬಸ್ ಸ್ಟ್ಯಾಂಡಿನಾಗ, ಏರಪೋರ್ಟನಾಗ, ಶಾಪಿಂಗ ಕಾಂಪ್ಲೇಕ್ಸ್ ಒಳಗ ಫ್ರೀ ವೈಫೈ ಅಂತು ಇದ್ದ ಇದ್ವು. ಸುಡುಗಾಡದಾಗ ಒಂದ ಇದ್ದಿದ್ದಿಲ್ಲಾ ಇನ್ನ ಮುಂದ ಅಲ್ಲೇನೂ ಬರ್ತದ. ಇಷ್ಟ ಅಲ್ಲಾ ಯಾರೋ ಹೇಳಿದ್ದರಂತ 'ನಾಳೆ ನಾ ಸತ್ತ ಮ್ಯಾಲೆ ನನ್ನ ಗೋರಿ ಮ್ಯಾಲೆ ಫ್ರೀ ವೈಫೈ ಕೊಡ್ರಿ ಅಂದರರ ನಮ್ಮ ಜನಾ ನನ್ನ ನೆನಪ ಮಾಡ್ಕೊಂಡ ನನ್ನ ಗೋರಿಗೆ ಬಂದು ಹೋಗಿ ಮಾಡ್ತಾರ' ಅಂತ. ಬಹುಶಃ ಇದನ್ನ ರಶ್ಯಾದವರ ಭಾಳ ಸಿರಿಯಸ್ ತೊಗೊಂಡ ಎಲ್ಲೆ ಒಂದೊಂದ ಗೋರಿಗೆ ಒಂದೊಂದ ವೈಫೈ ಕೊಡ್ಕೋತ ಹೋಗೋದು ಅಂತ ಇಡಿ ಸ್ಮಶಾನನ ವೈಫೈ ಝೋನ್ ಮಾಡಲಿಕತ್ತಾರ. ಹಂಗ ಕಬರನಾಗ ಇದ್ದೋರ ಯಾರರ ಮೊಬೈಲ್ ತೊಗೊಂಡ ಹೋಗಿದ್ದರ ಒಬ್ಬರಿಗೊಬ್ಬರ ಚಾಟ್ ಮಾಡಬಹುದು ಏನೊ ಆ ದೇವರಿಗೆ ಗೊತ್ತ.

ಹಂಗ ನಮ್ಮ ಮನ್ಯಾಗೂ ವೈಫೈ ಅದ ಮ್ಯಾಲೆ ಅದಕ್ಕ ಅಡ್ಡಗಾಲ ಹಾಕಲಿಕ್ಕೆ ವೈಫು ಇದ್ದಾಳ. ಒಮ್ಮೆ ಮನಿಗೆ ಬಂದ್ವಿಲ್ಲೋ ಮುಗಿತು ಹೆಂಡ್ತಿ, ವೈಫೈ ಎರಡು ಒಂದ ಅಳತಿ ನಮ್ಮ ಬೆನ್ನ ಹತ್ತಿರ್ತಾವ ಹಂಗ ಆವಾಗ ಇವಾಗ ವೈಫೈ ಸಿಗ್ನಲ್ ವೀಕ್ ಆಗಬಹುದು ಆದರ ವೈಫ್ ಸಿಗ್ನಲ್ ಮಾತ್ರ ಯಾವಾಗಲೂ ಕನೆಕ್ಟಡ್ ಮತ್ತು ಆಲ್ವೇಸ್ ಸ್ಟ್ರಾಂಗ್.

ನಾ ನನ್ನ ಹೆಂಡತಿಗೆ ಕಾಡಸಲಿಕ್ಕೆ ''ಏನಲೇ ವೈಫೈ ಇದ್ದಂಗ ಇದ್ದಿ ನೋಡ ನಾ ಬರೋದ ತಡಾ ಒಂದ ಸಮನಾ ಪೀಡಾ ಗಂಟ ಬಿದ್ದಂಗ ಬೆನ್ನ ಹತ್ತಿ ಬಿಡ್ತಿ'' ಅಂತ ನಾ ಅಂದರ ''ಅಯ್ಯ ಸಾಕ ಸುಮ್ಮನೀರ್ರಿ, ಹೆಂಡತಿ ವೈಫೈ ಆದರ ಗಂಡಂದರ ಬ್ಲೂಟೂಥ್ ಇದ್ದಂಗ ಮುಂದ ಹೆಂಡ್ತಿ ಇದ್ದರ ಕನೆಕ್ಟಡ್ ಇರ್ತೀರಿ ಒಂದ ಸ್ವಲ್ಪ ನಾವಿಲ್ಲಾ ಅಂದರ ಸಾಕ ಮತ್ತ ಯಾವದರ ಹೊಸಾ ಡಿವೈಸಿಗೆ ಬೆನ್ನ ಹತ್ತಿರಿ'' ಅಂತ ನಂಗ ಮಾರಿ ತಿವದ್ಲು.

ಮೊನ್ನೆ ಯಾರೋ ಒಂದ ಜೋಕ ಕಳಸಿದ್ದರು, ಮನಿಗೆ ಭಿಕ್ಷಾ ಬೇಡಲಿಕ್ಕೆ ಬಂದವ ಸಹಿತ ''ಯಮ್ಮಾ ತಾಯಿ ಒಂದ ಸ್ವಲ್ಪ ವೈಫೈ ಆನ್ ಮಾಡರಿ, ಮೂರ ದಿವಸದಿಂದ ಫೇಸ್‌ಬುಕ್ ನೋಡಿಲ್ಲಾ'' ಅಂತ ವೈಫೈ ಸಂಬಂಧ ಭಿಕ್ಷಾ ಬೇಡ್ತಾನಂತ. ಏನ್ಮಾಡ್ತೀರಿ ಇಷ್ಟ ಪ್ರಭಾವ ಅದ ಈ ವೈಫೈದ್ದ.

ಅಲ್ಲಾ ನನಗಂತೂ ಇವತ್ತ ಈ ವೈಫೈ ವೈಫ್‌ಕಿಂತ ಅನಿವಾರ್ಯ ಆಗೇದ ಬಿಡ್ರಿ ಸುಳ್ಳ ಯಾಕ ಹೇಳ್ಬೇಕು. ಒಂದ ನಿಮಿಷ ವೈಫೈ ಡೌನ ಆದರ ಸಾಕ ಜೀವ ಹೋದಂಗ ಆಗ್ತದ. ಒಂದ ಮುಂಜಾನೆ ಎದ್ದವಿ ಅಂದರ ರಾತ್ರಿ ಮಲ್ಕೋಬೇಕಾರ ಸಹಿತ ವೈಫೈ ಆನ್ ಇಟ್ಟ ಮೊಬೈಲ ತಲಿದಿಂಬ ಬುಡಕ ಇಟ್ಕೊಂಡ ಮಲ್ಕೋತೇವಿ. ಅಷ್ಟ ವೈಫೈಗೆ ಅಡಿಕ್ಟ್ ಆಗೇವಿ. ಹಂಗ ವೈಫ್ ಮಲ್ಕೊಂಡ ಮ್ಯಾಲೆ ಅಕಿ ಸಿಗ್ನಲ್ ಡೌನ ಆಗಬಹುದು ಆದರ ವೈಫೈ ಸಿಗ್ನಲ್ ಮಾತ್ರ ಯಾವಾಗಲೂ ಸ್ಟ್ರಾಂಗ್ ಇರಬೇಕು.

ಅಲ್ಲಾ ಇದ ನಂದ ಒಬ್ಬೊಂದ ಕಥಿ ಅಲ್ಲಾ ಬಿಡ್ರಿ ನಿಂಬದು ಎಲ್ಲಾ ಇದ ಹಣೇಬರಹ ನಾ ಇದ್ದದ್ದನ್ನ ಹಂಚಗೋತೇನಿ ನೀವ ಹಂಚಗೊಳಂಗಿಲ್ಲಾ ಇಷ್ಟ ಫರಕ. ಆದ್ರೂ ಈ ಸುಡಗಾಡ ವೈಫೈ ಅನ್ನೋದ ಹೆಂತ ಟೆಕ್ನಾಲಜಿ ಅಂತೇನಿ. ಜಗತ್ತ ಎಲ್ಲಿಂದ ಎಲ್ಲೆಗೆ ಬಂತ ನೋಡ್ರಿ.

❋

---

## ಬಯಕೆ

ಐಷಾರಾಮಿ ಕಾರನ್ನು ಬೆರಗಾಗಿ ನೋಡುತ್ತಿದ್ದ ಬಡ ಬಾಲಕ. ಅದನ್ನು ಗಮನಿಸಿದ ಮಾಲೀಕ 'ಬಾ ಒಂದು ರೌಂಡ್ ಹೋಗೋಣ' ಎಂದು ಬಾಲಕನನ್ನು ಸುತ್ತಿಸಿದ.

ಈ ಕಾರ್ ಎಷ್ಟು ಚೆನ್ನಾಗಿದೆ? ಎಷ್ಟು ಇದರ ಬೆಲೆ? ಎಂದು ಕೇಳಿದ ಬಾಲಕ.

ನನಗೆ ಗೊತ್ತಿಲ್ಲ. ನನ್ನ ಸೋದರ ನನಗೆ ಕೊಡಿಸಿದ ಎಂದ ಮಾಲೀಕ.

ಎಷ್ಟು ಒಳ್ಳೆಯವರು ಅವರು? ಎಂದು ಉದ್ಗರಿಸಿದ ಬಾಲಕ.

ನಿನಗೂ ಅಂತಹ ಸೋದರ ಬೇಕೆನಿಸುತ್ತದೆ ಅಲ್ಲವೆ? ಕೇಳಿದ ಮಾಲೀಕ.

ಇಲ್ಲ ನಾನು ಅಂತಹ ಸೋದರ ಆಗಲು ಬಯಸುವೆ ಎಂದ ಬಾಲಕ.

# ಸೀರೆ ಖರೀದಿ ಆಗ-ಈಗ

**- ನಂದಿನಿ ಕಾಪಡಿ**

**ಒಂ**ದಾನೊಂದು ಕಾಲ ಸೀರೆ ಖರೀದಿ ಎಂದರೆ ತುಂಬಾ ಆಸಕ್ತಿ. ಚಿಕ್ಕಪೇಟೆ, ಮೆಜೆಸ್ಟಿಕ್ ಅಂಗಡಿಗಳ ಭರ್ಜರಿ ಮಳಿಗೆಗಳಲ್ಲಿ ಸೀರೆ ಖರೀದಿಸುವುದೆಂದರೆ ಮಹಿಳೆಯರಿಗೆ ಸ್ವರ್ಗ ಸುಖ! ಬಾಯಿ ತುಂಬಾ ನಕ್ಕು ''ಬನ್ನೀಮ್ಮ, ಕೂತುಕೊಳ್ಳಿ ಹೊಸ ಮಾಲು ನಿನ್ನೆ ತಾನೇ ಕಂಚಿಯಿಂದ ಬಂದಿದೆ. ನಿಧಾನವಾಗಿ ತೋರಿಸುತ್ತೇನೆ'' ಎನ್ನುತ್ತಾ ತುಂಬಾ ಆದರದಿಂದ ಸೀರೆ ತೋರಿಸುವ ಅಂಗಡಿಯ ಕೆಲಸಗಾರ. ನಾವು ಕೆಳಗಡೆ ಹಾಸಿದ ಹಾಸಿಗೆಯ ಮೇಲೆ ಚಕ್ಕಂ ಪಟ್ಲ ಹಾಕಿ ಕುಳಿತು ಸೀರೆಗಳನ್ನು ನೋಡಿದ್ದೂ ನೋಡಿದ್ದೇ! ಈ ಸೀರೆ ಬಣ್ಣ ಚೆನ್ನಾಗಿದೆ ಆದರೆ ಅಂಚು ಯಾಕೋ ಅಷ್ಟಕಷ್ಟೆ. ಬೇರೆ ತೋರಿಸಪ್ಪ. ಇದರ ಅಂಚು ತುಂಬಾ ದೊಡ್ಡದು, ಇದರ ಸೆರಗು ತುಂಬಾ ಭಾರ, ಕುಂಕುಮದ ಬಣ್ಣ ತುಂಬಾ ದಟ್ಟ, ಮರೂನ್ ಬಣ್ಣ ಪರವಾಗಿಲ್ಲ. ಗಿಣಿ ಹಸುರಿನ ಒಡಲಿಗೆ ಅರಿಶಿಣದ ಅಂಚು ಬೇಕು. ಜರಿ ಕಡಿಮೆ ಜರಿ ಹೆಚ್ಚು ಹೀಗೆ ಒಂದೈವತ್ತು ಸೀರೆ ನೋಡಿ ಕಡೆಗೆ ಎರಡು ಸೀರೆ ಖರೀದಿಸುವ ಮಜಾ ಬೇರೆ! ಅಂಗಡಿಯವನು ಬೇರೆ ಬೇರೆ ಸೀರೆಗಳನ್ನು ಉಟ್ಟು ರೂಪದರ್ಶಿಯಾಗಿ ತೋರಿಸುತ್ತಾ ಸೊರಗಿ ಹೋಗಿ ನಾವು ನೋಡಿ ಬೇಡವೆಂದ ಸೀರೆಗಳನ್ನು ಮಡಿಸಿ ಸಾಕಾಗಿ ಹೋಗುತ್ತಿದ್ದ. ಸೀರೆ ಚೀಲಗಳನ್ನು ಎಲ್ಲರಿಗೂ ಕಾಣಿಸುವ ಹಾಗೆ ಹಿಡಿದುಕೊಂಡು ಮಲ್ಲೇಶ್ವರದ ಬಸ್ ಹತ್ತುತ್ತಿದ್ದ ನಮ್ಮ ಜಂಭ ನಮಗೆ ಆನಂದ ತರುತ್ತಿದ್ದ ದಿನಗಳವು!

ಆ ಕಾಲ ಮುಗಿಯಿತು. ಬೆಂಗಳೂರಿನ ತುಂಬಾ ಸೀರೆ ಅಂಗಡಿಗಳು ಬಂದವು. ಭರ್ಜರಿ ಮಳಿಗೆಗಳು ಭರ್ಜರಿ ಸೀರೆಗಳು. ದೀಪಗಳ ದಿವ್ಯ ಮೆರುಗಿನಲ್ಲಿ ಬೆಡಗಿ ಬೊಂಬೆಗಳ ಚೆಂದ. ಈಗ ಹಾಸಿಗೆಯಿಲ್ಲ ಕುರ್ಚಿಗಳು ಮೇಜುಗಳು ಆದರೆ ಮಹಿಳೆಯರಿಗೆ ಏನೋ ಅಸಮಾಧಾನ ಈ ಭರ್ಜರಿ ಅಂಗಡಿಗಳು ತಮ್ಮ ಖರ್ಚನ್ನೆಲ್ಲಾ ಗಿರಾಕಿಗಳ ಹತ್ತಿರ ಗಿಟ್ಟಿಸುತ್ತಾರೆ ಎನ್ನುವ ಮನೋಭಾವ. ಮದುವೆ ಸೀಸನ್ ಬಂತೆಂದರೆ ಕಂಚಿಗೆ ಪ್ರವಾಸ. ಏಜೆಂಟ್ ಮೂಲಕ ನೇರವಾಗಿ ನೇಕಾರನ ಮನೆಗೆ ಹೋಗಿ ಅಲ್ಲಿ ಸೀರೆಗಳನ್ನು ಆರಿಸಿ ತರುವುದು. ನಂತರ ಚಿಕ್ಕಪೇಟೆಯಲ್ಲಿ ಇವೇ ಸೀರೆಗಳು ಕಂಚಿಗಿಂತಲೂ ಕಡಿಮೆ ಬೆಲೆಗೆ ಸಿಗುತ್ತವೆ ಎಂಬ ಕಟು ಸತ್ಯ ಅರಿವಾಗಿ ''ಹೋಗಲಿ ಬಿಡು. ಕಂಚಿ ಕಾಮಾಕ್ಷಿಯ ದರ್ಶನ ಮಾಡಿ ಜೀವನ ಸಾರ್ಥಕವಾಯಿತು'' ಎಂದು ಸಮಾಧಾನಪಟ್ಟುಕೊಳ್ಳುವುದು.

ಕಾಲ ಇನ್ನಷ್ಟು ಬದಲಾಯಿತು. ಈಗ ನಾನು ಸೀರೆ ಅಂಗಡಿಗೆ ಹೋಗಿ ''ಕಾಂಜೀವರಂ ಸೀರೆ ತೋರಿಸಪ್ಪ'' ಎಂದರೆ ಅಂಗಡಿಯವನು ನಾನುಟ್ಟಿದ್ದ ಹತ್ತಿಯ ಸೀರೆ ನೋಡಿ, ಬೇಗ ಬೇಗ ನನ್ನ ಕಿವಿ ಕತ್ತು, ಕೈ ನೋಡಿ ''ಅಮ್ಮ ನಿಮ್ಮ ಬಜೆಟ್ಟಿಗೆ ಬರುವುದಿಲ್ಲ. ಧರ್ಮಾವರಂ ಸೀರೆ ತೋರಿಸುತ್ತೀನಿ'' ಎಂದು ಬಿಡುವನು. ನಾನು ಮುಂಗೋಪ ತೋರಿಸುತ್ತಾ ''ನಿಮ್ಮ ಅಂಗಡಿಯ ತರಹ ನೂರಾರು ಅಂಗಡಿಗಳಿವೆ. ನಾನು ಹೋಗುತ್ತೀನಿ'' ಎನ್ನುತ್ತಾ ಎದ್ದರೆ ಅಂಗಡಿಯ ಮಾಲೀಕ ಬೇಗ ಬೇಗ ಬಂದು ನೌಕರನಿಗೆ ದಬಾಯಿಸಿ ''ಅಮ್ಮ ಕೂತುಕೊಳ್ಳಿ. ಈಗಿನ ಹುಡುಗರಿಗೆ ವ್ಯವಹಾರ ಜ್ಞಾನವಿಲ್ಲ. ನಾನು ನಿಮಗೆ ಬೇಕಾದ ಸೀರೆ ತೋರಿಸುವೆ

ಕಾಫಿ ತರಿಸಲೆ'' ಎನ್ನುವ ಸರಿ ಇವನ ದಾಕ್ಷಿಣ್ಯಕ್ಕೆ ಸಿಕ್ಕಿ ನಾನು ತುಂಬಾ ದುಬಾರಿಯಾದರೂ ಒಂದಾದರೂ ಸೀರೆ ಕೊಂಡುಕೊಳ್ಳುತ್ತಿದ್ದೆ. ಆಮೇಲೆ ಮನೆಗೆ ಬಂದು ಸುಮ್ಮನೇ ಬರಬೇಕಿತ್ತು. ನಾಲ್ಕು ಸಾವಿರ ದಂಡವಾಯಿತು ಎಂದು ಪ್ರಲಾಪಿಸುತ್ತಿದ್ದೆ.

ಅದೇ ಕಾಲ. ದೆಹಲಿಗೆ ಸರ್ಕಾರಿ ಕೆಲಸದ ಮೇಲೆ ಬಾರಿ ಬಾರಿ ಪ್ರವಾಸ. ಗೆಳತಿಯ ಜತೆ ಉತ್ತರ ಭಾರತದ ಸೀರೆ ಖರೀದಿಯ ಚಪಲಕ್ಕೆ ಬಿದ್ದು ಪ್ರಖ್ಯಾತ ಸೀರೆ ಅಂಗಡಿಗೆ ಹೋಗಿದ್ದೆ. ಅಲ್ಲಿನ ನಾನಾ ತರಹದ ಸೀರೆ ತೋರಿಸುತ್ತಾ ಅಂಗಡಿಯವನು ''ತಮ್ಮ ಮಾತಿನಿಂದ ತಾವಿಬ್ಬರೂ ಆಫೀಸರ್ ಎಂದು ಗೊತ್ತಾಯಿತು. ಯಾವ ಮಿನಿಸ್ಟ್ರೀ ಮೇಡಂ'' ಎಂದು ಮುಗುಳ್ನಗುತ್ತಾ ಕೇಳುತ್ತಾನೆ. ನಮ್ಮಿಬ್ಬರ ಅಹಂ ಸ್ವಲ್ಪ ಉಬ್ಬಿ ''ನಮ್ಮ ಆಫೀಸ್ ಇಂತಹುದು'' ಎಂದು ಹೇಳುತ್ತೇವೆ. ನೋಡ ನೋಡುತ್ತಾ ದೊಡ್ಡ ಗ್ಲಾಸುಗಳಲ್ಲಿ ತಂಪಾದ ಪೇಯ ಬರುತ್ತದೆ. ನಾವಿಬ್ಬರೂ ಸುಮಾರು ನೂರು ಸೀರೆಗಳನ್ನು ನೋಡಿ ಕಡೆಗೆ ಮೂರು ಸೀರೆ ಖರೀದಿಸುತ್ತೇವೆ. ಅಂಗಡಿಯವನು ''ಎಕ್ಸಲೆಂಟ್ ಚಾಯ್ಸ್ ಮೇಡಂ ಜೀ'' ಎನ್ನುತ್ತಾ ಬಿಲ್ಲು ಕೊಡುತ್ತಾನೆ. ನಮ್ಮಿಬ್ಬರ ವಿಸಿಟಿಂಗ್ ಕಾರ್ಡುಗಳನ್ನು ಕೇಳಿ ತೆಗೆದುಕೊಂಡು ಹಲ್ಲು ತೋರಿಸಿ ನಗುತ್ತಾನೆ. ಸೀರೆ ಪ್ಯಾಕೆಟ್ ಜೊತೆ ಇನ್ನೂ ಉಬ್ಬಿಕೊಂಡ ಅಹಂನಿಂದ ಕತ್ತು ಇನ್ನೂ ಮೇಲೆ ಬರುತ್ತದೆ. ಉತ್ತರ ಭಾರತೀಯರಿಂದ ನಮ್ಮ ದಕ್ಷಿಣದವರು ಕಲಿಯುವುದು ಬೇಕಾದಷ್ಟಿದೆ ಎಂದು ಗೆಳತಿಗೆ ಹೇಳುತ್ತೇನೆ. ಊರಿಗೆ ಬಂದು ನೋಡಿದರೆ ಸೀರೆಗಳು ಬರೀ ನಾಲ್ಕೂವರೆ ಮೀಟರ್! ನೆರಿಗೆಯೇ ಬರುವುದಿಲ್ಲ! ಸೆರಗೂ ಚಿಕ್ಕದು! ಹೋಗಲಿ ಬಿಡು. ಸ್ವಲ್ಪ ಸಣ್ಣವಾದ ಮೇಲೆ ಉಟ್ಟಿಕೋಬಹುದು ಎಂದುಕೊಳ್ಳುತ್ತೇನೆ.

ಈಗ ನನ್ನ ವಾಸ ಚೆನ್ನೈನಲ್ಲಿ. ಅತಿ ದೊಡ್ಡ ಸೀರೆ ಮಳಿಗೆಗಳು. ಒಳಗೆ ಹೋಗುತ್ತಲೇ ಒಬ್ಬಾತ ಸ್ವಾಗತಿಸಿ ''ಅಮ್ಮ ವಣಕ್ಕಂ. ನಿಮಗೆ ಎಂತಹ ಸೀರೆ ಬೇಕು'' ಎಂದು ಕೇಳುತ್ತಾನೆ. ಪೋಚಂಪಲ್ಲಿ ಸೀರೆ ಎಂದು ಹೇಳಿದ ಮೇಲೆ ನನ್ನನ್ನು ಮೂರನೇ ಮಹಡಿಗೆ ಹೋಗಿ ಅನ್ನುತ್ತಾನೆ. ದೊಡ್ಡ ಲಿಫ್ಟಿನ ತುಂಬಾ ಹೆಂಗೆಳೆಯರು. ಎಲ್ಲರಿಗೂ ಸಂಭ್ರಮ. ಸೀರೆ ತೆಗೆಯುವುದೆಂದರೆ ಮಹಿಳೆಗೆ ಮೌಂಟ್ ಎವರೆಸ್ಟ್ ಹತ್ತಿದಷ್ಟೇ ಸಂಭ್ರಮ! ಮೂರನೇ ಮಹಡಿ ಬರುತ್ತದೆ. ನಾನು ಹೊರಬಂದ ಕೂಡಲೇ ''ಇನ್ನೊಬ್ಬ ವ್ಯಕ್ತಿ ಬಂದು ನಿಮ್ಮ ಬಜೆಟ್ ಏನಮ್ಮ'' ಎಂದು ಕೇಳುತ್ತಾನೆ. ''ಗೊತ್ತಿಲ್ಲ. ಸೀರೆ ನೋಡಿ ಆಮೇಲೆ ನಿರ್ಧರಿಸುತ್ತೀನಿ'' ಎನ್ನುತ್ತೇನೆ. ಒಳಗೆ ಹೋಗುತ್ತಲೇ ಪ್ರತಿಯೊಂದು ವಿಭಾಗದ ಮೇಲೆ ಬರೆದ ಅಂಕಿಗಳು ಕಾಣುತ್ತವೆ. 2000-4000, 4100-6000, 6000-8000 ಇತ್ಯಾದಿ.

ಇನ್‌ಕಮ್‌ಟ್ಯಾಕ್ಸ್ ಸ್ಲಾಬ್‌ಗಳ ತರಹ ಎಂದು ಮನಸ್ಸಿನಲ್ಲೇ ನಕ್ಕಿ ಸೀರೆ ನೋಡುತ್ತೇನೆ. ಎರಡು ಸೀರೆ ಆರಿಸಿ ಪ್ಯಾಕ್ ಮಾಡಪ್ಪ ಎಂದ ಕೂಡಲೇ ''ಅಮ್ಮಾ, ಕಾಫಿ'' ಎನ್ನುತ್ತಾ ಚಿಕ್ಕ ಹುಡುಗ ಬರುತ್ತಾನೆ. ನಾಲ್ಕು ಗುಟುಕು ಕಾಫಿ ಮುಗಿಸಿದ ನಂತರ ''ಮತ್ತೆ ಬನ್ನಿ ಅಮ್ಮ'' ಎಂದು ತುಂಬಾ ವಿಶ್ವಾಸದಿಂದ ಅಂಗಡಿಯವನು ಹೇಳುತ್ತಾನೆ. ನಾನು ತಲೆದೂಗಿ ಬಿಲ್ ಕೌಂಟರ್ ಕಡೆ ನಡೆಯುತ್ತೀನಿ. ತಮಾಷೆ ಎಂದರೆ ಸೀರೆ ಕೊಂಡ ಮೇಲೆಯೇ ಕಾಫಿ ಬರುವುದು. ಕಾಫಿಯ ಹುಡುಗನಿಗೆ ಸನ್ನೆ ಮಾಡುವುದು ಸೀರೆ ಕೊಂಡ ಮೇಲೆಯೇ. ಒಂದು ಸಲ ಇದೆ ಅಂಗಡಿಯಲ್ಲಿ ನಾಲ್ಕನೆ ಮಹಡಿಯಲ್ಲಿ ಪ್ರಿಂಟೆಡ್ ಸಿಲ್ಕ್ ಸೀರೆ ಖರೀದಿಸಿದಾಗ ಕಾಫಿ ಬರಲಿಲ್ಲ. ನಂತರ ತಿಳಿಯಿತು. ಕನಿಷ್ಠ ಪಕ್ಷ ಮೂರು ಸಾವಿರದಷ್ಟು ಕೊಂಡರೆ ಮಾತ್ರ ಕಾಫಿ! ಅದೂ ನಾಲ್ಕು ಗುಟುಕು!

ಕಾಲ ಇನ್ನೂ ಮುಂದೆ ಹೋಗಿದೆ. ಈಗ ಡಿಸೈನರ್ ಸೀರೆಗಳ ಕಾಲ. ಅಂಚಿಲ್ಲ ಸೆರಗಿಲ್ಲ ಆದರೂ ಸೀರೆಗಳು ಎನಿಸಿಕೊಳ್ಳುವ ಈ ವಸ್ತ್ರಗಳು ತುಂಬಾ ದುಬಾರಿ! ಧೋತಿ ಸೀರೆ, ಗೌನ್ ಸೀರೆ, ಲಂಗ ದಾವಣಿ ಸೀರೆ ಇತ್ಯಾದಿ ಇತ್ಯಾದಿ. ನನ್ನಂಥವರಿಗೆ ಇಲ್ಲಿ ಸೀರೆ ದೊರಕುವುದಿಲ್ಲ. ನನ್ನ ಹೆಣ್ಣು ಮಕ್ಕಳು ಸದಾ ಆನ್‌ಲೈನ್ ಶಾಪಿಂಗ್ ಮಾಡುವುದು ನೋಡಿ ನಾನೂ ಲ್ಯಾಪ್‌ಟಾಪ್ ಮುಂದೆ ಕುಳಿತು ಭಾರತದ ಮೂಲೆ ಮೂಲೆಯಲ್ಲಿರುವ ಅಂಗಡಿಗಳಲ್ಲಿ ''ಕಿಟಕಿ ಖರೀದಿ'' ಅಥವಾ ''ವಿಂಡೋ ಶಾಪಿಂಗ್'' ಮಾಡುವ ಕಲೆ ಕಲಿತು ಗಂಟೆ ಗಟ್ಟಲೆ ಸಮಯ ಹಾಳು ಮಾಡುತ್ತೇನೆ. ಆದರೂ ಒಂದು ತರಹ ವಿಲಕ್ಷಣ ಸಂತೋಷ! ಕಡೆಗೂ ಒಂದೆರಡು ಸೀರೆಕೊಳ್ಳಲು ಲ್ಯಾಪ್‌ಟಾಪ್‌ನ ಕೀ ಕ್ಲಿಕ್ಕಿಸಿ ನಾನೂ ಆನ್‌ಲೈನ್ ಶಾಪಿಂಗ್ ಮಾಡಿಬಿಟ್ಟೆ ಎಂದು ಜಂಭದಿಂದ ಹೇಳಿಕೊಳ್ಳುತ್ತೇನೆ. ಸೀರೆ ಡೆಲಿವರಿ ಬಂದ ಮೇಲೆ ಕಂಪ್ಯೂಟರ್‌ನ ತೆರೆ ಮೇಲೆ ಕಂಡಿದ್ದ ತೆಳು ಗುಲಾಬಿ ಬಣ್ಣ ಸೀರೆಯ ಮೇಲೆ ಗಾಢ ಕಿತ್ತಳೆ ಬಣ್ಣವಾಗಿಬಿಟ್ಟಿರುತ್ತದೆ! ಹಸಿರಾಗಿ ಕಂಡ ಸೀರೆ ನಿಜವಾಗಿ ನವಿಲು ಬಣ್ಣ! ಪರವಾಗಿಲ್ಲ ಬಿಡಿ. ಈ ವಯಸ್ಸಿನಲ್ಲಿ ನಮ್ಮನ್ನು ನೋಡುವವರು ಯಾರು?



ಮೊನ್ನೆ ನನ್ನ ಗೆಳತಿ ತನ್ನ ಮಗಳಿಗೆ ಮದುವೆಯ ಸೀರೆಗಳನ್ನು ಖರೀದಿಸಲು ದೊಡ್ಡ ಅಂಗಡಿಗೆ ಬಂದಿದ್ದಳು. ಮುಂಬೈ ಮಹಾನಗರದ ದೊಡ್ಡ ಅಂಗಡಿ. ನನ್ನನ್ನು ನೋಡಿ ''ಬಾ, ನೀನೂ ಸೀರೆ ಆರಿಸುವುದರಲ್ಲಿ ಸಹಾಯ ಮಾಡು'' ಎಂದಳು. ಯಜಮಾನ್ರು ಕೆಕ್ಕರುಗಣ್ಣು ಮಾಡಿಕೊಂಡೇ ''ಸರಿ ನಾನು ಹೊರಗೆ ಹೋಗಿ ಬರುತ್ತೀನಿ ಫೋನ್ ಮಾಡು'' ಎಂದರು. ಖುಷಿಯಿಂದಲೇ ನಾನು ಗೆಳತಿಯ ಪಕ್ಕ ಕೂತು ಸೀರೆ ನೋಡತೊಡಗಿದೆ. ಅವಳ ಮಗಳು ಸಾರಿಕಾ ಸುಮಾರು ನೂರು ಸೀರೆ ಬಿಚ್ಚಿ ನೋಡಿ ಕಡೆಗೂ ನಾಲ್ಕು ಸೀರೆ ಪಕ್ಕಕ್ಕಿಡಿಸಿ ''ಇವು ನನ್ನ ಮೇಲೆ ಹೇಗೆ ಕಾಣಿಸುತ್ತವೆ ತೋರಿಸಿ'' ಎಂದಳು. ದೊಡ್ಡ ಕನ್ನಡಿಯ ಮುಂದೆ ಮತ್ತು ಇನ್ನೊಂದು ದೊಡ್ಡ ಕನ್ನಡಿಯ ಹಿಂದೆ ಸಾರಿಕಾಳನ್ನು ನಿಲ್ಲಿಸಿ, ಅಂಗಡಿಯ ಹುಡುಗ ಅವಳಿಗೆ ಅವಳುಟ್ಟ ಜೀನ್ಸ್ ಮತ್ತು ಟೀ ಶರ್ಟ್ ಮೇಲೆಯೇ ಸೀರೆ ಉಡಿಸತೊಡಗಿದ. ತಮಾಷೆ ನೋಡಲು ಸಾಕಷ್ಟು ಜನ.

ಸಾರಿಕಾ ಕೈಯಲ್ಲಿ ಮೊಬೈಲ್ ಹಿಡಿದುಕೊಂಡು ಸೆಲ್ಫಿ ಕ್ಲಿಕ್ಕಿಸುತ್ತಾ ನಗುತ್ತಿದ್ದಳು. ಸೀರೆ ಉಡಿಸುವುದು ಮುಗಿಯಿತು. ಈಗ ಸಾರಿಕಾಳ ಗೆಳತಿ ಸಿಯಾ ಅವಳ ಮೊಬೈಲ್‌ನಲ್ಲಿ ಸಾರಿಕಾಳ ವಿವಿಧ ಭಂಗಿಗಳಲ್ಲಿ ಫೋಟೋ ಕ್ಲಿಕ್ಕಿಸಿದಳು. ಈಗ ಸಾರಿಕಾ ಅಮೆರಿಕಾದಲ್ಲಿರುವ ತನ್ನ ಭಾವೀ ಪತಿಗೆ ವೈಫೈ ಮೂಲಕ ಸಂಪರ್ಕಿಸಿ ''ಡಾರ್ಲಿಂಗ್ ಈ ಸೀರೆ ಇಷ್ಟವಾಯಿತೆ. ನಾನು ಹೇಗೆ ಕಾಣಿಸುತ್ತಿದ್ದೀನಿ'' ಎಂದೆಲ್ಲಾ ಜೋರಾಗಿ ಕೇಳಿ, ಸೀರೆ ಬಿಚ್ಚಿಸಿಕೊಂಡು ಬೇರೆ ಸೀರೆ ಉಡಿಸಲು ಅಂಗಡಿಯವನಿಗೆ ಹೇಳಿದಳು. ನಾಲ್ಕೂ ಸೀರೆ ಉಟ್ಟು ಮುಗಿಸಿದ ನಂತರ ತಾಯಿಯ ಹತ್ತಿರ ಬಂದು ''ಅಮ್ಮಾ ಅವಿನಾಶನಿಗೆ ಯಾವ ಸೀರೆಯೂ ಇಷ್ಟವಾಗಲಿಲ್ಲ ಬೇರೆ ನೋಡೋಣ'' ಎಂದಳು. ಇನ್ನೂ ನೂರು ಸೀರೆ ನೋಡಿ ಈಗ ಎಂಟು ಸೀರೆ ತೆಗೆಸಿ ಮತ್ತೆ ಅದೇ ನಾಟಕ ನಡೆಸಿದಳು. ''ಅವಿ ಡಾರ್ಲಿಂಗ್ ನಾನು ಬೇಸತ್ತು ಹೋಗಿದ್ದೀನಿ. ನಿನ್ನ ಶೇರ್ವಾನಿಗೆ ಮ್ಯಾಚ್ ಆಗುವಂತಹ ಸೀರೆ ನಾನು ನೋಡುವ ಬದಲು ನನ್ನ ಸೀರೆಗೆ

ಮ್ಯಾಚ್ ಆಗುವ ಶೇರ್ವಾನಿ ನೀನು ಹೊಲ್ಸಿಕೊ. ಇನ್ನೊಂದು ವಿಚಾರ, ನಮ್ಮ ಅಮ್ಮ ಹೇಗೊ ಅದೇ ಊರಿನಲ್ಲೇ ಇದ್ದಾರೆ ಅವರನ್ನೂ ಕರೆದುಕೊಂಡು ಹೋಗಬಹುದಿತ್ತು ಎಂದು ಹೇಳಿದೆಯಲ್ಲ ಅದು ಹೇಗೆ ಸಾಧ್ಯ? ನೀನು ಈಗಿನಿಂದಲೇ ನನ್ನನ್ನು ಶೋಷಣೆ ಮಾಡುತ್ತಿದ್ದೀಯ'' ಎಂದು ಖಡಾ ಖಂಡಿತವಾಗಿ ಹೇಳಿಬಿಟ್ಟು ''ಅಮ್ಮಾ ನಂಗೆ ಯಾವ ಸೀರೆನೂ ಬೇಡ ನಿಜವಾಗಿ ಹೇಳಬೇಕೆಂದರೆ ಮದುವೆಯೇ ಬೇಡ'' ಎನ್ನುತ್ತಾ ಅಂಗಡಿಯ ಹೊರಗೆ ಹೋಗಿಬಿಟ್ಟಳು. ನನ್ನ ಗೆಳತಿಯ ಕಣ್ಣಲ್ಲೂ ನೀರು. ಸದ್ಯ ನನ್ನ ಯಜಮಾನರು ಅದೇ ಸಮಯಕ್ಕೆ ಹೀರೋ ತರಹ ಒಳಗೆ ಬಂದು ಖಳನಾಯಕನ ತರಹ ಕೆಂಪು ಕಣ್ಣು ಮಾಡಿಕೊಂಡು ''ನಾನು ಮನೆಗೆ ಹೋಗುತ್ತೇನೆ. ನೀನು ಟ್ಯಾಕ್ಸಿಯಲ್ಲಿ ಬಾ'' ಎಂದ ಮೇಲೆ ನಾನೂ ಅಲ್ಲಿಂದ ಜಾರಿಕೊಂಡೆ. ಇನ್ನೂರು ಸೀರೆ ಬಿಚ್ಚಿ ತೋರಿಸಿದ ಅಂಗಡಿಯವರು ''ಇದೆಲ್ಲಾ ವ್ಯವಹಾರ ವ್ಯಾಪಾರದಲ್ಲಿ ನಡೆಯುವುದೇ'' ಎಂದುಕೊಂಡಿರಬೇಕು. ಹೋಗಲಿ ಬಿಡಿ! ನಮಗೆ ಯಾಕೆ?

ಸಾರಿಕಾ ಮದುವೆ ನಡೆಯಿತು. ಅವಳು ಸೀರೆ ಉಡಲಿಲ್ಲ. ಘಾಗರ ಚೋಲಿ ಧರಿಸಿದಳು. ಸಾಯಂಕಾಲ ರಿಸೆಪ್ಷನ್‌ಗೆ ಗೌನ್ ಧರಿಸಿದಳು ಅಳಿಯನಿಗೆಂದು ನನ್ನ ಗೆಳತಿ ತಂದ ಜರತಾರಿ ಮಗುಟ ಮತ್ತು ಶೇರ್ವಾನಿ ಅವಿನಾಶ್ ಹಾಕಿಕೊಳ್ಳಲೇ ಇಲ್ಲ. ಹೆಂಡತಿಯ ಉಡುಪಿಗೆ ಮ್ಯಾಚ್ ಆಗುವ ಡಿಸೈನರ್ ಪೋಷಾಕು ಧರಿಸಿದ. ಅದರ ಬೆಲೆಯೂ ನಾವೇ ತೆತ್ತೆವು ಎಂದು ನನ್ನ ಗೆಳತಿ ಆಮೇಲೆ ಪೇಚಾಡಿಕೊಂಡಳು. ಹುಡುಗನ ತಾಯಿ ಮುನಿಸಿಕೊಂಡೇ ಕೂತಿದ್ದರಂತೆ.

ಅದೇ ಸೀರೆ ಅಂಗಡಿಯ ಜಾಹೀರಾತು ಮುಂದಿನ ವಾರದ ಪತ್ರಿಕೆಯಲ್ಲಿ ಬಂದಿತ್ತು. ಕಂಪ್ಯೂಟರ್ ಮೂಲಕ ನಮಗೆ ಬೇಕಾದಂತಹ ಸೀರೆ ನಾವೇ ಡಿಸೈನ್ ಮಾಡಿಕೊಂಡು ಅದಕ್ಕೆ ಸರಿ ಹೊಂದುವ ಶೇರ್ವಾನಿ ಕೂಡ ಡಿಸೈನ್ ಮಾಡಿ ಕೊಟ್ಟರೆ ಅಂಗಡಿಯವರು ತಯಾರಿಸಿ ಕೊಡುವರಂತೆ. ಎಂತಹ ತಂತ್ರ ಯೋಜನೆ ನೋಡಿ!

ಮೊನ್ನೆ ನನ್ನ ಇನ್ನೊಬ್ಬ ಗೆಳತಿ ಬಂದಿದ್ದಳು. ತಾನು ಈಗ ಬರೀ ಪಂಜಾಬಿ ಸೂಟ್ ಧರಿಸುತ್ತಿರುವೆ ಎಂದೂ, ಸೀರೆ ಈಗ ಯಾರಿಗೂ ಬೇಡ ಎಂದಳು. ನನಗೇನೋ ಈ ಮಾತು ಸರಿಯಲ್ಲವೆಸಿತು. ಬೆಂಗಳೂರು, ಚೆನ್ನೈ ಅಥವಾ ಬೇರೆ ಬೇರೆ ಯಾವ ಚಿಕ್ಕ ದೊಡ್ಡ ಊರಿಗೆ ಹೋಗಿ ಹೋಗಿ ನೋಡಿದರೆ ಎಲ್ಲ ಸೀರೆ ಅಂಗಡಿಗಳಲ್ಲೂ ತುಂಬಿದ ಮಹಿಳೆಯರು. ದೀಪಾವಳಿ ಯುಗಾದಿ ಗೌರಿ ಹಬ್ಬಗಳ ಭರ್ಜರಿ ಸೇಲ್ ನಡೆಸುವಾಗ ಮಹಿಳೆಯರ ಸಡಗರ ನೋಡಲೇ ಬೇಕು. ಇನ್ನೊಂದು ಕಿವಿ ಮಾತು ಹೇಳುತ್ತೇನೆ. ಕೇಳಿ ಭಾರತೀಯ ಮಹಿಳೆಯರು ಬಹುತೇಕ ಸ್ಥೂಲ ದೇಹದವರೇ. ಒಂದು ಸೀರೆ ಖರೀದಿಸಿದರೆ ಇಪ್ಪತ್ತು ವರ್ಷ ಉಡಬಹುದು. ಬೇರೆ ಪೋಷಾಕಿನಲ್ಲಿ ಆ ಅನುಕೂಲವಿಲ್ಲ. ನಮ್ಮ ನಂತರ ಹೆಣ್ಣು ಮಕ್ಕಳು ಯಾವಾಗಲಾದರೊಮ್ಮೆ ಉಡಬಹುದು. ಸೀರೆ ಬರೀ ವಸ್ತ್ರ ಸಂಸ್ಕೃತಿಯಲ್ಲ ಅದರಲ್ಲಿ ಮಹಿಳೆಯರ ಸಂತಸವಿದೆ, ಸಂಭ್ರಮವಿದೆ ಮತ್ತು ಸಂಸ್ಕೃತಿಯಿದೆ. ಏನಾದರೇನಂತೆ ಸೀರೆ ಖರೀದಿ ಎಲ್ಲಾ ಮಹಿಳೆಯರಿಗೂ ಸಂತಸ ತರಿಸುವ ಒಂದು ಚಟುವಟಿಕೆ ಅಂದಿಗೂ ಇಂದಿಗೂ ಅದೇ ಕಥೆ!

# ವೆಂಕಟರಮಣಪ್ಪನ ದೋಸೆ ಪ್ರಸಂಗ

**- ಡಾ. ಎ. ಕುಮಾರ್**

ಅವನು ಇನ್ನೂ ಕೆಲಸಕ್ಕೆ ಸೇರಿದ ಹೊಸದು. ಜೀವನದಲ್ಲಿ ಮೊದಲ ಬಾರಿಗೆ ಸಂಬಂಧಿಕರಿಂದ ದೂರವಾಗಿ ಒಂಟಿಯಾಗಿರಬೇಕಾಗಿದ್ದ ಪರಿಸ್ಥಿತಿಯನ್ನು ಎದುರಿಸಿದ್ದ. ಹೋಟೆಲಿನ ಊಟ, ತಿಂಡಿ, ಕೆಲಸದ ಜವಾಬ್ದಾರಿ, ಹೊಸದಾಗಿ ಸಮಾನ ಹಿತಾಸಕ್ತಿಯುಳ್ಳವರನ್ನು ಹುಡುಕಿ ಸ್ನೇಹವನ್ನು ಬೆಳೆಸಿಕೊಳ್ಳುವ ಅಗತ್ಯಗಳಿಗೆ ಇನ್ನೂ ಹೊಂದಿಕೊಳ್ಳುತ್ತಿದ್ದ. ಆ ತಾಲ್ಲೂಕಿನಲ್ಲಿದ್ದ ಐದಾರು ಜನ ಗೆಜೆಟೆಡ್ ಅಧಿಕಾರಿಗಳಲ್ಲಿ ತಾನೇ ಅತ್ಯಂತ ಸಣ್ಣವನೆಂದು ಹೆಮ್ಮೆಯಿಂದ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳುತ್ತಿದ್ದ.

ವೆಂಕಟರಮಣಪ್ಪ ಆ ಊರಿನಲ್ಲಿ ಸ್ವಲ್ಪಮಟ್ಟಿಗೆ ಅನುಕೂಲಸ್ಥನಾಗಿದ್ದ ರೈತ. ಊರಿಗೆ ಸ್ವಲ್ಪ ದೂರದಲ್ಲಿದ್ದ ಹಿರಿಯರಿಂದ ಬಂದಿದ್ದ ಜಮೀನಿನ ಮಾಲೀಕ. ಮಳೆರಾಯನ ಕೃಪಾದೃಷ್ಟಿಯಿಂದ ಸಾಕಷ್ಟು ಮಳೆಯಾದ ವರ್ಷ ಚೆನ್ನಾಗಿ ಕಡಲೆಕಾಯಿ ಬೆಳೆದು ಆ ವರ್ಷದ ಮಟ್ಟಿಗೆ ಸಾಹುಕಾರನೂ ಆಗುತ್ತಿದ್ದ. ಹೀಗಿದ್ದಾಗ ವೆಂಕಟರಮಣಪ್ಪನಿಗೆ ಈ ನಮ್ಮ ತರುಣ ಅಧಿಕಾರಿಯಿಂದ ಏನೋ ಕೆಲಸವಾಗಬೇಕಾಗಿ ಬಂತು. ನೇರ ಪರಿಚಯವಿನ್ನೂ ಇಲ್ಲದ್ದರಿಂದ ಅವರಿವರನ್ನು ವಿಚಾರಿಸಿ ಈತನ ಬಗ್ಗೆ ಒಳ್ಳೆಯ ಮಾತನ್ನೇ ಕೇಳಿ, ತನ್ನ ಗುರುತಿನವರಿಂದ ಸ್ವಲ್ಪ ಹೇಳಿಸಿ ಅನಂತರ ತಾನು ಖುದ್ದಾಗಿ ಹೋಗಿ ಭೇಟಿ ಮಾಡಿದ. ಅವನಿಂದ ತನಗಾಗಬೇಕಾಗಿದ್ದ ಕೆಲಸದ ಬಗ್ಗೆಯೂ ಕೇಳಿಕೊಂಡ. ನಮ್ಮ ಕಥಾನಾಯಕನಿಗೆ ಊರ ಜನರಿಂದ ತಾನು ಒಳ್ಳೆಯವನೆಂದು ಹೇಳಿಸಿಕೊಳ್ಳುವ ಆತುರ ಹಾಗೂ ಅಗತ್ಯವಿತ್ತು. ಆದ್ದರಿಂದ ತಕ್ಷಣ ವೆಂಕಟರಮಣಪ್ಪನ ಕೆಲಸವನ್ನು ಈಗಿನವರು ಮಾಡುವಂತೆ ಏನೋ ಸಬೂಬನ್ನು ಹೇಳಿ ಮುಂದೂಡದೆ ಸಮರ್ಪಕವಾಗಿ ಮಾಡಿಕೊಟ್ಟ.

ಬಹಳ ಕಷ್ಟವಾಗುತ್ತದೆ ಎಂದುಕೊಂಡಿದ್ದ ತನ್ನ ಕೆಲಸ ಇಷ್ಟು ಸುಲಭವಾಗಿ ಹಾಗೂ ಸಮಾಧಾನಕರವಾಗಿ ಮುಗಿದಿದ್ದಕ್ಕಾಗಿ ವೆಂಕಟರಮಣಪ್ಪ ದೊಡ್ಡ ನಿಟ್ಟುಸಿರು ಬಿಟ್ಟ. ಈಗ ಅವನ ಚಿಂತೆ ಈ ಅಧಿಕಾರಿಯ ಋಣದ ಭಾರವನ್ನು ಇಳಿಸಿಕೊಳ್ಳುವುದು ಹೇಗೆಂದು. ಸ್ವಲ್ಪ ಖಡಕ್ಕಾದ ಆಸಾಮಿ ಮತ್ತು ನಿಷ್ಠುರಸ್ತ ಎಂದು ಕೇಳಿ ಬಂದದ್ದರಿಂದ ತನ್ನ ಕೈಲಾದಷ್ಟು ಹಣವನ್ನು ಟೇಬಲ್ಲಿನ ಮೇಲಿಂದಾಗಲಿ, ಕೆಳಗಿನಿಂದಾಗಲೀ ತಲುಪಿಸಿ ಋಣಮುಕ್ತನಾಗಲು ಸಾಧ್ಯವಿಲ್ಲದ ಕಾರಣ ಬೇರೆ ಯಾವ ರೀತಿ ಮಾಡಬಹುದೆಂದು ತನ್ನ ಆಪ್ತರ ಜೊತೆ ಸಮಾಲೋಚಿಸಿದ. ಸುಲಭವಾದ ಉಪಾಯವೆಂದರೆ ಒಳ್ಳೆಯ ಊಟವನ್ನು ಏರ್ಪಡಿಸಿ ಈತನನ್ನು ಹಾಗೂ ಈತನ ಮಿತ್ರರನ್ನು ಆಹ್ವಾನಿಸಬಹುದು ಎಂಬ ವಿಚಾರ ಹೊರಟಿತು. ಆಪ್ತರ ಅನುಮೋದನೆಯೂ ದೊರಕಿತು. ಮುಂದಿನ ಹುಣ್ಣಿಮೆಯ ರಾತ್ರಿ ತನ್ನ ಹೊಲದ ಮನೆಯಲ್ಲಿಯೇ ಇದನ್ನು ಕಾರ್ಯಾಚರಣೆಗೆ ತರಬೇಕೆಂದು ನಿರ್ಧಾರವಾಯಿತು. ಅದಕ್ಕಾಗಿ ಮಾಡಬೇಕಾದ ಸಿದ್ಧತೆಗಳನ್ನು ಆರಂಭಿಸಿದ. ತಾನೇ ಒಂದು ದಿನ ಕಥಾನಾಯಕನನ್ನು ಭೇಟಿಯಾಗಿ ತನ್ನ ಆಹ್ವಾನವನ್ನು ಮುಂದಿಟ್ಟ. ಹೆಚ್ಚಿನ ಅಡೆತಡೆಗಳಿಲ್ಲದೆ ಒಪ್ಪಿಗೆಯೂ

ದೊರಕಿತು. ಆರೇಳು ಜನ ಇಷ್ಟಮಿತ್ರರೊಡನೆ ತಾನು ಬಂದು ಊಟದಲ್ಲಿ ಪಾಲ್ಗೊಳ್ಳಲು ಯಾವ ತೊಂದರೆಯೂ ಇಲ್ಲವೆಂದು ಹಸಿರು ಬಾವುಟದ ಸೂಚನೆ ಸಿಕ್ಕಿತು.

ನಮ್ಮ ಕಥಾನಾಯಕ ಆಗಿನ್ನೂ ಬ್ರಹ್ಮಚಾರಿ. ಆಗಿನ ಅವನ ಆತ್ಮೀಯ ಸ್ನೇಹಿತರಲ್ಲಿ ಕೆಲವರು ಸ್ಥಳೀಯರು, ಇನ್ನು ಕೆಲವರು ಹೊರ ಊರುಗಳಿಂದ ಬಂದು ಇಲ್ಲಿನ ಬ್ಯಾಂಕುಗಳಲ್ಲಿ, ಶಾಲೆಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದವರು. ಕೆಲವರು ಯಾವುದೇ ಕೆಲಸ ಮಾಡುವ ಅಗತ್ಯವಿಲ್ಲದೆ ತಮ್ಮ ಹಿರಿಯರಿಂದ ಬಂದ ಆಸ್ತಿಯ ಬಲದ ಮೇಲೆ ಸುಖ ಜೀವನ ನಡೆಸುತ್ತಿದ್ದ ಅನುಕೂಲವಂತರು. ಇವರ ಹೆಚ್ಚಿನ ಸಮಯ ಇಸ್ಪೀಟಾಟದಲ್ಲಿ ಕಳೆಯುತ್ತಿತ್ತು. ಈ ಸ್ನೇಹಿತರ ಗುಂಪಿನಲ್ಲೂ ಕಥಾನಾಯಕನೇ ಎಲ್ಲರಿಗಿಂತ ಕಿರಿಯವನು. ಇದರಿಂದ ಅವನ ಜನಪ್ರಿಯತೆ ಏನೂ ಕುಂದಿರಲಿಲ್ಲ.

ನಿಗದಿಯಾದ ದಿನ ಸೂರ್ಯಾಸ್ತವಾದ ಮೇಲೆ ಗೆಳೆಯರೆಲ್ಲ ಒಂದು ಕಡೆ ಕಲೆತು ನಿಧಾನವಾಗಿ ವಂಕಟರಮಣಪ್ಪನ ತೋಟದ ಕಡೆಗೆ ಹರಟೆ ಹೊಡೆಯುತ್ತ ಕಾಲು ಹಾಕಿದರು. ಆಗತಾನೇ ಚಂದ್ರೋದಯವಾಗುತ್ತಿತ್ತು. ಎಲ್ಲ ಕಡೆಯೂ ಹಾಲು ಚೆಲ್ಲಿದಂತೆ ಬೆಳಕು. ಅಕ್ಕ ಪಕ್ಕದ ಗುಡ್ಡ ಬೆಟ್ಟಗಳಿಂದ ಆಗಾಗ ನರಿಗಳು ಊಳಿಡುವ ಶಬ್ದ ಕೇಳಿಸುತ್ತಿತ್ತು. ಹೊಲಗಳಲ್ಲಿ ಕಡಲೆಕಾಯಿ ಸಾಕಷ್ಟು ಬಲಿತು ಅದನ್ನು ತಿನ್ನಲು ಬರುತ್ತಿದ್ದ ಮೊಲಗಳ ಬೇಟೆಗೆ ನರಿಗಳು ಸಿದ್ದವಾಗುತ್ತಿದ್ದವು. ಚಳಿಗಾಲದ ಆರಂಭದ ದಿನಗಳಾದ್ದರಿಂದ ತಣ್ಣನೆಯ ಗಾಳಿ ಬೀಸಿ ಮೈ ನವಿರಾಗಿ ನಡುಗುವಂತಾಗುತ್ತಿತ್ತು.

ತನ್ನ ಹೊಲದ ಹತ್ತಿರ ರಸ್ತೆಯ ಬದಿಯಲ್ಲಿ ಇವರಿಗಾಗಿ ಕಾಯುತ್ತಿದ್ದ ವೆಂಕಟರಮಣಪ್ಪ. ಅಲ್ಲಿ ಹಾವುಗಳ ಓಡಾಟ ಜಾಸ್ತಿಯಾದದ್ದರಿಂದ ಒಂದು ಕೈ ದೀಪದ ಸಹಾಯದಿಂದ ಹಾದಿಗೆ ಬೆಳಕನ್ನು ತೋರಿಸುತ್ತ ತನ್ನ ಹೊಲಕ್ಕೆ ಎಲ್ಲರನ್ನೂ ಕರೆದುಕೊಂಡು ಹೋದ. ಇವರ ಆಗಮನವನ್ನೇ ಕಾಯುತ್ತಿದ್ದ ಕೆಲಸದವರು ಒಣ ಹುಲ್ಲು, ತರಗೆಲೆ ಮುಂತಾದುವನ್ನು ಕಲೆಹಾಕಿ ಚಳಿ ಕಾಯಿಸಿಕೊಳ್ಳಲು ಬೆಂಕಿಯನ್ನು ಹೊತ್ತಿಸಿದರು. ಬಲಿತ ಕಡಲೆ ಗಿಡಗಳ ಸುತ್ತಲೂ ನೆಲವನ್ನು ಕಾಲಿನಿಂದ ಬಲವಾಗಿ ಒದ್ದು ನೆಲ ಸಡಲಿಸಿ, ಕಾಯಿ ಸಮೇತ ಗಿಡಗಳನ್ನು ನಿಧಾನವಾಗಿ ಕಿತ್ತು, ಚೆನ್ನಾಗಿ ಒದರಿ, ಅದೇ ಬೆಂಕಿಯಲ್ಲಿಯೇ ಹಿತವಾಗಿ ಸುಟ್ಟು ಅತಿಥಿಗಳಿಗೆ ನೀಡಿದರು. ಇದರ ಜೊತೆಗೆ ನೆಂಚಿಕೊಳ್ಳಲು ಉಪ್ಪಿನ ಹರಳು ಹಾಗೂ ಹಸೀ ಮೆಣಸಿನಕಾಯಿ. ತಿಳೀ ರಾತ್ರಿಯ ಸ್ವಲ್ಪ ಮೈ ನಡುಗಿಸುವ ಚಳಿಗೆ ಆ ಬೆಂಕಿಯ ಕಾವೂ, ಸುಟ್ಟ ಕಡಲೆ ಕಾಯಿ, ಉಪ್ಪು ಮತ್ತು ಹಸೀ ಮೆಣಸಿನಕಾಯಿಯ ಹೊಸ ರುಚಿಯೂ ಬಹಳ ಸುಖಕರವಾಗಿದ್ದವು. ಇಷ್ಟೆಲ್ಲ ಒಂದು ಕಡೆ ನಡೆಯುತ್ತಿರುವಾಗ ಊಟದ ಸಿದ್ಧತೆ ಇನ್ನೊಂದು ಕಡೆ ನಡೆಯುತ್ತಿತ್ತು. ಹಸಿ ಕಡಲೆ ಕಾಯಿ ತಿಂದು ಸಾಕಾಗುತ್ತಿದ್ದಂತೆಯೇ ಸಣ್ಣದಾಗಿ ತೀರ್ಥ ಸೇವನೆ, ಅದರೊಂದಿಗೆ ಕುರುಕುಲುಗಳ ಸಮಾರಾಧನೆ ಮೊದಲಾಯಿತು. ಇದರ ಅಭ್ಯಾಸ ಇಲ್ಲದವರಿಗೆ ಇದರ ಸೇವನೆಯಲ್ಲಿ ನಿರತರಾಗಿದ್ದವರನ್ನು ನೋಡಿಕೊಳ್ಳುವ ಹಾಗೂ ಅವರ ಲೋಟಗಳನ್ನು ಆಗಾಗ ತುಂಬಿಸುವ ಹೊಣೆಗಾರಿಕೆಯನ್ನು ಹಚ್ಚಲಾಯಿತು. ಎಲ್ಲ ತಯಾರಿ ಮುಗಿದು ಊಟಕ್ಕೆ ಕೈ ಹಚ್ಚಿದಾಗ ರಾತ್ರಿ ಸುಮಾರು ಹತ್ತು ಘಂಟೆಯಾಗಿತ್ತು. ಅಂದಿನ ಊಟದ ವಿಶೇಷ ರಾಗಿ ದೋಸೆ ಮತ್ತು ಸ್ಥಳೀಯ ಭಾಷೆಯಲ್ಲಿ ಹೇಳುವಂತೆ ನಂಜಲಿ. ನಿಧಾನವಾಗಿ ಬೇಡದ ಹಾಗೂ ಬೇಕಾದ ಎಲ್ಲ ವಿಷಯಗಳನ್ನೂ ವಿವರವಾಗಿ ಚರ್ಚಿಸುತ್ತ

ಮಧ್ಯೆ ಮಧ್ಯೆ ಪಾನೀಯಂ ಸಮರ್ಪಯಾಮಿ ಮಾಡುತ್ತ ಆ ತಂಪಾದ ಬೆಳದಿಂಗಳಿನಲ್ಲಿ ಕೂತು ಒಬ್ಬೊಬ್ಬರೂ ಏನೇನನ್ನು ಎಷ್ಟೆಷ್ಟು ತಿಂದರೋ ಲೆಕ್ಕವಿಟ್ಟವರಾರು?

ಕಡೆಗೂ ಮಿತ್ರ ವೃಂದದ ಊಟ ಮುಗಿದಾಗ ಮಧ್ಯ ರಾತ್ರಿ ದಾಟಿತ್ತು. ಮುಂದಿನ ಕಾರ್ಯಕ್ರಮ ತಾಂಬೂಲ ಸೇವನೆ ಮತ್ತು ಸಿಗರೇಟನ್ನು ಸೇದುವುದು. ಅಷ್ಟು ಹೊತ್ತೂ ಕೂತಿದ್ದು ಜೋಮು ಹಿಡಿದಿದ್ದ ಕಾಲುಗಳನ್ನು ಸರಿಪಡಿಸಿಕೊಳ್ಳಲು ಅಲ್ಲೇ ಕಾಲಾಡಿಸುತ್ತಿದ್ದವರಿಗೆ ಪಕ್ಕದಲ್ಲೇ ಇದ್ದ ಕಲ್ಲು ಕಟ್ಟಡದ ದೊಡ್ಡ ಭಾವಿ ಮತ್ತು ಅದಕ್ಕೆ ಹೊಂದಿಕೊಂಡಂತಿದ್ದ ಪಂಪಿನ ಕೋಣೆ ಕಣ್ಣಿಗೆ ಬಿದ್ದಿತು. ಇದೇನೂ ಆಶ್ಚರ್ಯಕರವಾದ ವಿಷಯವಲ್ಲದೆ ಇದ್ದರೂ ನಮ್ಮ ಗೆಳೆಯರ ಆಗಿನ ಮೂಡಿನಲ್ಲಿ ಅದು ತಾಜ್ ಮಹಲ್ಲಿನಂತೆ ತಕ್ಷಣ ಪರೀಕ್ಷಿಸಲೇ ಬೇಕಾದ ವಿಷಯವಾಯಿತು. ಕೂಡಲೇ ಮೂವರು ಮಿತ್ರರು ಆ ಪಂಪಿನ ಕೋಣೆಯ ಹಳೆಯ ಬಾಗಿಲನ್ನು ಕಿರ್ರೆನ್ನಿಸುತ್ತ ತಳ್ಳಿಕೊಂಡು ಸಣ್ಣದಾದ ಆ ಕೋಣೆಯೊಳಕ್ಕೆ ಇಳಿದೂ ಬಿಟ್ಟರು. ಒಳಗೆ ಹೆಚ್ಚಿನ ಸ್ಥಳವಿಲ್ಲದ್ದರಿಂದ ಎಲ್ಲರೂ ಒಳಗೆ ಹೋಗಲು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಎಲ್ಲಿಂದಲೋ ಮೂರು ನಾಲ್ಕು ಅಡಿ ಉದ್ದದ ಹಾವೊಂದು ಮೆಲ್ಲನೆ ಹರಿಯುತ್ತ ಬಂದು ಬಾಗಿಲು ತೆರೆದಿದ್ದ ಆ ಪಂಪು ಕೋಣೆಯೊಳಕ್ಕೆ ಒಂದು ಮೂಲೆಯಿಂದ ತಾನೂ ಇಳಿಯಲು ಮೊದಲು ಮಾಡಿತು. ಹೊರಗಡೆ ಉಳಿದಿದ್ದ ಸ್ನೇಹಿತರಲ್ಲಿ ಒಬ್ಬನ ದೃಷ್ಟಿಗೆ ಇದು ಬಿದ್ದಿತು. ಆ ಹಾವು ವಿಷಪೂರಿತವಾದ ನಾಗರಹಾವೇ ಇರಬೇಕೆಂದೂ ಬೇರೇನೂ ಆಗಿರಲಿಕ್ಕೆ ಸಾಧ್ಯವೇ ಇಲ್ಲವೆಂದೂ ತೀರ್ಮಾನಿಸಿದ. ತಕ್ಷಣವೇ ಪಂಪು ಕೋಣೆಯ ಒಳಗಿದ್ದವರ ಜೀವ ರಕ್ಷಣೆ ಮಾಡುವ ಉದ್ದೇಶದಿಂದ ಈ ವಿಷಯವನ್ನು ಅವರಿಗೆ ತಿಳಿಸಲು ದೊಡ್ಡ ಗಂಟಲಿನಿಂದ ಚೀರಿಕೊಂಡ. ಒಳಗಿದ್ದವರಿಗೆ ಆ ಕೂಗಾಟವನ್ನು ಕೇಳಿಸಿದ ತಕ್ಷಣ ದೆವ್ವ ಮೈಯಲ್ಲಿ ಹೊಕ್ಕಹಾಗಾಗಿರಬೇಕು. ಹಿಂದೆ ಮುಂದೆ ಯೋಚಿಸದೆ ಒಳಗಿನಿಂದ ಬಿರುಸಾಗಿ ಬಾಗಿಲನ್ನು ಮುಚ್ಚಿಬಿಟ್ಟರು. ಇದರ ಪರಿಣಾಮವೆಂದರೆ ಆ ಪಾಪದ ಹಾವಿನ ತಲೆ ಬಾಗಿಲಿನ ಒಳಗೂ ದೇಹ ಹೊರಗೂ ಸಿಕ್ಕಿ ಕೊಂಡಿತು. ಆ ಬಾಗಿಲು ಹಳೆಯದಾಗಿದ್ದು, ಬಿಸಿಲಿಗೆ ಒಣಗಿ, ಮಳೆಗೆ ನೆನೆದು ಸಡಿಲವಾಗಿತ್ತು. ಆದ್ದರಿಂದ ಆ ಹಾವಿನ ಜೀವ ಹೋಗಲಿಲ್ಲ. ಸುಮ್ಮನೆ ಅದು ನಿಶ್ಚೇಷ್ಟಿತವಾಯಿತಷ್ಟೆ. ಒಳಗಿಳಿದಿದ್ದ ಮೂರೂ ಮಂದಿ ಒಳಗಡೆಯೇ ಸಿಕ್ಕಿಕೊಂಡರು. ಹೊರಗೆ ಬರುವಂತಿಲ್ಲ, ಒಳಗಡೆ ಬಹಳ ಹೊತ್ತು ಇರುವಂತಿಲ್ಲ. ಈಚೆ ಕಡೆಗಿದ್ದ ಆ ಹಾವಿನ ದೇಹ ಶೀರ್ಷಾಸನ ಹಾಕಿದಂತೆ ಆ ಬಾಗಿಲಿನ ಎತ್ತರಕ್ಕೂ ಎದ್ದು ನಿಂತಿತು.

ಕೊನೆಗೊಮ್ಮೆ ಒಳಗಿದ್ದ ಮೂವರೂ ಧೈರ್ಯಮಾಡಿ ಇದ್ದಕ್ಕಿದ್ದಂತೆ ಬಾಗಿಲನ್ನು ತೆರೆದು ಗಟ್ಟಿಯಾಗಿ ಕಿರಿಚಿಕೊಳ್ಳುತ್ತ ಬೀಜಿಂಗ್ ಒಲಂಪಿಕ್ಸ್‌ನ ಲಾಂಗ್‌ಜಂಪ್ ಕ್ರೀಡಾಪಟುಗಳಂತೆ ಒಂದೇ ನೆಗೆತಕ್ಕೆ ಹೊರಗೆ ಹಾರಿದರು. ಅವರು ಬಾಗಿಲು ತೆಗೆಯುತ್ತಲೇ ಅದನ್ನೇ ಕಾಯುತ್ತಿದ್ದ ಆ ಹಾವು ಮೆಲ್ಲನೆ ತನ್ನ ತಲೆಯನ್ನು ಹಿಂದೆಳೆದುಕೊಂಡು ಸ್ವಲ್ಪ ಹೊತ್ತಿನ ಹಿಂದೆ ತಾನು ನುಂಗಿದ್ದ ಒಂದು ದೊಡ್ಡ ಕಪ್ಪೆಯನ್ನು ವಾಂತಿ ಮಾಡಿಕೊಂಡಿತು. ಇನ್ನೂ ಜೀವದಿಂದಿದ್ದ ಆ ಕಪ್ಪೆ ಮರು ಜೀವ ಸಿಕ್ಕಿದ ತನ್ನ ಅದೃಷ್ಟಕ್ಕೆ ತಾನೇ ಆಶ್ಚರ್ಯಪಡುತ್ತ ಅಲ್ಲಿಂದ

ಒಂದೇ ಹಾರಿಗೆ ಪಕ್ಕದಲ್ಲೇ ಇದ್ದ ಬಾವಿಯ ನೀರಿಗೆ ಎಗರಿಕೊಂಡಿತು. ತಾನು ನುಂಗಿದ್ದದ್ದು ಹೊರಗೆ ಬಂದದ್ದರಿಂದ ಸ್ವಲ್ಪ ಚಟುವಟಿಕೆ ಪಡೆದ ಹಾವು ತನ್ನ ಜೀವ ಉಳಿಸಿಕೊಳ್ಳಲು ಆತುರಾತುರವಾಗಿ ಗಿಡಗಳ ಮಧ್ಯೆ ಹರಿದು ಮಾಯವಾಯಿತು.

ಇಷ್ಟೆಲ್ಲ ಒಂದೆರಡು ನಿಮಿಷಗಳಲ್ಲೇ ನಡೆದು ಹೋದರೂ ಇದರಲ್ಲಿ ಪಾಲ್ಗೊಂಡಿದ್ದ ಗೆಳೆಯರಿಗೆ ತಮ್ಮ ತಮ್ಮ ಯೋಚನಾಶಕ್ತಿಯನ್ನು ಹಿಂದೆ ಪಡೆಯಲು ಸಾಕಷ್ಟು ಸಮಯವೇ ಬೇಕಾಯಿತು. ಕೊನೆಗೊಮ್ಮೆ ಎಚ್ಚೆತ್ತುಕೊಂಡ ಸ್ನೇಹಿತರೆಲ್ಲರೂ ತಮ್ಮ ಗಡಿಯಾರಗಳನ್ನು ನೋಡಿಕೊಳ್ಳುತ್ತ ತಮ್ಮ ಹೊಟ್ಟೆಗಳಿಗೂ ಬುದ್ಧಿಗಳಿಗೂ ಸಾಕಷ್ಟು ಆಹಾರವನ್ನು ಒದಗಿಸಿಕೊಟ್ಟಿದ್ದ ವೆಂಕಟರಮಣಪ್ಪನಿಗೆ ತಮ್ಮ ಹೃತ್ಪೂರ್ವಕ ವಂದನೆಗಳನ್ನು ತಿಳಿಸಿ, ಈ ಹೊಸ ತಿಳುವಳಿಕೆಯಿಂದ ಬಂದಂತಹ ಅತೀ ಎಚ್ಚರಿಕೆಯಿಂದ ಹೆಜ್ಜೆಯ ಮೇಲೆ ಹಜ್ಜೆಯಿಡುತ್ತ ಕಾಲುದಾರಿಯಿಂದ ಕಣ್ಣುಗಳನ್ನು ಅತ್ತಿತ್ತ ಕದಲಿಸದೆ ತಮ್ಮ ತಮ್ಮ ಯೋಚನೆಗಳಲ್ಲಿಯೇ ಮಗ್ನರಾಗಿ, ಮಾತನಾಡುವುದನ್ನೂ ಮರೆತವರಂತೆ ಮೂಕರಾಗಿ ತಮ್ಮ ಮನೆಗಳನ್ನು ಸೇರಿ ದೀರ್ಘವಾದ ನಿಟ್ಟುಸಿರುಗಳನ್ನು ಬಿಟ್ಟರು.

ಎನ್ನುವಲ್ಲಿಗೆ ವೆಂಕಟರಮಣಪ್ಪನ ದೋಸೆ ಪ್ರಸಂಗ ಮುಕ್ತಾಯವಾಯಿತು.

---

## ಪುಸ್ತಕ ಬಿಡುಗಡೆ ಸಮಾರಂಭ

ಅಪರಂಜಿಯ ಹಿರಿಯ ಲೇಖಕರಾದ ಹೆಚ್.ಆರ್. ಹನುಮಂತರಾವ್ ಅವರು ಬರೆದಿರುವ 'ಬರಹಗಾರನ ಬವಣೆ' ಪುಸ್ತಕ 26-6-2016 ರಂದು ಬಸವನಗುಡಿಯ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ವುನೋರವು ಸಭಾಂಗಣದಲ್ಲಿ ನಡೆಯಿತು. ಹನುಮಂತರಾವ್ ಅವರ ಕುಟುಂಬಸ್ತರು, ಆಪ್ತರು ಮತ್ತು ಅನೇಕ ಸಭಿಕರು ನೆರೆದಿದ್ದ ಸಮಾರಂಭದಲ್ಲಿ ಎಂ. ಶಿವಕುಮಾರ್, ಬೇಲೂರು ರಾಮಮೂರ್ತಿ, ಎನ್.ಎಸ್.ವಿ. ಪ್ರಸಾದ್ ಮತ್ತು ಪ್ರಕಾಶಕರಾದ ಸತೀಶ್ ಪ್ರಭಾಕರ್ ಅವರ ಸಮ್ಮುಖದಲ್ಲಿ ಪುಸ್ತಕ ಬಿಡುಗಡೆ ನಡೆಯಿತು. ತುಂಬಾ ಆಪ್ತವಾಗಿ ನಡೆದ ಸಮಾರಂಭದಲ್ಲಿ ಎಲ್ಲರೂ ಅತ್ಯಂತ ಪ್ರೀತಿಯ ಮಾತುಗಳನ್ನು ಆಡಿದರು. ಹನುಮಂತರಾವ್ ಅವರು ತಾವು ಬರವಣಿಗೆಯ ಕ್ಷೇತ್ರಕ್ಕೆ ಕಾಲಿಟ್ಟ ದಿನಗಳನ್ನು ನೆನೆದರು.

ಶುಂಠಿ ಕಷಾಯ

# ಬಿತ್ತಿದಂತೆ ಬೆಳೆ

**- ಬೇಲೂರು ರಾಮಮೂರ್ತಿ**

ಅಮ್ಮನಷ್ಟೇ ಅಥವಾ ಅಮ್ಮನಿಗಿಂತ ಹೆಚ್ಚು ಪ್ರೀತಿ ತೋರಿಸುವವರು ಅಜ್ಜಿಯಂದಿರು. ಕೆಲವು ಮೊಮ್ಮಕ್ಕಳ ಪುಣ್ಯ ಅವರಿಗೆ ಇಬ್ಬಿಬ್ಬರು ಅಜ್ಜ ಅಜ್ಜಿ ಇರುತ್ತಾರೆ. ಇನ್ನು ಕೆಲವು ಮಕ್ಕಳಿಗೆ ಒಬ್ಬರಾದರೂ ಇರುತ್ತಾರೆ. ಇನ್ನೂ ಕೆಲವು ಮಕ್ಕಳಿಗೆ ಒಬ್ಬರೂ ಇರೋದಿಲ್ಲ.

ಪುಟ್ಟುಗೆ ಅಮ್ಮನಷ್ಟೇ ಮತ್ತು ಎಷ್ಟೋ ವೇಳೆ ಅಮ್ಮನಿಗಿಂತ ಹೆಚ್ಚಾಗಿ ಪ್ರೀತಿಸುವ ಒಂದೇ ಅಜ್ಜಿ ಇದ್ದರು. ಪುಟ್ಟು ಸೇರಿದ ಪ್ರೈಮರಿ ಶಾಲೆ ಇದ್ದುದು ಅವನ ಅಜ್ಜಿಯ ಮನೆ ಪಕ್ಕದಲ್ಲೇ. ಒಂದು ಹಳೆಯ ದೇವಸ್ಥಾನದ ಪಕ್ಕದ ಬೀದಿ. ಪುಟ್ಟು ಮನೆಯಿಂದ ಬೆಳಗ್ಗೆ ಏಳೂವರೆಗೆ ಶಾಲೆಗೆ ಬರೋನು. ಅವರ ಅಮ್ಮ ಅವನನ್ನು ಶಾಲೆಯವರೆಗೂ ಬಿಟ್ಟು ಹೋಗೋಳು. ಸರಿಯಾಗಿ ಒಂಭತ್ತೂವರೆಗೆ ತಿಂಡಿಗೆ ಅಂತ ಬೆಲ್ ಹೊಡೆಯೋರು. ಪುಟ್ಟು ಶಾಲೆಗೆ ಸೇರಿದಾಗಲೇ ನಿರ್ಧಾರವಾಗಿತ್ತು ಪುಟ್ಟು ತಿಂಡಿ ಅಜ್ಜಿ ಮನೇಲಿ ಅಂತ. ಪ್ರತೀ ದಿನ ಶಾಲೆಯ ಗಂಟೆ ಬಾರಿಸಿದೊಡನೆ ಪುಟ್ಟು ಅಜ್ಜಿ ಮನೆಗೆ ಓಡುತ್ತಿದ್ದ. ಗಂಟೆ ಸದ್ದು ಕೇಳಿದವಳೇ ಅಜ್ಜಿ ಉಪ್ಪಿಟ್ಟು, ಅವಲಕ್ಕಿ, ಇಡ್ಲಿ, ದೋಸೆ ಹೀಗೆ ಯಾವುದೇ ತಿಂಡಿ ಮಾಡಿದ್ದರೂ ಅವುಗಳನ್ನು ಹೆಚ್ಚು ಬಿಸಿಯಾಗಿರದಂತೆ ನೋಡಿಕೊಂಡು ತಟ್ಟೆಗೆ ಹಾಕಿ ಸಿದ್ದ ಮಾಡಿರುತ್ತಿದ್ದಳು. ಪುಟ್ಟು ಕೈ ತೊಳೆದುಕೊಳ್ಳಲು ಸೋಮಾರಿತನ ತೋರಿದರೆ ಅವಳೇ ತಿನ್ನಿಸಿಬಿಡೋಳು. ಮತ್ತೆ ಶಾಲೆಗೆ ಹೊರಟಾಗ ಬಳಪ, ಸೀಮೆಸುಣ್ಣ ಇವುಗಳನ್ನು ಕೊಡೋಳು. ಹೀಗೆ ಪ್ರೈಮರಿ ಶಾಲೆಯ ತಿಂಡಿ ಆಗುತ್ತಿದ್ದುದು ಅಜ್ಜಿ ಮನೇಲೇ. ಕಾಲಕ್ರಮೇಣ ಪುಟ್ಟುಗೆ ಗೊತ್ತಾಗಿದ್ದು ಅಜ್ಜಿ ನನ್ನ ಅಪ್ಪನ ಅಮ್ಮ ಅಂತ. ಆದರೆ ಅಜ್ಜಿ ಬೇರೆ ಮನೇಲಿ ಒಬ್ಬಳೇ ಯಾಕಿದ್ದಾಳೆ ಅಂತ ಅರ್ಥ ಆಗಿರಲಿಲ್ಲ.

ಇನ್ನು ಸಂಜೆಯ ಹೊತ್ತು ಅಜ್ಜಿ ಮನೆಗೆ ಹೋದರೆ ಕೈ ತುತ್ತು ಹಾಕದೇ ಕಳಿಸುತ್ತಲೇ ಇರಲಿಲ್ಲ. ಕಾಯಿ ತುರಿಯುತ್ತಿದ್ದರೆ ಕ್ವಾ (ತಗೋ ಅನ್ನೋದಕ್ಕೆ ಗ್ರಾಮ್ಯ ಭಾಷೆ) ಅಂದು ಒಂದಿಷ್ಟು ಕಾಯಿ ತುರಿ ಕೊಡುತ್ತಿದ್ದಳು. ನಂತರ ಕ್ವಾ ಅಂತ ಮತ್ತೊಮ್ಮೆ ಅಂದು ಕಾಯಿ ತುಂಬಿದ ಪುಟ್ಟು ಬಾಯಿಗೆ ಬೆಲ್ಲದ ಪುಡಿ ಉದುರಿಸುತ್ತಿದ್ದಳು. ಕಾಯಿ ಬೆಲ್ಲ ಎರಡನ್ನೂ ಸೇರಿಸಿ ಚೆನ್ನಾಗಿ ಅಗಿದು ತಿನ್ನೋದು ಪುಟ್ಟುಗೆ ತುಂಬಾ ಖುಷಿಯಾಗುತ್ತಿತ್ತು. ಅಜ್ಜಿ ಮಾಡುತ್ತಿದ್ದ ಸಾರಿನ ರುಚಿ ಅದ್ಭುತ. ಅಜ್ಜಿ ಪಕ್ಕ ನಿಂತರೆ ಪುಟ್ಟು ಅವಳ ಮಂಡಿಗಿಂತ ತುಸು ಮೇಲಕ್ಕೆ ಬರುತ್ತಿದ್ದ. ಅಜ್ಜಿ ಕಾಲು ಬಳಸಿ ಅಜ್ಜಿ ಏನು ಮಾಡ್ತಾ ಇದೀಯ ಅಂತ ಕೇಳ್ತಿದ್ದ.

ಅಜ್ಜಿ ಮನೆ ಹಿಂದುಗಡೆ ಹುಳಿ ಮತ್ತು ಸಿಹಿಯಾದ ದಾಳಿಂಬೆ ಮರಗಳಿದ್ದವು. ರಜಾ ದಿನಗಳಂದು ಪುಟ್ಟು ಹೋಗಿ ಮರ ಧ್ವಂಸ ಮಾಡಿ ಬರುತ್ತಿದ್ದ. ಕಳ್ ಮುಂಡೇ ಗಂಡ ಅದಿನ್ನೂ ಕಾಯಿ, ಕೀಳಬೇಡ ಅಂತ ಬೈದ್ರೂ ಕೇಳ್ತಿರಲಿಲ್ಲ. ಹಬ್ಬದ ದಿನಗಳಂತೂ ಪುಟ್ಟು ಅಜ್ಜಿ ಮನೆ ಸವಾರಿ ತಪ್ಪಿಸುತ್ತಿರಲಿಲ್ಲ. ಇಲ್ಲದಿದ್ದರೆ ಅಜ್ಜೀನೇ ಪುಟ್ಟೂನ ಕಳಿಸು ಅಂತ ಹೇಳಿ ಕಳಿಸುತ್ತಿದ್ದಳು. ಸಣ್ಣಗೆ ರೇಗೋದು ಬಿಟ್ಟರೆ ಅವಳು ಪುಟ್ಟುಗೆ ಒಂದೇಟೂ ಹಾಕಿಲ್ಲ. ಒಂದೊಂದು ದಿನ ರಾತ್ರಿ ಬುಡ್ಡಿ ದೀಪದಲ್ಲಿ (ಅವಳ ಮನೆಗೆ ಕರೆಂಟಿನ ದೀಪ ಇರಲಿಲ್ಲ)

ಈಗಿನಂತೆ ಕ್ಯಾಂಡಲ್ ಲೈಟ್ ಡಿನ್ನರ್ ಅನ್ನೋ ಹಾಗೆ, ಕೈ ತುತ್ತು ಹಾಕೋಳು. ಅಜ್ಜಿಯ ವಿಶೇಷತೆ ಎಂದರೆ ಅವಳು ತಿನ್ನೋಕೆ ಅಂತ ಏನು ಇಟ್ಟುಕೊಂಡಿದ್ದರೂ ಅದರಲ್ಲಿ ಅವಳು ತಿನ್ನುತ್ತಿದ್ದುದು ಅರ್ಧವೇ ಇನ್ನರ್ಧ ಪುಟ್ಟು ಕೈಗೆ ಸೇರುತ್ತಿತ್ತು. ಅವಳು ಮೊಮ್ಮಕ್ಕಳಿಗೆ ಕೊಡದೇ ತಿನ್ನುತ್ತಿರಲಿಲ್ಲ.

ಸುಮಾರು ದಿನ ಕಳೆದ ಮೇಲೆ ಒಂದು ದಿನ ಪುಟ್ಟು ಶಾಲೆಗೆ ಹೊರಟಾಗ ಅಮ್ಮ ಒಂದು ಪುಟ್ಟ ಡಬ್ಬಿಯಲ್ಲಿ ತಿಂಡಿ ಹಾಕಿ ಕೊಟ್ಟು ''ಇವತ್ತು ಈ ತಿಂಡಿ ತಿನ್ನು'' ಅಂದಾಗ ''ಯಾಕಮ್ಮಾ ನಾನು ಅಜ್ಜಿ ಮನೆಗೆ ಹೋಗಿ ತಿಂಡಿ ತಿನ್ತೀನಲ್ಲ'' ಅನ್ನುತ್ತಿದ್ದಂತೆ ''ಬಾಯಿ ಮುಚ್ಕೊಂಡು ಹೇಳಿದ್ದು ಕೇಳು ಇನ್ನು ಮೇಲೆ ಅಜ್ಜಿ ಮನೆಗೆ ಹೋಗೋ ಹಾಗಿಲ್ಲ ಅವಳು ಕೊಡೋ ತಿಂಡಿ ತಿನ್ನೋ ಹಾಗಿಲ್ಲ'' ಅಂತ ಅಪ್ಪ ಕಿರುಚಿದ್ದು ಕೇಳಿಸಿ ಅಳುನೇ ಬಂತು. ಪುಟ್ಟು ಚಿಕ್ಕ ಮೆದುಳಿಗೆ ಇದ್ಯಾಕೆ ಅಂತ ತಿಳಿಯಲಿಲ್ಲ. ಆದರೆ ಅವತ್ತು ಶಾಲೆಯಲ್ಲಿ ತಿಂಡಿ ವಿರಾಮ ಇದ್ದಾಗ ಪುಟ್ಟುಗೆ ವಿಪರೀತ ಬೇಜಾರಾಯಿತು. ಅಜ್ಜಿ ನನ್ನನ್ನು ಕಾಯುತ್ತಿರುತ್ತಾಳೆ ಅನಿಸಿತು. ಆದರೆ ವಿರಾಮದ ಸಮಯ ಮುಗಿಯೋದರಲ್ಲಿ ತಿಂಡಿ ತಿಂದು ಮುಗಿಸಬೇಕು ಅನ್ನುವ ಆತುರದ ಮಾತು ಮೇಷ್ಟ್ರಿಂದ ಬಂದಿದ್ರಿಂದ ಡಬ್ಬಿ ತೆಗೆದ. ಪುಟ್ಟು ಜೊತೆ ಹುಡುಗರು ಯಾಕೋ ಇವತ್ತು ನೀನು ಅಜ್ಜಿ ಮನೆಗೆ ಹೋಗಲ್ವಾ ಅಂತ ಕೇಳಿದಾಗಲಂತೂ ಪುಟ್ಟುಗೆ ಅಳೂನೇ ಬಂತು. ಅಮ್ಮ ಕೊಟ್ಟ ಡಬ್ಬಿ ತೆಗೆದಾಗ ಅದರಲ್ಲಿ ಅಮ್ಮ ಇಡ್ಲಿ ಇಟ್ಟಿದ್ದಳು. ಜೊತೆಗೆ ಸಕ್ಕರೆಯೂ ಇತ್ತು. ಇಡ್ಲಿ ಮುರಿದು ಸಕ್ಕರೆಯಲ್ಲಿ ಅದ್ದಿ ತಿನ್ನುವಾಗ ಪುಟ್ಟುಗೆ ಗಂಟಲಲ್ಲಿ ಇಳಿಯಲೇ ಇಲ್ಲ. ನಾನು ಅಜ್ಜಿ ಮನೆಗೆ ಯಾಕೆ ಹೋಗಬಾರದು, ಅವಳು ಕೊಡೋ ತಿಂಡಿನ ಯಾಕೆ ತಿನ್ನಬಾರದು ಅನ್ನೋ ಪ್ರಶ್ನೆಗೆ ಪುಟ್ಟುಗೆ ಉತ್ತರವಿರಲಿಲ್ಲ. ಸ್ಕೂಲು ಬಿಟ್ಟಾದ ಮೇಲೆ ಅಜ್ಜಿ ಮನೆಗೆ ಹೋಗೋಣ ಅಂದ್ಕೊಂಡಿದ್ರೆ ಅಷ್ಟೊತ್ತಿಗೆ ಅಮ್ಮನೇ ಬಂದು ಬಾ ಮನೆಗೆ ಅಂದು ಎಳೆದುಕೊಂಡು ಹೋದಳು. ಇದೇ ರೀತಿ ಒಂದು ವಾರ ನಡೆದಾಗ ಪುಟ್ಟುಗೆ ಮಾತ್ರ ಸಂಕಟ ಕಡಿಮೆಯಾಗಲಿಲ್ಲ.

ಎರಡು ದಿನ ಕಳೆದ ನಂತರ ಒಂದು ದಿನ ತಿಂಡಿಯ ಸಮಯದಲ್ಲಿ ಅಜ್ಜಿಯೇ ಬಂದು ಪುಟ್ಟುಗೆ ಅವಳು ಮಾಡಿದ ಉಪ್ಪಿಟ್ಟು ತಿನ್ನಿಸಿದಳು. ''ಅಜ್ಜಿ ನಾನು ನಿಮ್ಮನೆಗೆ ಯಾಕೆ ಬರಬಾರದು'' ಅಂತ ಪುಟ್ಟು ಕೇಳಿದಾಗ ''ನಿಮ್ಮಪ್ಪ ಅಮ್ಮನಿಗೆ ನನ್ನ ಮೇಲೆ ಸಿಟ್ಟು, ನನ್ನತ್ರ ಮಾತಾಡೋಕೆ ಇಷ್ಟ ಇಲ್ಲ ಕಣಪ್ಪ, ಅದಿಕ್ಕೆ ನಾನು ಮಾಡಿದ ತಿಂಡೀನೂ ನಿನಗೆ ಕೊಡಬಾರದಂತೆ, ನಾನೇನು ಮಾಡ್ಲಿ'' ಅಂದಳು. ''ಹಾಗಾದ್ರೆ ನಾನೂ ದೊಡ್ಡೋನಾದ ಮೇಲೆ ನಮ್ಮಪ್ಪ ಅಮ್ಮನ ಮೇಲೆ ಸಿಟ್ಟು ಮಾಡ್ಕೊಳ್ಬಹುದಾ, ಅವರೊಂದಿಗೆ ಮಾತು ಬಿಡಬಹುದಾ ಅಜ್ಜಿ'' ಅಂತ ಪುಟ್ಟು ಕೇಳಿದಾಗ ಅಜ್ಜಿಗೆ ಕಣ್ಣೀರು ಬಂದು ಅಯ್ಯೋ ನಾವು ಮಕ್ಕಳ ಮನಸ್ಸಿನಲ್ಲಿ ಯಾವ ಬೀಜ ಬಿತ್ತುತ್ತಿದ್ದೀವಿ ಅನ್ನೋ ಆತಂಕ ಮೂಡಿತು. ಇನ್ನೊಂದು ದಿನ ಪುಟ್ಟು ಅಜ್ಜಿನ ಬಳಸಿ ಅಜ್ಜಿ ನಾನು ದೊಡ್ಡೋನಾದ ಮೇಲೆ ಅಮ್ಮನಿಗೆ ಬೇರೆ ಮನೆ ಮಾಡಿಕೊಟ್ಟು ನೀನು ಅಲ್ಲಿರು ಅಂತ ಹೇಳಬೇಕಾ'' ಅಂತ ಕೇಳಿದಾಗ ಅಜ್ಜಿಗೆ ಕಣ್ಣಿಂದ ನೀರು ಬರಲಿಲ್ಲ ಬದಲಿಗೆ ಕರುಳಿನಿಂದ ನೀರು ಉಕ್ಕಿ ಕಣ್ಣಲ್ಲಿ ಹರಿಯಿತು.

ಈ ರೀತಿಯ ಆತಂಕ ಒಂದೆರಡು ತಿಂಗಳು ನಡೆದಿರಬಹುದು. ಅವತ್ತು ಪುಟ್ಟು ಶಾಲೆಗೆ ಹೊರಟಾಗ ಅಮ್ಮ ತಿಂಡಿ ಡಬ್ಬಿ ಕೊಡಲಿಲ್ಲ. ''ಯಾಕಮ್ಮಾ ಇವತ್ತು ತಿಂಡಿ ಡಬ್ಬಿ ಕೊಟ್ಟಿಲ್ಲ

ನಾನು ಅಜ್ಜಿ ಮನೆಗೆ ಹೋಗ್ಲಾ'' ಅಂತ ಪುಟ್ಟು ಕೇಳಿದಾಗ ಅವನ ಅಮ್ಮ ''ಹೌದು ಪುಟ್ಟು ಇನ್ಮೇಲೆ ನೀನು ಅಜ್ಜಿ ಮನೆಗೆ ಹೋಗಿ ತಿಂಡಿ ತಿನ್ನು'' ಅಂದಳು. ಪುಟ್ಟುಗೆ ಸ್ವರ್ಗಕ್ಕೆ ಹೋದಷ್ಟು ಸಮಾಧಾನವಾಯಿತು. ಅವತ್ತು ತಿಂಡಿಯ ವಿರಾಮಕ್ಕೇ ಕಾಯುತ್ತಿದ್ದ ಪುಟ್ಟು ಗಂಟೆ ಬಾರಿಸಿದೊಡನೆ ಅಜ್ಜಿ ಮನೆಗೆ ಓಡಿದ. ಅಜ್ಜಿ ಪುಟ್ಟುಗಾಗಿ ಹೆಚ್ಚು ಖಾರವಿಲ್ಲದ ಬಿಸಿಬಿಸಿಯಾದ ಉಪ್ಪಿಟ್ಟು ಜೊತೆಗೆ ಕೇಸರೀಬಾತನ್ನೂ ಮಾಡಿಟ್ಕೊಂಡು ಕಾಯ್ತಿದ್ದಳು. ಅಜ್ಜೀ ಅಂತ ಹೋಗಿ ಮೊದಲು ಅವಳನ್ನು ತಬ್ಬಿದ. ಬಾರೋ ತಿಂಡಿ ತಿನ್ನು ಅಂದ್ರೆ ''ಅಜ್ಜೀ ನಿನ್ನ ತಬ್ಕೊಂಡಿದ್ರೆ ತಿಂಡಿನೇ ಬೇಡ ಅನ್ಸುತ್ತೆ ಯಾಕಜ್ಜಿ'' ಅಂತ ಕೇಳಿದ. ಅಜ್ಜಿಗೆ ಕಣ್ಣೀರು ಬಂತು. ''ಮೊದಲು ತಿಂಡಿ ತಿನ್ನು ಆಮೇಲೆ ಎಲ್ಲ ಹೇಳ್ತೀನಿ'' ಅಂದು ಅವಳೇ ಪುಟ್ಟುಗೆ ಪುಟ್ಟ ಪುಟ್ಟ ಉಪ್ಪಿಟ್ಟಿನ, ಕೇಸರೀಬಾತಿನ ಉಂಡೆ ಮಾಡಿ ತಿನ್ನಿಸಿದಳು.

''ಅಜ್ಜಿ ಅವತ್ತು ಅಪ್ಪ ಅಮ್ಮ ಅಜ್ಜಿ ಮನೆಗೆ ಹೋಗಬೇಡ ತಿಂಡಿ ತಿನ್ನಬೇಡ ಅಂದ್ರು ಆದ್ರೆ ಇವತ್ತು ಅಮ್ಮನೇ ಅಜ್ಜಿ ಮನೆಗೆ ಹೋಗಿ ತಿಂಡಿ ತಿನ್ನು ಅಂದ್ಲು ಯಾಕಜ್ಜಿ'' ಅಂತ ಕೇಳಿದ. ಹಿಂದಿನ ದಿನ ಪುಟ್ಟು ತಂದೆ ತಾಯಿ ಇಬ್ಬರೂ ಮನೆಗೆ ಬಂದು ಏನೋ ಕೆಟ್ಟ ಘಳಿಗೆ ಹಾಗೆ ನಡ್ಕೊಂಡ್ವು ನಮ್ಮನ್ನು ಕ್ಷಮಿಸು ಅಂದು ಕಾಲಿಗೆ ನಮಸ್ಕಾರ ಮಾಡಿ ತಮ್ಮ ತಪ್ಪು ತಿದ್ದಿಕೊಂಡು ಹೋಗಿದ್ದುದನ್ನು ಅಜ್ಜಿ ಪುಟ್ಟುವಿನ ಪುಟ್ಟ ಮೆದುಳಿಗೆ ತುಂಬಲಿಲ್ಲ. ಅಜ್ಜಿ ಪುಟ್ಟು ಬಾಯಿಗೆ ಉಪ್ಪಿಟ್ಟು ತುಂಬುತ್ತಾ ''ನೋಡು ಪುಟ್ಟಾ ನೀನು ತುಂಬಾ ಜಾಣನಾಗಿ ಬೆಳೀಬೇಕು. ಒಳ್ಳೇದನ್ನೇ ಮಾಡಬೇಕು. ಕೆಟ್ಟದು ಅಂತ ಗೊತ್ತಾದ ತಕ್ಷಣ ದೂರ ಹೊರಟು ಹೋಗಬೇಕು. ಮಾತಾಡುವಾಗ ಎಚ್ಚರವಿರಬೇಕು. ಯಾರತ್ರ ಮಾತಾಡ್ತಿದೀನಿ, ಏನು ಮಾತಾಡ್ತಿದೀನಿ ಅನ್ನೋದರ ಬಗ್ಗೆ ಎಚ್ಚರವಿರಬೇಕು'' ಅನ್ನೋ ಮಾತುಗಳನ್ನೂ ಕಿವಿಗೆ ತುಂಬಿದಳು. ಪುಟ್ಟು ಉಪ್ಪಿಟ್ಟು ತಿನ್ನುತ್ತಾ ''ಅಜ್ಜೀ ನೀನು ಹೇಳಿದ್ದು ನಂಗೊಂದೂ ಗೊತ್ತಾಗ್ಲಿಲ್ಲ ಆದ್ರೆ ನಾನು ನೀನು ಹೇಳಿದ ಹಾಗೆ ಕೇಳ್ತೀನಜ್ಜಿ'' ಅಂದ.

ಮಕ್ಕಳಿಗೆ ಬರೀ ಒಳ್ಳೆಯ ಆಹಾರವನ್ನೇ ಕೊಟ್ಟರೆ ಸಾಲದು ಜೊತೆಗೆ ಒಳ್ಳೆಯ ಮಾತುಗಳನ್ನೂ ಕೊಡಬೇಕು, ಸಂಸ್ಕಾರ ಕೊಡಬೇಕು. ಮಾತು ಕಲಿಸಿಕೊಡಬೇಕು, ಒಳ್ಳೇದನ್ನೇ ಮಾಡುವಂತೆ ಪ್ರಚೋದಿಸಬೇಕು, ಕ್ಷಣ ಕ್ಷಣಕ್ಕೂ ಮಕ್ಕಳನ್ನು ತಿದ್ದುತ್ತಿರಬೇಕು ಅನ್ನೋದು ಇವತ್ತಿನ ದೊಡ್ಡೋರಿಗೆ ತಿಳಿದರೆ ಮುಂದಿನ ಮಕ್ಕಳು ದಡ್ಡರಾಗೋದು, ಕೆಟ್ಟೋರಾಗೋದು, ಸಮಾಜಕ್ಕೆ ಕಂಟಕರಾಗೋದು, ಮನೆಯವರಿಗೆ ಬೇಜಾರು ಮಾಡೋದು, ಅಪ್ಪ ಅಮ್ಮನ್ನ ದೂರ ಮಾಡೋದು, ಆಸ್ತಿ, ಹಣ ಇವುಗಳಿಗಾಗಿ ಹೊಡೆದಾಡೋದು ಮುಂತಾದುವುಗಳನ್ನು ಮುಂದಿನ ದಿನಗಳಲ್ಲಿ ಕಾಣೋದು ಖಂಡಿತಾ ಸಾಧ್ಯವೇ ಇಲ್ಲ ಅಂತ ಅಜ್ಜಿಗೆ ಅನಿಸಿತು.

'ನೀನು ಎಷ್ಟು ಸಂದರಿಯೋ ಅಷ್ಟೇ ಪೆದ್ದು ಸಹ' ಎಂದ ಗಂಡ.
'ದೇವರು ನನ್ನನ್ನು ಸುಂದರಿಯಾಗಿಸಿದ ನಾನು ನಿಮಗೆ ಆಕರ್ಷಕವಾಗಿ ಕಾಣಲು. ನಿಮಗೆ ಮರಳಾಗುವಂತೆ ಮಾಡಲು ನನ್ನನ್ನು ಪೆದ್ದಿಯಾಗಿಸಿದ' ಎಂದಳು ಹೆಂಡತಿ.

# ಬಿಸಿ ಬೇಳೆ....ಮಾತು

**- ನಳಿನಿ ಸೂರ್ಯಪ್ರಕಾಶ್**

ಬಿಸಿ ಬೇಳೆ ಬಾತ್ ಮಾಡಲೇಬೇಕು ಎಂದು ನಿರ್ಧರಿಸಿ ಬೆಳಿಗ್ಗೆ ಎಂಟೂವರೆಗೇ ಬುಟ್ಟಿ ಹಿಡಿದು ಮಾರ್ಕೆಟ್ಟಿನೆಡೆಗೆ ಹೆಜ್ಜೆ ಹಾಕಿದೆ. ತರಕಾರಿ ನಾಗಮ್ಮ ತನ್ನ ಗಾಡಿ ಮೇಲಿನ ತರಕಾರಿಗೆಲ್ಲಾ ನೀರು ಚುಮುಕಿಸ್ತಾ ಅಂದಿನ ವ್ಯಾಪಾರಕ್ಕೆ ಅಣಿಯಾಗ್ತಿದ್ಲು. ನಾಗಮ್ಮ 63ರ ಧಡೂತಿ ಹೆಂಗಸು. ಹಣೆಮೇಲೆ ಕಾಸಗಲ ಕುಂಕುಮ, ಸದಾಕಾಲ ಎಲೆ-ಅಡಿಕೆ ಜಗೀತಾ, ಕೆಂಪಾದ ಬಾಯಿ, ಕೈಗಳ ತುಂಬಾ ಗಾಜಿನ ಬಳೆ, ಬಲಗೈ ಮೇಲೆ ''ಜೈ ಬೀರೇಶ್ವರ'' ಎಂಬ ಕಪ್ಪಾದ ಹಚ್ಚೆ. ''ಆಲುಗಡ್ಡೆ-ಈರುಳ್ಳಿ-ಟಮಾಟೋ!'' ಅಂತ ಕೂಗು ಹಾಕಿದ್ರೆ, ಎರಡು ಬೀದಿಗೆ ಕೇಳಿಸುವಂಥ ಕಂಚಿನ ಕಂಠ! ಹಲವು ಬಾರಿ ನನಗನ್ನಿಸಿದ್ದುಂಟು, ಈ ನಾಗಮ್ಮ ತರಕಾರಿ ಮಾರೋದಕ್ಕೆಂತಲೇ ಹುಟ್ಟಿರಬಹುದಾ ಅಂತ! ಅದೆಷ್ಟೋ ವರ್ಷಗಳಿಂದ ನಾನು ನಾಗಮ್ಮನಿಗೆ ಖಾಯಂ ಚಿಲ್ಲರೆ ಗಿರಾಕಿಯಾದ್ರೆ, ಆಕೆ ನಮ್ಮ ಬ್ಯಾಂಕಿಗೀಗ ದೊಡ್ಡ ಗಿರಾಕಿ. ಮೂವತ್ತು ವರ್ಷಗಳಿಂದ ಮಾಡ್ಕೊಂಡು ಬಂದ ಕಸುಬು ಚೆನ್ನಾಗಿ ಅವಳ ಕೈ ಹಿಡಿದಿತ್ತು. ಮೊನ್ನೆ ಐದು ಲಕ್ಷ ಫಿಕ್ಸೆಡ್ ಡೆಪಾಸಿಟ್ ಮಾಡಕ್ಕೇಂತ ಬ್ಯಾಂಕಿಗೆ ಬಂದಾಗ, ಅರ್ಜಿಗಳನ್ನೆಲ್ಲಾ ತುಂಬಿಸಿ, ಅವಳ ಕೆಲಸವೆಲ್ಲಾ ಸುಸೂತ್ರವಾಗಿ ಮಾಡಿಕೊಟ್ಟಿದ್ದೆ. ಅಂತೂ ತರಕಾರಿ ಬೆಲೆಗಳ ಜೊತೆ ನಾಗಮ್ಮನೂ ಸಾಕಷ್ಟು ಬೆಳೆದಿದ್ದಾಳೆನ್ನಿ.

> **ತರಕಾರಿ ತಿಂದು ಶುದ್ಧ ಶಾಖಾಹಾರಿಗಳಾಗೋದಿರ್ಲಿ, ಈ ಪಾಟಿ ರೇಟಿನ ಶಾಕ್ ತಿಂದೂ, ತಿಂದೂ, ಶಾಖಾಹಾರಿಗಳೆನ್ನಿಸಿಕೊಳ್ಳುವ ಕಾಲ ಇದು...**

ನನ್ನ ನೋಡ್ತಲೇ ಮುಗುಳ್ನಗ್ತಾ, ''ಏನ್ರವ್ವಾ, ಏನಾಕ್ಲೀ?''

''ಹೇಗಮ್ಮಾ ಹುರುಳಿಕಾಯಿ, ಬಟಾಣಿ, ಕ್ಯಾರೆಟ್ಟು?''

''ಕಾಲು ಕೆ.ಜಿ.ಗೆ ಉರುಳಿಕಾಯಿ-ನಲ್ವತ್ತು, ಬಟಾಣಿ-ಅರ್ವತ್ತು, ಕ್ಯಾರೆಟ್ಟು-ಇಪ್ಪತ್ತು''

''ಅಂದ್ರೆ, ಕೆ.ಜಿ.ಗೆ 160, 240, 80....ಅನ್ನು!!'' ಅಂತ ಹೌಹಾರಿದೆ.

ತರಕಾರಿ ತಿಂದು ಶುದ್ಧ ಶಾಖಾಹಾರಿಗಳಾಗೋದಿರ್ಲಿ, ಈ ಪಾಟಿ ರೇಟಿನ ಶಾಕ್ ತಿಂದೂ, ತಿಂದೂ, ಶಾಖಾಹಾರಿಗಳೆನ್ನಿಸಿಕೊಳ್ಳುವ ಕಾಲ ಇದು ಅನ್ನಿಸ್ತು.

''ಅಯ್ಯೋ, ಗಾಬ್ರಾಬುಟ್ರಾ! ಅದ್ಬುಡಿ, ನಿಮ್ ರೋಡ್ನಾಗೆ ಆ ಮೂಲೆ ಮನೆ ತಮಿಳ್ರಪ್ಪ ಇಲ್ವಾ......, ಆ ಯಪ್ಪಾ ಯಾಕಾನಾ ತರಕಾರಿ ತಗಾಳಕ್ಕೆ ಬತ್ತಾನೋ! ತಗಳಾದ್ ಮಾತ್ರ ಕಾಲು ಕೆ.ಜಿ. ಮೂಲಂಗಿ ಇಲ್ಲಾ ಗೋರಿಕಾಯಿ... ಅಟ್ಟೇಯ! ರಿಟೇರ್ ಆಗೋಗೈತೆ, ಇನ್ನೇನ್ ಕೆಲ್ಸಾ ಇಲ್ಲಾ. ಸುಮ್ನೆ ಗಾಡಿ ಮುಂದೆ ನಿಂತ್ಕಂಡು, ಎಲ್ಲಾದರ್ರೂ ಬೆಲೆ ಇಚಾರ್ಸೋದು..... ಮುಂಚೇನೆ ಆಟ್ (ಹಾರ್ಟ್!) ಪೇಸಂಟು! ನಂಗಂತೂ ಎಲ್ಲಾ ರೇಟು ಯೋಳಾಕ್ಕೇ ಬಯಾ ಆಗ್ತಿರ್ತೈತೆ, ಕೇಳ್ಬುಟ್ಟು ಎಲ್ಲಿ ನನ್ ಗಾಡಿ ತವಾನೇ ಬಿದ್ದು ಗೊಟಕ್'' ಅನ್ಬುಡ್ತದೋ ಆಸಾಮಿ ಅಂತ! ನಾನೂ ಆದಷ್ಟೂ ಕಾಲು ಕೆ.ಜಿ. ಬೆಲೇನೇ ಯೋಳಾದು.. ಏನ್ಮಾಡೋದ್ರವ್ವಾ, ಎಲ್ಲಾ ಬೆಲೆ ಜಾಸ್ತಿ ಆಗೋಗದೇ..''

''ನೀನ್ಹೇಳೋದೂ ಸರೀನೇ ಅನ್ನು. ಚಿನ್ನದ ವ್ಯಾಪಾರಕ್ಕೋದ್ರೆ ಗ್ರಾಮ್ ಚಿನ್ನಕ್ಕಿಷ್ಟು ಅಂತ ತಾನೇ ಹೇಳೋದು? ಚಿನ್ನ ಕೆ.ಜಿ.ಗಿಷ್ಟು ಅಂತ ಯಾರ್ಹೇಳ್ತಾರ್ಹೇಳು! ಇದೂ ಹಂಗೇನೇ.''

ತನ್ನ ಕಸುಬನ್ನ ಚಿನ್ನದ ವ್ಯಾಪಾರಕ್ಕೆ ಹೋಲಿಸಿದ್ದಕ್ಕೆ ನಾಗಮ್ಮ ಹಿಗ್ಗಿ ಹೀರೇಕಾಯಾಗಿ, ತನ್ನ ಕೆಂಪು ಹಲ್ಲುಗಳ್ನ ತೋರಿಸ್ತಾ ಪಕಪಕಾಂತ ನಕ್ಕಳು.

ಹುರುಳಿಕಾಯಿ, ಬಟಾಣಿಗಳನ್ನ ಆಸೆಗಣ್ಣಿನಿಂದ ಸವರ್ತಾ ''ಬಿಸಿಬೇಳೆಬಾತು ಮಾಡೋಣಾಂತ ನಾಗಮ್ಮಾ...'' ತುಂಬಿದ ಬಸುರಿ ಹೆತ್ತಮ್ಮನ ಮುಂದೆ ಬಯಕೆ ಹೇಳ್ಕೊಂಡಂಗೆ ರಾಗ ಎಳೆದೆ..

''ನಂಗೆ ನಾಲ್ಕೈದು ತರಕಾರಿ ಬೆರಕೆ ಮಾಡಿ, ಒಟ್ಟು ಅರ್ಧ ಕೆ.ಜಿ. ಚೌ ಚೌ ತರಕಾರಿ ಹಾಕ್ತೀಯ?''

ಹೆಚ್ಚು ಕಮ್ಮಿ ತುಕ್ಕು ಹಿಡೀತಿದ್ದ ಎರಡು ಕೆ.ಜಿ. ತೂಕದ ಕಲ್ಲಿಂದ ಎಲ್ಲಿ ನನ್ನ ತಲೆ ಕುಟ್ಟಿಬಿಡ್ತಾಳೋ ಅಂತ ಅನುಮಾನಿಸ್ತಾ, ಓರೆಗಣ್ಣಿನಲ್ಲಿ ನಾಗಮ್ಮನ ಮುಖ ನೋಡಿದೆ. ಸಧ್ಯ, ಹಂಗೇನೂ ಮಾಡದೆ, ''ಎಲ್ಲಾ ಕಾಲು ಕಾಲು ಕೆ.ಜಿ. ತಕ್ಕಂಡು, ಪ್ರಿಜ್ಜಲ್ಲಿ ಮಡಗ್ಬುಡಿ!'' ಬಿಟ್ಟಿ ಸಲಹೆ ಕೊಟ್ಟಳು.

''ನಮ್ಮನೇಲಿ ಫ್ರಿಡ್ಜೇ ಇಲ್ಲ... ಮತ್ತೆರಡು ದಿನ ನಾವು ಊರಲ್ಲಿರಲ್ಲಾ ಬೇರೆ, ತರಕಾರಿ ಬಾಡಿ, ಬೆಂಡಾಗ್ಹೋಗತ್ತೆ, ಅಷ್ಟೆ....'' ಅಸಹಾಯಕತೆ ತೋರಿದೆ.

ಕ್ಷಣಕಾಲ ನನ್ನ ಮೋರೆಯನ್ನ ದಿಟ್ಟಿಸಿ ಪಕ್ಕದ ಮೋರಿಗೆ ಪಿಚಕ್ ಅಂತ ಉಗುಳಿದಳು. ಮುಖ ಒರೆಸ್ಕೊಂಡು ನಿಂತ ನನ್ನೋಡಿ, ''ಎಂಗೋ, ತಗಳವ್ವಾ.... ಬೆಳ್ ಬೆಳಿಗ್ಗೆ ನಿಂದೇ ಬೋಣಿ.''

ನಾಗಮ್ಮ ಅರ್ಧ ಕೆ.ಜಿ. ತೂಕದ ಕಲ್ಲು ತಕ್ಕಡಿಯಲ್ಲಿ ಇಡ್ತಿದ್ದಂಗೆ, ಉತ್ಸಾಹದಿಂದ ನಾನು ಹನ್ನೆರಡು ಹುರುಳಿಕಾಯಿ, ಇಪ್ಪತ್ತು ಬಟಾಣಿಕಾಯಿ, ಎರಡು ಕ್ಯಾರೆಟ್ಟು, ಒಂದು ದೊಣ್ಣಮೆಣಸಿನಕಾಯಿ, ಆರು ಸಾಂಬಾರು ಈರುಳ್ಳಿ, ಒಂದು ಪುಟ್ಟ ನವಿಲುಕೋಸು, ನಿಂಬೆ ಗಾತ್ರದ ಆಲೂಗಡ್ಡೆ ಇಷ್ಟನ್ನೂ ಹಾಕಿ, ಅಂತೂ ಅರ್ಧ ಕೆ.ಜಿ. ತೂಗಿಸಿದೆ.

''ಎಲ್ಲಾ ಎಷ್ಟಾಯ್ತಮ್ಮಾ?''

ನನ್ನ ಚೌ ಚೌ ತರಕಾರಿಯನ್ನ ತಲೆಕೆರಕೋತ ದಿಟ್ಟಿಸಿ, ''ನಲ್ವತ್ತು'' ಅಂತ ಅಲವತ್ತುಕೊಂಡಳು.

ದುಡ್ಡು ತೆತ್ತು, ಹೆಚ್ಚು ತಕರಾರಿಲ್ಲದೆ ಚೌ ಚೌ ತರಕಾರಿ ತಂದ ವಿಜಯೋತ್ಸಾಹದಿಂದ ಮನೆಗೆ ಬಂದೆ.

ಅಂತೂ ಬೆಳಗಿನ ತಿಂಡಿಗೆ ಬಿಸಿಯಾದ ಘಮ್ಮೆನ್ನುವ ಬಿಸಿಬೇಳೆಬಾತು ತಯಾರಾಯ್ತು. ತಟ್ಟೇಗೆ ಎರಡು ಸೌಟಿನಷ್ಟು ಸುರ್ಕೊಂಡು, ಮೇಲೆರಡು ಚಮಚ ತುಪ್ಪ ಹಾಕಿ, ಉಪಹಾರದೊಂದಿಗೆ, ಕಂಪ್ಯೂಟರ್ ಮುಂದೆ ಕೂತೆ. ಬಿ.ಬೇ.ಬಾತಿನ ಮೊದಲ ತುತ್ತನ್ನು ಆಸ್ವಾದಿಸುತ್ತಾ ಕಣ್ಮುಚ್ಚಿ, ''ಹ್..ಮ್... ಹೆವೆನ್ಲಿ!!'' ಎಂದುದ್ಗರಿಸಿದೆ!

ನಾನು ಮಾಡಿದ ಬಿ.ಬೇ.ಬಾತು ನನಗೆ ಚೆನ್ನಾಗಿರಲೇ ಬೇಕಲ್ಲವೆ?

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- ಓದುಗರು ಯಾಕೆ ಓದುತ್ತಾರೆ ಎಂಬುದು ಗೊತ್ತಾದರೆ ಲೇಖಕರು ಯಾಕೆ ಬರೆಯುತ್ತಾರೆ ಎಂಬ ಪ್ರಶ್ನೆಗೂ ಉತ್ತರ ದೊರೆಯಬಹುದು.
- ನಮಗೆ ಮಾತ್ರ ನಮ್ಮ ಶನಿಕಾಟ ಅತಿ ದೊಡ್ಡದು. ಉಳಿದವರ ಶನಿಕಾಟಗಳು ನಮಗೆ ಸಮಸ್ಯೆ ಎಂದು ಅನಿಸುವುದೇ ಇಲ್ಲ.
- **ತಂದೆ ಮಗನಿಗೆ:** ಮಕ್ಕಳು ಬೇಕೂಂತ ನಿಮ್ಮಮ್ಮನನ್ನು ಮದುವೆ ಆದೆ ಕಣೊ. ಆದರೆ ನನ್ನ ನಿರಾಶೆಯನ್ನು ಊಹಿಸಿಕೊ.
- ಯು ಆರ್ ವಾಟ್ ಯು ಡು, ನಾಟ್ ಯು ಸೆ ಯು ವಿಲ್ ಡು.
- ಗಾಳಕ್ಕೆ ಹುಳ ಕಟ್ಟುವುದು ಮೀನಿಗೆ ಆಹಾರ ಕೊಡಲು ಅಲ್ಲ.
- ಪ್ರಾರ್ಥನೆ ಅಥವಾ ಪೂಜೆ ಎಂಬುದು ಭಕ್ತ ತನ್ನ ಬದ್ಧತೆಯನ್ನು ತಾನೇ ಖಾತರಿಪಡಿಸಿಕೊಳ್ಳಲು ಅಳವಡಿಸಿಕೊಂಡಿರುವ ವಿಧಾನ. ದೇವರನ್ನು ನಿರಾಕರಿಸುವವರೂ ಅಷ್ಟೇ. ಪ್ರಾರ್ಥಿಸದೆ ಇರುವ ಮೂಲಕ ತಮ್ಮ ನಿರಾಕರಣೆಯನ್ನು ಖಚಿತಪಡಿಸಿಕೊಳ್ಳುತ್ತಿರುತ್ತಾರೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- **ಅಮ್ಮನ ಸ್ವಗತ:** ಯೋಗ ನನಗೆ ಖುಷಿ ನೀಡುತ್ತದೆ - ಮಕ್ಕಳು ಯೋಗ ಕ್ಲಾಸ್ ಮುಗಿಸಿ ಮನೆಗೆ ಬರುವ ತನಕ.
- ಗೊ ವೇರ್ ನೊಬಡಿ ಎಲ್ಸ್ ಹ್ಯಾಸ್ ಗಾನ್.
- ನಿಮಗೆ ಹೆದರಿಕೆ ಎನಿಸಿದರೆ ಮಾಡದಿರಿ. ಮಾಡುತ್ತಿದ್ದರೆ ಹೆದರಿಕೊಂಡು ಮಾಡಬೇಡಿ.
- ಗಿಡವಾಗಿ ಬಗ್ಗಿದ್ದು ಮರವಾಗಲು ಸಾಧ್ಯವೆ?
- ನಾನೊಬ್ಬ ಉತ್ಸಾಹಿ ಮತ್ತು ಚಲನಶೀಲ - ಆಗಾಗ್ಗೆ!
- ಇನ್‌ಫರ್ಮೇಶನ್ ಹೈವೆಗೆ ದೇಶದ ಗಡಿಗಳು ರಸ್ತೆ ಉಬ್ಬುಗಳಂತೆ ಸಹ ಕಂಡುಬರುವುದಿಲ್ಲ.
- ವಿ ಆರ್ ವರ್ತ್ ವಾಟ್ ವಿ ಆರ್ ವಿಲ್ಲಿಂಗ್ ಟು ಶೇರ್ ವಿತ್ ಅದರ್ಸ್.
- ಕೆಲವರ ಅರ್ನಿಂಗ್ ಕೆಪಾಸಿಟಿ ಕಡಿಮೆ ಇರಬಹುದು ಆದರೆ ಬೋರಿಂಗ್ ಕೆಪಾಸಿಟಿಗೆ ಮಿತಿಯೇ ಇಲ್ಲ.
- ಒಂದು ನಿಮಿಷ ಎಷ್ಟು ದೊಡ್ಡದು ಎಂಬುದು ನೀವು ಶೌಚಾಲಯದ ಬಾಗಿಲಿನ ಯಾವ ಕಡೆ ನಿಂತಿದ್ದೀರಿ ಎಂಬುದನ್ನು ಅವಲಂಬಿಸುತ್ತದೆ.
- ನೀನು ನಮ್ಮೊಡನೆ ಇರುವಾಗ ನಿನ್ನ ಬಗ್ಗೆ ನೀನೇನೂ ಮಾತನಾಡಬೇಡ. ನೀನು ಹೋದ ಮೇಲೆ ನಾವು ಅದೇ ಕೆಲಸ ಮಾಡುತ್ತೇವೆ.
- ಐ ಥಿಂಕ್ ದೇರ್ ಫೋರ್ ಐ ಆಮ್. ಇಟ್ ಮೈಟ್ ಬಿ.

❁

# Advertisement

# Advertisement

# ತುಂಟಾಟದ ಗೊರೂರರು

**- ವೈ.ಎನ್. ಗುಂಡೂರಾವ್**

**ಪ್ರ**ಕೃತಿ ಸೌಂದರ್ಯವನ್ನು ಆಸ್ವಾದಿಸುವವರು ದಟ್ಟ ಕಾನನದ ಮಧ್ಯಕ್ಕೆ ಹೋಗಬೇಕಿಲ್ಲ. ಕಾನನವನ್ನು ಪ್ರವೇಶಿಸುತ್ತಿದ್ದಂತೆ ನಿಮ್ಮ ಮನಸ್ಸನ್ನು ಸೆರೆ ಹಿಡಿಯುವಂತಿರಬೇಕು. ಮಧ್ಯಭಾಗಕ್ಕಿಂತಲೂ ಸೆರಗು ಹೆಚ್ಚು ಸೊಗಸು. ಅದರಂತೆಯೇ ನಮ್ಮೂರು ಇದ್ದುದು ಮಲೆನಾಡಿನ ಸೆರಗಿನಲ್ಲಿ. ಬಯಲು ಸೀಮೆಯ ಉರಿಬಿಸಿಲು, ಕೆಂಧೂಳು ಇಲ್ಲದ, ಕೊರೆಯುವ ಕುಳಿರ್ಗಾಳಿ ಬೀಸದ, ಜಡಿಮಳೆ ಹಿಡಿಯದ ಹಿತಮಿತವಾದ ವಾತಾವರಣದ ಗೊರೂರು ಆಪ್ಯಾಯಮಾನ ಪರಿಸರವನ್ನು ಹೊಂದಿದ ಸ್ಥಳ ಎನ್ನುವ ರಾಮಸ್ವಾಮಿ ಅಯ್ಯಂಗಾರರು ಹುಟ್ಟಿದ್ದು ಮಲೆನಾಡಿನ ಅಂಚಿನ ಗೊರೂರಿನಲ್ಲಿ (4.7.904 – 28.9.1991). ಗೊರೂರಿಗೆ ಹೆಸರು ತಂದು ಕೊಟ್ಟು ಭೂಪಟದಲ್ಲಿ ಮೂಡಿಸಿದವರು. ಅವರ ಪ್ರಥಮ ಕೃತಿ 'ನಮ್ಮ ಊರಿನ ರಸಿಕರು' ಪುಸ್ತಕದಲ್ಲಿ ಮೊದಲು ವರ್ಣಿಸಿರುವುದು ಅವರು ಹುಟ್ಟಿದ ಪ್ರದೇಶವನ್ನೇ ಪ್ರದೇಶದ ವರ್ಣನೆಯೊಂದಿಗೆ ಇದೇ ಗೊರೂರಿನ ಸಮಸ್ತವನ್ನು ತೆರೆದಿಡುತ್ತಾ ಹೋಗುತ್ತಾರೆ.

ಊರಿನಲ್ಲೂ ಅಷ್ಟೇ ವಿನೋದ ಪ್ರಿಯರಿಲ್ಲದವರು ಸಿಕ್ಕುವುದು ವಿರಳ, ಕೋಪಿಷ್ಠರಾಗಲೀ, ಗಂಟು ಮುಖದವರಾಗಲೀ ಅಲ್ಲಿಗೆ ಬಂದರೆ ಮಾಯವಾಗಿ ಬಿಡುತ್ತಾರೆ ಅಥವಾ ಮುಂಗೋಪವನ್ನು ಬಿಟ್ಟು ನಗಲು ಪ್ರಾರಂಭಿಸುತ್ತಾರೆ ಎಂದು ಊರವರ ವರ್ಣನೆಗೆ ತೊಡಗುತ್ತಾರೆ.

ಮತ್ತೊಬ್ಬರ ಮನೆಯಲ್ಲಿ ಬಿಸಿನೀರು ಕಾಯ್ದಾಗ ಸ್ನಾನ ಪೂರೈಸಿಕೊಳ್ಳುವ ಬಾವುಟದ ಮಣೆಗಾರ್ರು, ಚಳಿ, ಮಳೆ, ಬೇಸಿಗೆಯಿರಲಿ ಸದಾ ಶಾಲು ಹೊದ್ದು ತಿರುಗುವ ಶಾಲುಸಾಬಿ, ಊರಿನ ವರ್ತಮಾನವನ್ನು ಬಿತ್ತರಿಸುವ ರೂಟರ್ ಏಜೆನ್ಸಿ ತಿರುಮಲ್ಲಮ್ಮ, ಗ್ರಾಂಥಿಕ ಭಾಷೆಯಲ್ಲಿ ಮಾತನಾಡುವ ರಂಗೇಗೌಡ, ಉಳುವುದನ್ನು ಬಿಟ್ಟು ಎಲೆ ಅಡಿಕೆಗಾಗಿ ಮೈಲಿಗಟ್ಟಲೆ ಹೊರಟು ಬಿಡುವ ಮಾದ, ಎಲ್ಲರ ಕಷ್ಟಕ್ಕೂ ಒದಗುವ ಕಮಲಮ್ಮ, ಕರಡಿ ಬೆಟ್ಟದ ಆಂಜನೇಯ ಸ್ವಾಮಿಯನ್ನೇ ಮಾತನಾಡಿಸಿ ಭಕ್ತರ ಅನುಕೂಲಕ್ಕೆ ತಕ್ಕಂತೆ ಹೂವು ಬೀಳಿಸಿಕೊಡುವ ಪೂಜಾರಿ ಸಾತಾನಿ ನಾರಣಯ್ಯ... ಹೀಗೆ ಒಬ್ಬರೇ, ಇಬ್ಬರೇ! ಗೊರೂರಿನ ಸಮಸ್ತ ಜನರ ಜೊತೆಗೆ ಓಡಾಡುವ ಬಸ್ಸು, ಎತ್ತಿನಗಾಡಿ, ಎಲ್ಲವೂ ಇವರ ಬರೆಹದಲ್ಲಿ ಪ್ರಾಶಸ್ತ್ಯ ಪಡೆದುಕೊಳ್ಳುತ್ತವೆ.

ಮುಗ್ಧಮನಸ್ಸಿನ ಬರಹೆಗಾರರಾದ ಗೊರೂರಿಗೆ ಬರವಣಿಗೆಗಾಗಿ ವಸ್ತುವನ್ನು ಹುಡುಕಿಕೊಂಡು ಹೋಗುವ ಪ್ರಮೇಯವಿರಲಿಲ್ಲ. ಬರೆಹಗಾರರು ತುಟ್ಟಿ ಇದ್ದ ದಿನಗಳಲ್ಲಿ ಹಳ್ಳಿಯ ಜನರ ನಡವಳಿಗಳನ್ನು ಸರಳವಾಗಿ ಚಿತ್ರಿಸಿ ಸಾಹಿತ್ಯದ ಮೌಲ್ಯ ಹೆಚ್ಚಿಸಿದರು. ಅವರಿಗಿದ್ದ ಪ್ರೇರಣೆ ಎಂದರೆ ಬರೆದು ಹೊರ ಹಾಕುವ ಒತ್ತಡ. ಸರಳ ಭಾಷೆಯಲ್ಲೇ ಚಿತ್ರಿಸುತ್ತಾ ಹೋದರು. ಇಂತಹ ಗಂಭೀರ ಬರೆಹಗಾರರಾದ ಗೊರೂರರ ಬಾಲ್ಯ ಅತಿ ತುಂಟತನದಿಂದಲೇ ಕೂಡಿತ್ತು. ಗೊರೂರರ ತುಂಟಾಟದ ಬದುಕನ್ನು ಓದುತ್ತಾ ಹೋದರೆ ಮನಸ್ಸು ಹಗುರಾಗಿ ನಗುವಿನಿಂದ ತುಟಿ ಅರಳುತ್ತಾ ಹೋಗುತ್ತದೆ.

ಚಿಕ್ಕ ವಯಸ್ಸಿನ ಹುಡುಗರಿಗೆ ಸಾಬೆಗಿಡ, ಮಾವಿನಗಿಡ ಹತ್ತುವುದರಲ್ಲೇನು ವಿಶೇಷವಿಲ್ಲ. ಆದರೆ ಗೊರೂರರು ಎಳನೀರು ಕದಿಯಲು ತೆಂಗಿನ ಮರವನ್ನೇ ಹತ್ತಿದರು. ಎರಡು ಎಳನೀರು ಕಿತ್ತು ಹಾಕಿದರು. ಇವರ ಗುರುತಿನವರೊಬ್ಬರು ಬಂದು ಬಿಡಬೇಕೆ? ಸರಿ, ಸರಸರ ಇಳಿಯ ತೊಡಗಿದರು. ಆದರೆ ಕೆಳಗೆ ನಿಂತಿದ್ದ ಕೇಶವಾಚಾರ್ಯರು ಬಿಡಬೇಕಲ್ಲ. 'ಹೇಗೂ ಹತ್ತಿದ್ದೀಯ ನನಗೂ ಎರಡು ಕಿತ್ತಾಕು' ಎಂದರು ಕಿತ್ತು ಹಾಕಿ ಕೆಳಗೆ ಬಂದರೆ ನಾಲ್ಕು ಎಳನೀರನ್ನು ಜೋಡಿಸಿಕೊಂಡ ಕೇಶವಾಚಾರ್ಯರು ಮರದ ಕೆಳಗೆ ಹಾಕಿದ್ದ ತಲೆ ಚೌಕವನ್ನು ಹೊತ್ತೊಯ್ಯಬೇಕೇ! ಹೋಗಲಿ ಚೌಕವನ್ನಾದರೂ ಕೊಡಿ ಎಂದರೆ 'ನಡಿ ಪೋಲಿಸ್ ಸ್ಟೇಷನ್‌ಗೆ , ಇಲ್ಲ ನಿಮ್ಮಪ್ಪಂಗೆ ಹೇಳಿ ಬಿಡಲಾ?' ಎಂದಾಗ ವಿಧಿಯಿಲ್ಲದೆ ಚೌಕ, ಎಳನೀರು ಎರಡನ್ನು ಕಳೆದುಕೊಂಡು ಬೇಸರದಿಂದ ನಡೆದರಂತೆ.

ತುಂಟ ತನವೆಂದರೆ ಅಸಾಧ್ಯ ತುಂಟತನ. ಗೊರೂರಿನಲ್ಲಿ ದೇವಸ್ಥಾನಗಳಿಗೇನು ಕಡಿಮೆಯೋ! ಪರವಾಸು ದೇವರ ದೇವಸ್ಥಾನದ ಮೇಲ್ಚಾವಣಿಯಲ್ಲಿ ಗಾರೆಯಲ್ಲಿ ಮಾಡಿದ್ದ; ನಾಜೂಕು ಕೆತ್ತನೆ ಕೆಲಸದ ಗೋವರ್ಧನ ಗಿರಿಧಾರಿ, ರಾಸ ಕ್ರೀಡೆಯ ಚಿತ್ರಗಳಿದ್ದುವಂತೆ, ಆದೇನು ಉಮೇದು ಬಂತೋ ಗುರಿಯಾರಿಗೆ ಚೆನ್ನಾಗಿದೆ ಎಂದು ಪರೀಕ್ಷಿಸಲು ಹೊರಟ ಇವರ ತಂಡವು ಈ ಎರಡು ವಿಗ್ರಹಗಳಿಗೂ ಕಲ್ಲುಗಳಿಂದ ಹೊಡೆಯ ತೊಡಗಿದರು. ಸ್ವಲ್ಪ ಹೊತ್ತಿನಲ್ಲಿಯೇ ವಿಗ್ರಹಗಳೆಲ್ಲ ಮುಕ್ಕಾಗಿ ನುಣ್ಣಗಾಗಿ ಬಿಟ್ಟವಂತೆ. ಅಂದು ಮಾಡಿದ ಈ ದುಷ್ಕೃತ್ಯವನ್ನು ನೆನೆಯುತ್ತ ''ಅಂದು ಎಂಥ ಕೆಲಸಮಾಡಿಬಿಟ್ಟೆ, ಎಂಥ ದುಷ್ಟ ಪ್ರವೃತ್ತಿ ಆವರಿಸಿತೋ, ಅಂದು ಮಾಡಿದ ತಪ್ಪಿಗೆ ಇವತ್ತೂ ಛಡಿ ಏಟಿನ ಶಿಕ್ಷೆ ವಿಧಿಸಿದರೆ ಸಂತೋಷದಿಂದ ಸ್ವೀಕರಿಸುತ್ತೇವೆ ಎಂದಿದ್ದಾರೆ.

ಬಾಲ್ಯದ ಜೀವನವೇ ಹಾಗೆ, ಪ್ರತಿಯೊಂದರಲ್ಲೂ ಕುತೂಹಲವನ್ನು ತುಂಬಿಕೊಂಡಿರುತ್ತೇವೆ. ಅದನ್ನರಿಯಲು ಪ್ರಯೋಗ ಮಾಡತೊಡಗುತ್ತೇವೆ. ಕುತೂಹಲ ನಿವಾರಣೆಯಾಗುವವರೆವಿಗೂ ಮನಸ್ಸಿಗೆ ಸಮಾಧಾನವಿರುವುದಿಲ್ಲ. ಗೊರೂರರಿಗೂ ಆದದ್ದು ಹೀಗೆ – ಊರಿಗೊಬ್ಬ ಭೈರಾಗಿ ಬಂದ. ಆತ ಬಿಂದಿಗೆ ನೀರು ಕುಡಿದು ಬಾಯಿಂದ ಬಿಡುವುದು, ಹರಿದ ಬಟ್ಟೆಯನ್ನು ಮೊದಲಿನಂತೆ ಒಂದಾಗಿಸುವುದು, ನೂಲಿನ ಉಂಡೆ ನುಂಗಿ ಬಾಯಿಂದ ದಾರವನ್ನು ಎಳೆಯುತ್ತಲೇ ಇರುವುದು, ಹೀಗೆಲ್ಲಾ ಮಾಡಿತೋರಿಸಿದಾಗ ಗೊರೂರರಿಗೆ ಹೇಗಾದರೂ ಮಾಡಿ ಆ ವಿದ್ಯೆಯನ್ನು ಕಲಿಯಬೇಕೆಂದು ತೀರ್ಮಾನಿಸಿ ಭೈರಾಗಿ ಉಳಿದುಕೊಂಡಿದ್ದ ಪಾಳು ದೇವಸ್ಥಾನಕ್ಕೆ ಸಂಜೆ ಹೋಗಿ, ಅವನ ಬಳಿ ಬೇಡಿಕೊಂಡರು. 'ಮೂಕಾಂಬಿಕೆಯನ್ನು ಜಪಮಾಡಿ ಒಲಿಸಿಕೊಳ್ಳಬೇಕು, ಇದು ನಿನ್ನಂತಹ ಹುಡುಗರಿಗೆ ಕಷ್ಟ' ಎಂದು ಹೇಳಿದರೂ ಕೇಳದೆ, ಭೈರಾಗಿ ವಿಧಿಸಿದ ಐದು ರೂಪಾಯಿ ಶುಲ್ಕಕ್ಕೆ ನಾಲ್ಕು ರೂ. ಹೊಂದಿಸಿಕೊಟ್ಟು, ನಲವತ್ತೆಂಟು ದಿವಸ ದೇಹದ ಅರ್ಧಮಟ್ಟದ ನೀರಿನಲ್ಲಿ ನಿಂತು, ಕೆಂಪು ಹೂವು ಸಮರ್ಪಿಸಿ ''ಓಂ, ಹ್ರೀಂ, ಶ್ರೀಂ, ಕ್ಲೀಮ್, ಭೋಂ, ರೋಂ, ಮಹಾಮಾಯೇ, ಮಹಾಕಾಳೇ, ಏಳುನಾಲಿಗೆ ಧುರಗಿ ಅಸ್ತ್ರಾಯಫಟ್ ಓಂ ಭಟಸ್ವಾಹಾ'' ಎಂದು ಹೇಳಿದ್ದಾಯಿತು. ಆದರೆ ಅದನ್ನು ಮಾಡಿದ ನಂತರವೂ ಇವರ ಪ್ರಯೋಗದಿಂದ ನೂಲನ್ನು ನುಂಗಿದಾರ ತೆಗೆಯಲಾಗಲಿಲ್ಲ, ಹರಿದ ಬಟ್ಟೆಯನ್ನು ಒಂದಾಗಿಸಲೂ ಇಲ್ಲ. ಬಟ್ಟೆಯಂತು ಹರಿದು ಗುಡ್ಡೆ ಹಾಕಿದ್ದಾಯಿತು.

ಹೀಗೆ ಬಾಲ್ಯದಲ್ಲಿ ಮೊಳೆತದ್ದು ಇನ್ನೂ ಆಳವಾಗಿ ಅವರ ಒಳಮನಸ್ಸಿನಲ್ಲಿ ಸೇರಿಕೊಂಡಿದ್ದು, ಹೈಸ್ಕೂಲು ಓದಲು ಹೋದಾಗಿನ ಮತ್ತೊಂದು ಪ್ರಸಂಗವೆಂದರೆ ಪ್ರೊಫೆಸರ್ ಷಾ ಎಂಬುವರ ಮ್ಯಾಜಿಕ್ ಪ್ರದರ್ಶನ ನೋಡಿದ್ದು. ಇದನ್ನು ನೋಡಿದ ನಂತರ ಹಿಂದಿನ ನೆನಪು ಒದ್ದುಕೊಂಡು ಬಂತು. ಹೇಗಾದರೂ ಮಾಡಿ ಈ ಸಾರಿ ಮ್ಯಾಜಿಕ್ ಮಾಡುವುದನ್ನು ಕಲಿಯಲೇಬೇಕೆಂದು ನಿರ್ಧರಿಸಿ, ಅವರನ್ನು ಹುಡುಕಿಕೊಂಡು ಹೋದರು. 'ಇದೆಲ್ಲ ಕೇವಲ ಕೈಚಳಕ, ಇದಕ್ಕೆ ಕೆಲವು ಉಪಕರಣಗಳುಬೇಕಾಗುತ್ತವೆ. ಅದಕ್ಕೆ ನಿನ್ನಲ್ಲಿ ಹಣವಿದೆಯಾ? ನೀನಿನ್ನೂ ಕಲಿಯುತ್ತಿರುವ ಹುಡುಗ' ಎಂದಾಗ, ಇಲ್ಲ ನಾನು ಕೊಂಡುಕೊಳ್ಳುತ್ತೇನೆ ಎಂದರು. ಯಕ್ಷಿಣಗಾರ ವಿಳಾಸ ನೀಡಿದ. ವಿಪಿಪಿ ಬಂದೆ ಬಿಟ್ಟಿತು. ಯಾರದ್ದೋ ಹಣವನ್ನು ಉಪಯೋಗಿಸಿಕೊಂಡು ವಿಪಿಪಿಯನ್ನು ಬಿಡಿಸಿಕೊಂಡರೆ ಒಂದು ವರ್ಣರಂಜಿತ ದಂಡ, ಕಟ್ಟಿನ ಪೊಟ್ಟಣ, ಮತ್ತೇನೊ ವಸ್ತುಗಳು ಬಹಳ ಖುಷಿಯಿಂದಲೇ ಪ್ರತಿಯೊಂದನ್ನು ಉಪಯೋಗಿಸಿ ಯಕ್ಷಿಣಿ ಮಾಡಿ ಜನರನ್ನು ಮರುಳುಮಾಡಿಬಿಡಬಹುದು ಎಂದು ಒಳಗಿದ್ದ ಪೆಟ್ಟಿಗೆಯನ್ನು ಬಿಚ್ಚಿನೋಡಿದರು. ಅದರಲ್ಲೊಂದು ಚೀಟಿ. ''ಮಂತ್ರದಂಡ ರವಾನಿಸಿದೆ, ನಮ್ಮ ಜಯಕ್ಕೆ ಇದೇ ಮೂಲ'' ಎಂದಿತಂತೆ. ತಂದೆಗೆ ಈ ವಿಷಯ ತಿಳಿದು 12 ರೂ. ಸಾಲವನ್ನು ಅವರು ತೀರಿಸಿದರು.

ಪ್ರೈಮರಿ ಸ್ಕೂಲಿನಲ್ಲಿದ್ದಾಗ ಹೆಡ್ಮಾಸ್ಟರ ಮನೆಗೆ ಓದಿಕೊಳ್ಳಲು ರಾತ್ರಿಹೊತ್ತು ಹೋಗುತ್ತಿದ್ದರಂತೆ. ಹೆಡ್ಮಾಸ್ಟರು ತಮ್ಮ ಮಗನಿಗೆ ಪಾಠ ಹೇಳಿಕೊಡುವಾಗ ಇವನೂ ಜೊತೆಯಲ್ಲಿದ್ದರೆ ನಾಲ್ಕಕ್ಷರ ಕಿವಿಯ ಮೇಲೆ ಬೀಳಲಿ ಎಂಬ ಯೋಚನೆ ಇವರ ತಂದೆಯದು. ಆದರೆ ಸಂಜೆ ಆರುವರೆಗೆ ಪಾಠ ಶುರುವಾಗಿ ಎಂಡುವರೆಗೆ ನಿಲ್ಲಿಸಿ. ಇವರನ್ನು ಊಟಕ್ಕೆ ಕಳುಹಿಸಿ, ತಾವೂ ಊಟಕ್ಕೆ ಹೆಡ್ಮಾಸ್ಟರು ಹೋಗುತ್ತಿದ್ದರಂತೆ. ಆದರೆ ಗೊರೂರರ ಮನೆಯಲ್ಲಿ ರಾತ್ರಿ ಒಂಬತ್ತಾದರೂ ಊಟದ ಏರ್ಪಾಡಾಗುತ್ತಿರಲಿಲ್ಲ. ಮಧ್ಯಾಹ್ನ ಉಳಿದಿದ್ದನ್ನು ಇವನು ಸಂಜೆಯೇ ಉಂಡು ಹೋದರೆ ಅವರ ಊಟದ ಸಮಯದಲ್ಲೂ ಅಲ್ಲೇ ಕುಳಿತು ಓದಿಕೊಳ್ಳಬಹುದು ಎಂಬುದು ತಂದೆಯವರ ವಾದ. ಆದರೆ ಇವರಿಗೆ ಬೇಗ ಊಟಮಾಡಿಬಿಟ್ಟರೆ 9 ಗಂಟೆ ಹೊತ್ತಿಗೆ ಅರಗಿ ಹಸಿವೆ ತಡೆಯದಾಗುತ್ತಿತ್ತು. ಈ ಕಷ್ಟವನ್ನು ಯಾರ ಮುಂದೆಯೂ ಹೇಳಿಕೊಳ್ಳಲಾಗದೆ ಹಾಗೇ ಅನುಭವಿಸುತ್ತಿದ್ದರು.

ಹೀಗೊಮ್ಮೆ ಓದಿನ ನಂತರ ಹೆಡ್ಮಾಸ್ಟರ ಮನೆಯವರು ಊಟಕ್ಕೆ ಕುಳಿತಾಗ ಇವರಿಗೆ ಹಸಿವೆ ತಡೆಯಲಾಗಲಿಲ್ಲ, ಮನೆಗೂ ಹೋಗುವಂತಿಲ್ಲ. ಎಲ್ಲರೂ ಆದರೆ ಹೆಡ್ಮಾಸ್ಟರ ತಾಯಿಯವರು ಪಕ್ಕದ ರೂಮಿನಲ್ಲಿ ಅವಲಕ್ಕಿ ತುಂಬಿದ ಡಬ್ಬವನ್ನು ಇಟ್ಟಿದ್ದನ್ನು ಗೊರೂರರು ನೋಡಿದ್ದರು. ಸರಿ, ಎಂದು ಕತ್ತಲೆಯಲ್ಲೆ ಹೋಗಿ ಕೈಹಾಕಿ ಅವಲಕ್ಕಿ ಕದ್ದು ಜೇಬಿಗೆ ತುಂಬಿಕೊಂಡು ಬಂದು ಮೆಲ್ಲತ್ತಾ ಓದತೊಡಗಿದರು. ಇವರ ದುರದೃಷ್ಟಕ್ಕೆ ಅವಲಕ್ಕಿ ಜೊತೆ ಚಿನ್ನದ ಜಡೆ ಬಿಲ್ಲೆಯೂ ಸಿಗಬೇಕೆ? ನೋಡಿದ ತಕ್ಷಣ ಜಂಘಾಬಲವೇ ಉಡುಗಿಹೋಯಿತು. ಪಾಠದ ನಂತರ ಹೇಗಾದರೂ ಮಾಡಿ ಅದನ್ನು ಅವಲಕ್ಕಿ ಡಬ್ಬಕ್ಕೆ ಸೇರಿಸಿ ಬಿಡಬೇಕೆಂದು ನಿರ್ಧರಿಸಿದರು. ಪಾಠ ಮುಗಿಯಿತು, ಎಲ್ಲರೂ ಮಲಗಿದರು. ಇವರಿಗೆ ನಿದ್ದೆಯೇ ಬಾರದು ಹೊರಳಾಡಿದರು. ಎಲ್ಲರೂ ಗೊರಕೆ ಹೊಡೆಯತೊಡಗಿದಾಗ ಮೆಲ್ಲನೆದ್ದು ಜಡೆಬಿಲ್ಲೆಯನ್ನು ಸ್ವಸ್ಥಾನಕ್ಕೆ ಸೇರಿಸಲು ಹೊರಟರು. ಅವಲಕ್ಕಿ ಡಬ್ಬ

ತೆಗೆಯುವಾಗ ಅದರ ಮುಚ್ಚಳದ ಮೇಲಿದ್ದ ಇನ್ನೊಂದು ಡಬ್ಬ ಕೆಳಗೆ ಬಿದ್ದ ಸದ್ದಿಗೆ ಯಾರು? ಎಂದು ಹೆಡ್ಮಾಸರ ತಾಯಿ ಎದ್ದರು. ಎಚ್ಚರಗೊಂಡ ಹೆಡ್ಮಾಸರು ದೀಪ ಹಚ್ಚಿದರು. ಇವರಿಗೆ ಕೈಕಾಲುಗಳಲ್ಲಿ ನಡುಕ 'ನೀರು ಕುಡಿಯಲು ಎದ್ದಿದ್ದೆ' ಎಂದು ಸುಳ್ಳು ಹೇಳಿದರು. ನೀರು ಅಲ್ಲೇ ಇತ್ತಲ್ಲ ಎಂದು ಉಬ್ಬಿದ ಜೇಬಿನ ಕಡೆ ಕೈ ಹಾಕೇ ಬಿಟ್ಟರು. ಕಳ್ಳತನ ಮಾಡಿ ಸಿಕ್ಕಿ ಬಿದ್ದಿದ್ದರು. ಜೇಬಿನಲ್ಲಿ ಜಡೆಬಿಲ್ಲೆ! ಹೆಡ್ಮಾಸ್ಟರು ಕೆನ್ನೆಗೆ ಬಾರಿಸಿದರು. ಅವಮಾನದಿಂದ ಗೊರೂರಿಗೆ ಅಳಲೂ ಆಗದೆ ಹೋಗಿ ಮಲಗಿದರು. ನಿದ್ದೆ ಹಾರಿಹೋಯಿತು. ಮೂರನೆಯದಿನ ಹೆಡ್ಮಾಸರು ತನ್ನ ತಂದೆಗೆ ದೂರು ಹೇಳುತ್ತಾರೆಂದು ನೆನೆದು ಹೆದರಿದರು. ಆದರೆ ಹೆಡ್ಮಾಸ್ಟರು ಹೇಳಲಿಲ್ಲ. ಹಸಿವಿನಿಂದ ಹಾಗೆ ಮಾಡಿದೆ. ಜಡೆಬಿಲ್ಲೆ ದೊರೆತದ್ದನ್ನು ವಾಪಸ್ಸು ಇಡಲು ಹೋಗಿದ್ದೆ ಎಂದು ನಿಜಸ್ಥಿತಿ ವಿವರಿಸಿದಾಗ ಹೆಡ್ಮಾಸ್ಟರು ಅನ್ಯಥಾ ಹೊಡೆದೆನೆಂದು ಪಶ್ಚಾತ್ತಾಪ ಪಟ್ಟರಂತೆ.

ಇದಾಗಿ ಎಷ್ಟೋ ವರುಷಗಳ ನಂತರ ಗೊರೂರರನ್ನು ಸಂಧಿಸಿದ ಹೆಡ್ಮಾಸ್ಟರು ''ಅವಲಕ್ಕಿ ಕದಿಯುವುದನ್ನು ಈಚೆಗೆ ನಿಲ್ಲಿಸಿಬಿಟ್ಟೆಯಾ?'' ಎಂದು ಕೇಳಿದಾಗ, ಅವಲಕ್ಕಿ ಜೊತೆ ಜಡೆಬಿಲ್ಲೆಯನ್ನು ಈಗ ಯಾರಿಡುತ್ತಾರೆ ಎಂದು ಗೊರೂರರು ಹೇಳಿದಾಗ ಹೆಡ್ಮಾಸ್ಟರು ನಕ್ಕರಂತೆ.

ಚಿಕ್ಕವಯಸ್ಸಿನಲ್ಲಿ ಪ್ರತಿಯೊಬ್ಬ ಹುಡುಗರೂ ಸುಳ್ಳು ಹೇಳಬಾರದೆನ್ನುವುದಕ್ಕಿಂತ ಯಾವುದೋ ಒಂದು ಆಕರ್ಷಣೆಗೆ ಒಳಗಾಗಿ ಕಾರ್ಯಮಾಡಿ, ಅದನ್ನು ಮುಚ್ಚಿಕೊಳ್ಳಲು ಏನೋ ಒಂದು ಉತ್ತರ ಕೊಟ್ಟು ಬಚಾವಾದರೆ ಸಾಕೆಂದು ಬಯಸುವ ಮನಸ್ಸಿಗೆ ಸುಳ್ಳು ಹೇಳುತ್ತಿದ್ದೇವೆ ಎಂದು ಎನಿಸುವುದೇ ಇಲ್ಲ. ಗೊರೂರರು ಹಾಸನದ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಜಾತ್ರೆಯ ಸಂದರ್ಭದಲ್ಲಿ ನಾಟಕ ಕಂಪೆನಿಗಳು ಹಾಸನದಲ್ಲಿ ಮೊಕ್ಕಾಂ ಮಾಡುತ್ತಿದ್ದವು. ಇವರಿಗೆ ನಾಟಕಗಳೆಂದರೆ ಬಲು ಇಷ್ಟ ಅಂದು ಯಾವುದೋ ನಾಟಕ ನೋಡಲು ಹೋಗಿ ಕುಳಿತಿದ್ದಾರೆ. ವಿರಾಮದ ವೇಳೆಯಲ್ಲಿ ನೋಡಿದರೆ ಕೆಂಪು ಶಾಲು ಹೊದಿದ್ದ ತಂದೆಯವರು ಮುಂದೆ ಕುಳಿತಿದ್ದಾರೆ. ನಾಟಕ ಮುಗಿದನಂತರ ಅವರಿಗೆ ಕಾಣದಂತೆ ರೂಮು ಸೇರಿದರು.

ವಾರದ ಕೊನೆಯಲ್ಲಿ ಮನೆಗೆ ಬಂದ ಮಗನೊಡನೆ 'ಹಾಸನದಲ್ಲಿ ಅಂದು ಉಳಿಯಬೇಕಾಯಿತು, ನಾಟಕ ನೋಡಲು ಹೋಗಿ ನಿನ್ನನ್ನು ನೋಡಿದೆ' ಎಂದಾಗ ಗೊರೂರಿಗೆ ಕೈಕಾಲುಗಳು ಮರಗಟ್ಟಿದ ಅನುಭವ ಸಾವರಿಸಿಕೊಂಡು 'ಇಲ್ಲ, ನಾನು ನಾಟಕಕ್ಕೆ ಹೋಗಿರಲಿಲ್ಲ' ಎಂದು ಬಿಟ್ಟರು. ಇವರ ತಂದೆಯವರಿಗೆ ಅಸಾಧ್ಯ ಕೋಪಬಂತು. ಸುಳ್ಳು ಹೇಳುವುದನ್ನು ಎಂದೂ ಸಹಿಸರು. ಆದರೂ ಮಾತನಾಡಲಿಲ್ಲ ಅಂದು ಪೂರ್ತಾ ತಂದೆಯವರ ಕಣ್ಣು ತಪ್ಪಿಸಿ ಓಡಾಡಿಕೊಂಡಿದ್ದರು.

ಹಾಸನಕ್ಕೆ ಹೊಂದಿರುಗುವ ದಿನ ಬಂತು. ತಂದೆಯವರೇ ಊರ ಹೊರಗಿನ ತನಕ ಬಿಟ್ಟು ಬರುವ ವಾಡಿಕೆ. ಅಂತೆಯೇ ಗೊರೂರರೊಡನೆ ತಂದೆಯೂ ಹೊರಟರು. ಇನ್ನೂ ನೀವು ಹೊರಡಿ, ನಾನು ಹೋಗುತ್ತೇನೆ ಎಂದಾಗ ಆಕಾಶ ನೋಡುತ್ತಾ ನಿಂತ ತಂದೆಯನ್ನು ನೋಡಿ ದಿಗ್‌ಭ್ರಮೆಯಾಯಿತು. ಬೈಯ್ಯಲಿಲ್ಲ, ಉಪದೇಶಿಸಲಿಲ್ಲ. ಅವರ ಮೂಕ ವರ್ತನೆ ಇವರ ಹೃದಯಕ್ಕೆ ಪೆಟ್ಟುಕೊಟ್ಟಿತು. ''ಅಣ್ಣ ಅಂದು ನಾಟಕಕ್ಕೆ ಹೋಗಿದ್ದೆ ನೀವು

ಕೋಪದಿಂದ ಹೊಡೆಯುತ್ತಿರೆಂದು ಸುಳ್ಳು ಹೇಳಿದೆ, ನಾನು ಮಾಡಿದ್ದು ತಪ್ಪು'' ಎಂದರು. ತಂದೆಯ ಕಣ್ಣಿಂದ ನೀರು ಹರಿಯುತ್ತಿತ್ತು. ಹೌದು, ನಾನು ನಿಮಗೆಲ್ಲ ಭಯಪಡುವಂತೆ ಮಾಡಿದ್ದರಿಂದ ನೀವು ಸುಳ್ಳು ಹೇಳುತ್ತಿದ್ದಿರಿ, ನನ್ನದೇ ತಪ್ಪು ಹೋಗಲಿ ಇಂದು ನಿಜ ಹೇಳಿದೆಯಲ್ಲ ಅಷ್ಟೇ ಸಾಕು, ಸಂತೋಷವಾಗಿದೆ. ಎಂದೂ ಸುಳ್ಳು ಹೇಳಬೇಡ ಎಂದು ತಲೆ ಸವರಿ ಹೋಗಿ ಬಾ ಎಂದು ಕಳುಹಿಸಿದರಂತೆ.

ಅಂದು ತಂದೆಯವರಿಗೆ ಸುಳ್ಳು ಹೇಳಿ ಮಾಡಿದ ಆಘಾತವನ್ನು ಎಂದೂ ಮರೆಯಲಿಲ್ಲ. ''ನನಗೆ ಬುದ್ಧಿತೋರಿದಂತೆ ಸತ್ಯದ ದಾರಿಯಲ್ಲಿ ನಡೆಯಲು ಪ್ರಯತ್ನಿಸಿದ್ದೇವೆ. ಎಡವಿಲ್ಲವೆಂದು ಹೇಳಲಾರೆ. ಶ್ರಮ ಪಟ್ಟು ಮತ್ತೆ ನೇರಹಾದಿ ಹಿಡಿದಿದ್ದೇವೆ'' ಎಂದು ಪಶ್ಚಾತ್ತಾಪ ಪಟ್ಟದ್ದನ್ನು ಎಷ್ಟೋ ವರುಷಗಳ ನಂತರ ನೊಂದು ನುಡಿದಿದ್ದಾರೆ.

ಅಷ್ಟೆಲ್ಲವನ್ನು ತಲೆಯಲ್ಲಿ ತುಂಬಿಕೊಂಡು ಸ್ವಂತ ಅನುಭವದ ಗಣಿ ಎನಿಸಿದ್ದ ಗೊರೂರರಿಗೆ ಬರವಣಿಗೆ ಎಂಬುದು ಬಾಲ್ಯದಿಂದಲೇ ಸಿದ್ಧಿಸಿದ ಶಕ್ತಿ ಎಂಬುದು ಬಹುಮಂದಿ ಓದುಗರ ಗಮನಕ್ಕೆ ಬಂದಿಲಾರದು.

ಹಾಸನದಲ್ಲಿ ಓದುತ್ತಿದ್ದ ಇವರ ಸ್ನೇಹಿತ ಸಾಹುಕಾರ ರಾಮು, ರಜ ಬಂದಿತೆಂದರೆ ಗೊರೂರಿಗೆ ಓಡಿ ಬರುವ. ಇವನು ಮತ್ತಿತರೊಡನೆ ಸೇರಿದ ಗೊರೂರರು, ಗೊರೂರಿನಲ್ಲಿ ಆಂಜನೇಯ ಮೂರ್ತಿ ಸಮಾಜ ಸ್ಥಾಪಿಸಿ ಊರನೈರ್ಮಲ್ಯ, ಸಾಮಾಜಿಕ ಕಾರ್ಯ, ದೇವತಾ ಕಾರ್ಯಗಳನ್ನು ಎಳೆಯ ವಯಸ್ಸಿನಲ್ಲಿಯೇ ಪ್ರಾರಂಭಿಸಿದರು. ಇವರ ಬಾಲ್ಯ ಸ್ನೇಹಿತರಾದ ಗುಂಡೂರಾವ್ (12 ವರ್ಷ) ಮತ್ತು ಪೆರುಮಾಳ್ (16 ವರ್ಷ) ಇಬ್ಬರೂ ಅಕಾಲ ಮರಣಕ್ಕೆ ತುತ್ತಾದಾಗ, ಇವರಿಬ್ಬರ ಬಗ್ಗೆ ಕಿರು ಪುಸ್ತಕ ಬರೆದು ಬಹುಮಾನ ಕೊಡುವುದಲ್ಲದೆ, ಬಹುಮಾನ ವಿತರಣಾ ದಿನ ಆ ಪುಸ್ತಕವನ್ನು ಸಭೆಯಲ್ಲಿ ಓದುವುದೆಂದು ತೀರ್ಮಾನಿಸಿದರು.

ಪೆರುಮಾಳ್ ಬಗ್ಗೆ ಸಾಹುಕಾರ ರಾಮನು, ಗುಂಡುರಾವ್ ಬಗ್ಗೆ ಗೊರೂರರು ಬರೆಯತೊಡಗಿದರು. ಪೆರುಮಾಳ್ ಬಹಳಷ್ಟು ಕೆಲಸ ಮಾಡಿದ್ದರಿಂದ ಬರೆಯಲು ವಸ್ತುವಿತ್ತು. ಆದರೆ ಗುಂಡೂರಾವ್ ಬಗ್ಗೆ ಬರೆಯಲು ವಿಷಯವೇ ಇಲ್ಲದಿದ್ದುದರಿಂದ ಗೊರೂರರು, ಹೇಮಾವತಿ ನದಿ, ನರಸಿಂಹಸ್ವಾಮಿ ದೇವಸ್ಥಾನ, ಹೇಮಾವತಿ ಯಗಚಿ ಸಂಗಮ ಮುಂತಾದ ಗೊರೂರಿನ ವರ್ಣನೆಯನ್ನೆಲ್ಲ ಗುಂಡುರಾವ್ ಕತೆಯಲ್ಲಿ ತುಂಬಿ ಬಹುಮಾನವನ್ನು ಗಿಟ್ಟಿಸಿದರಂತೆ.

ಅವರಿಬ್ಬರು ಬಾಲ್ಯದಲ್ಲಿ ಮೃತರಾದರೂ ಅವರ ಕಥೆ ಬರೆಯಲು ಚರಿತ್ರಕಾರರು ಸಿಕ್ಕಿದರು. ಇಂದು ನಮಗೆ ಯಾರಾದರು ಚರಿತ್ರಕಾರರು ಸಿಗುತ್ತಾರೆಯೇ ಎಂದಿದ್ದಾರೆ. ಕಾಲಾನುಕ್ರಮದಲ್ಲಿ ಇನ್ನೊಂದು ಜನ ಬರಹಗಾರರು ಗೊರೂರರ ಸ್ಮರಣೆ ಮಾಡುತ್ತಾರೆಂದು ಅವರು ನಿರೀಕ್ಷಿಸಿಯೇ ಇರಲಿಲ್ಲ.

ಹೀಗೆ ಗೊರೂರರಿಗೆ ತುಂಟಾಟದ ಜೊತೆಗೆ ಬರವಣಿಗೆಯು ಬಾಲ್ಯದಿಂದಲೇ ಸಿದ್ಧಿಸಿದ್ದರಿಂದ ಹಲವಾರು ಘನ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿದರು.

*(ಗೊರೂರರ ಪುಸ್ತಕಗಳ ಆಧಾರ)*

# ಬೆಳ್ಳಗಾಯಿತೆ ತಲೆಕೂದಲು? ಬೇಸರವೇ? ಖಂಡಿತಾ ಬೇಡ

**- ಶಾಂತಮೂರ್ತಿ**

ಅರಿವಿಲ್ಲದೇ ಪರಿವರ್ತನೆಗೊಳ್ಳುತ್ತಿರುವ ಈ ಸಮಾಜದಲ್ಲಿ ವಯಸ್ಕರಿಗೆ ತುಂಬಾ ಅನುಕೂಲಗಳು ತಾವಾಗಿ ಒದಗಿ ಬರುತ್ತಿದೆ. ವಯಸ್ಕರು ಅಂದರೆ ''ಸೀನಿಯರ್ ಸಿಟಿಸನ್'' ಎಂದರ್ಥ. ಅಯ್ಯೋ! ಎಲ್ಲಾ 'ಸಿ' 'ಸಿ'ಗಳೂ ಒಂದೇ ಮನೋಭಾವನೆ ಯುಳ್ಳವರು ಎಂದರ್ಥವಲ್ಲ. ಕೆಲವು ಸಿ.ಸಿ.ಗಳು ಪ್ರಾಯದವರಿಗಿಂತಲೂ ಹೆಚ್ಚಾಗಿ ಎಲ್ಲಾ ದೈಹಿಕ, ಮಾನಸಿಕ ಚಟುವಟಿಕೆಗಳಲ್ಲಿ ಭಾಗಿಯಾಗಿರುತ್ತಾರೆ. ''ರಿಟೈರ್'' ಆದ ಮೇಲಂತೂ ಕಾರ್ಯಕ್ರಮಗಳಲ್ಲಿ, ದಿನಚರಿಯಲ್ಲಿ ತುಂಬಾ ಬದಲಾವಣೆಗಳು ಕಾಣಬರುತ್ತದೆ. ಉದಾ: ಊರೂರು ಸುತ್ತುವುದು, ಟ್ರೆಕ್ಕಿಂಗ್, ಜಾಗಿಂಗ್, ಬೆಟ್ಟ-ಗುಡ್ಡ ಹತ್ತುವುದು.

ಗೆಟ್-ಟುಗೆದರ್‌ಗಳು, ಗೋ ಬ್ಯಾಕ್ ಸ್ಕೂಲ್ ಪಾರ್ಟಿಗಳು, ವೀಕೆಂಡ್ ಪಾರ್ಟಿಗಳು, ಸಾಯಂಕಾಲದ ಸಂಗೀತ, ನೃತ್ಯ, ಮೇಳಗಳಿಗೆ ಹೋಗುವುದು. ಒಂದೇ, ಎರಡೇ ಅನೇಕ ಚಟುವಟಿಕೆಗಳು. ಹಾಗೆ ನೋಡಿದರೆ ರಿಟೈರ್ ಆದ ಮೇಲೆ ಬಹಳ ''ಬಿಜಿ'' ಅಂತ ಹೇಳಿಕೊಂಡು ಹೆಮ್ಮೆಯಿಂದ ತಿರುಗುತ್ತಿರುತ್ತಾರೆ. ಇವರನ್ನೆಲ್ಲಾ ಸೀನಿಯರ್ ಸಿಟಿಸನ್ಸ್ ಅಂದರೆ ನಂಬುವುದು ಕಷ್ಟ. ಅವರೂ ಎಳೆಯರೇ ಎಂದು ಭಾವಿಸೋಣ.

ವಿಷಯಕ್ಕೆ ಬನ್ನಿ, ವಾಸ್ತವಕ್ಕೆ ಏನೆಂದರೆ 60 ವರ್ಷವಾದ ಮೇಲೆ ತಲೆಯ ಕಪ್ಪು ಕೂದಲು ಒಂದೊಂದೇ ನಿಧಾನವಾಗಿ ಬೆಳ್ಳಗಾಗಿ ಕರಿಕೂದಲಿನ ಮಧ್ಯೆ ಇಣಕಿ ಮೇಲೆ ಬಂದು - ಏ ನಿನಗೆ ವಯಸ್ಸಾಗುತ್ತಿದೆ. ನಿಧಾನ ಮಾಡಿಕೊ - ನಾನು ಎದ್ದೆ!! ಅಂತ ಅಣಕಿಸಿ ಹೇಳುತ್ತದೆ. ಆದರೆ ನಾವು ಹೆದರುತ್ತೇವೆಯೇ ಇಲ್ಲ. ಅದನ್ನು ತಲೆಗೇ ಮಟ್ಟಿ - ಏ, ನೀನು ಹೇಳಿದರೇನು? ಮಹಾ ನನ್ನನ್ನೇನೂ ಅಣಕಿಸಬೇಕಾಗಿಲ್ಲ. ಸುಮ್ಮನೆ ಇರು... ನಿನ್ನ ಪುನಃ ಕಪ್ಪು ಮಾಡುವ ವಿಧಾನ ನನಗೆ ಗೊತ್ತು ಅಂತ ಹೇಳಿ ತಲೆ ಮೇಲೆ ಮಟ್ಟಿ ಅಲ್ಲಗೆಳೆಯುವುದೂ ಉಂಟು.

ಕೆಲವೊಮ್ಮೆ ಯೋಚಿಸಿದರೆ ನಾವು ಯಾಕೆ ಅದನ್ನು ಪುನಃ ಕಪ್ಪು ಮಾಡುವ ತಾಪತ್ರಯ ಹಚ್ಚಿಕೊಳ್ಳುತ್ತೇವೆ? ಅನ್ನಿಸುತ್ತೆ. ಅದು ಬಿಟ್ಟು ಹೀಗೆ ಯಾಕೆ ಯೋಚನೆ ಮಾಡಬಾರದು? ನಾವು ಸೀನಿಯರ್ ಸಿಟಿಸನ್ಸ್ ಅಂತ ಗೊತ್ತಾಗುವುದೇ ಬಿಳಿ ಕೂದಲಿಂದ. ನಮಗೆ ಎಲ್ಲೆಡೆಯೂ ಗೌರವ ಹೆಚ್ಚುವುದಿಲ್ಲವೇ ಅಂತ. ಅದರಿಂದ ನಮ್ಮ ಹುಮ್ಮಸ್ಸು ಕಾರ್ಯಚಟುವಟಿಕೆಗಳಿಗೆ ಕುಂದು ಬರುವುದಿಲ್ಲವಲ್ಲಾ? ಆದರೆ ನಮ್ಮನ್ನು ನೋಡಿದ ಜನರ ಕಣ್ಣಿಗೆ ಮಾತ್ರ ನಾವು ''ಬಲಹೀನರು'' ಅಷ್ಟೆ. ಆದರೆ ಆ ಬಿಳಿ ಕೂದಲಿಗೂ ಕೂಡ ಪ್ರಾಮುಖ್ಯತೆ, ಮಾರ್ಯಾದೆ, ಗೌರವ ಕೂಡ ಕಾದಿರಿಸಿದ್ದು, ಹಲವಾರು ಉದಾಹರಣೆಗಳಿಂದ ಇದನ್ನು ನಿಮಗೆ ಸ್ಪಷ್ಟಪಡಿಸಲೇ?

ನಿಮ್ಮ ತಲೆಕೂದಲೆಲ್ಲಾ ಬೆಳ್ಳಗಾಯಿತು ಅನ್ನಿ. ಏನುಮಾಡುವುದು ನಿಮ್ಮಲ್ಲಿ ವಯಸ್ಸಾಗಿರುವ ಇನ್ನಾವ ಲಕ್ಷಣಗಳೂ ಕಾಣುತ್ತಿಲ್ಲ. ಆದರೂ ನಿಮ್ಮ ಅಕ್ಕಪಕ್ಕದವರು ನಿಮ್ಮ

ಸಹಾಯಕ್ಕೆ ಎಲ್ಲೆಡೆಯೂ ಮುಂದೆ ಬರುತ್ತಾರೆ. ಉದಾಹರಣೆಗೆ ನೀವು ಧೈರ್ಯವಾಗಿ ರೋಡ್‌ಕ್ರಾಸ್ ಮಾಡುವುದಲ್ಲಿದ್ದೀರಾ ಅಂದುಕೊಳ್ಳಿ – ಕೆಲವು ಯುವಕ ಅಥವಾ ಯುವಕಿಯರು ಹತ್ತಿರ ಬಂದು ನಿಮ್ಮ ಕೈ ಹಿಡಿದು ನಿಧಾನ, ನಿಧಾನ ಅಜ್ಜೀ ನಿಮ್ಮನ್ನು ''ಕ್ರಾಸ್'' ಮಾಡಿಸುತ್ತೇವೆ. ಆರಾಮವಾಗಿ ನನ್ನ ಜೊತೆ ಬನ್ನಿ ಅಂತ ನಿಮ್ಮನ್ನು ರೋಡ್ ಕ್ರಾಸ್ ಮಾಡಿಸಿ ಅವರ ದಾರಿಗೆ ಹೋಗುತ್ತಾರೆ. ನಿಮ್ಮ ಮನಸ್ಸು ನಿರಾಳಾನಾ?

ಇನ್ನೂ ಹೇಳುವುದಾದರೆ ಆಟೋದಲ್ಲಿ ಕೂರುತ್ತೀರಾ. ಬೆಂಗಳೂರಿನ ರಸ್ತೆ ಉದ್ದಕ್ಕೂ ಹಳ್ಳ ದಿಣ್ಣೆ ನಿಮ್ಮನ್ನ ಎತ್ತಿ ಹಾಕುತ್ತೆ. ಆದರೂ ಆಟೋ ಡ್ರೈವರ್ ಪಾಪ ವಯಸ್ಸಾದವರು ಕೂತ್ತಿದ್ದಾರೆ ಅಂತ ಹಳ್ಳ ದಿಣ್ಣೆಗಳನ್ನು ಅವೈಡ್ ಮಾಡಿಕೊಂಡು ಒಳ್ಳೆ ಹಾವಿನ ಓಟದ ಹಾಗೆ ಈ ಕಡೆ ಆ ಕಡೆ ನಿಧಾನವಾಗಿ ಚಲಿಸಿ ಮನೆ ತಲುಪಿಸುತ್ತಾನೆ. ನೋಡಿದಿರಾ! ಅಲ್ಲೂ ಬಿಳಿ ಕೂದಲಿನ ಪ್ರಭಾವ!?

ಸರಿ, ಯಾವಾಗಲಾದರೂ ಬಸ್ಸು ಹತ್ತುತ್ತೀರಾ? ನಿಮ್ಮ ತಲೆ ನೋಡಿದ ತಕ್ಷಣ ಪಾಪ, ಕಾಲೇಜು ಹುಡುಗಿಯರು ಸುಸ್ತಾಗಿ, ನಯಾನಾಜೂಕಾಗಿ ಬೆಳಗ್ಗೆಯಿಂದ ಕೊಂಚ ಫಾಸ್ಟ್ ಫುಡ್ ಏನೋ ತಿಂದು ಕೂತಿದ್ದರೂ ತಕ್ಷಣ ಎದ್ದು ಕುಳಿತುಕೊಳ್ಳಿ ಅಜ್ಜೀ – ಅಂತ ಸೀಟು ನಮಗಾಗಿ ಬಿಟ್ಟು ನಿಲ್ಲುತ್ತಾರೆ. ಪರವಾಗಿಲ್ಲಮ್ಮಾ ಸುಸ್ತಾಗಿದ್ದಿ ಕೂತುಕೋ ಅಂದರೂ ಕೇಳುವುದಿಲ್ಲ. ಅಲ್ಲೂ ನೋಡಿ ಬಿಳಿ ಕೂದಲಿನ ಚಮತ್ಕಾರ.

ಇನ್ನೂ ಸಿನಿಮಾ ಪೋಸ್ಟ್ ಆಫೀಸ್, ಬ್ಯಾಂಕ್‌ಗಳಿಗೆ ಹೋಗುತ್ತೀರಾ ಮುಂದೆ ನಿಂತಿರುವವರು ನಿಮಗಿಂತಾ ಚಿಕ್ಕವರಾಗಿದ್ದರೆ ಹಿಂದೆ ಸರಿದು ''ಹೋಗಿಮ್ಮ'' ಮುಂದೆ ಪಾಪ ನೀವು ಯಾಕೆ ಸಾಲಿನಲ್ಲಿ ನಿಲ್ಲಬೇಕು? ಪಾಪ, ಅಂತ ಜಾಗ ಬಿಡುವುದೇ ಅಲ್ಲ ''ಅಜ್ಜೀ ಏನಾದರೂ ಫಾರ್ಮ್ ಫಿಲ್ ಅಪ್ ಮಾಡಬೇಕಾ, ಬರೆದುಕೊಡಬೇಕಾ? ಕಾಣುತ್ತದೆಯೆ? ಎಂದು ಪ್ರಶ್ನೆಗಳ ಸರಮಾಲೆ ಹಾಕುತ್ತಾರೆ. ಅದು ಮುಜುಗರ ತಂದರೂ ಕೆಲಸ ಸುಲಭವಾಗುವುದಕ್ಕೆ ನಿಮ್ಮ ತಲೆ ಮೇಲಿನ ಬಿಳಿ ಕೂದಲು ಕಾರಣವಲ್ಲವೇ?

ಈಗಂತೂ ಏರ್‌ಪೋರ್ಟ್‌ಗಳಲ್ಲಿ ವೀಲ್ ಚೇರ್ ಟ್ರಾವೆಲರ್ಸ್ ಹಾವಳಿ ತಪ್ಪಿದ್ದಲ್ಲ, ಆಕಸ್ಮಾತ್ ನಿಮಗೆ ವೀಲ್ ಚೇರ್‌ನಲ್ಲಿ ಕೂರಲು ಮುಜುಗರ ಆದರೆ, ಹೇಗಿದ್ದರೂ ತಲೆಕೂದಲು ಬೆಳ್ಳಗಾಗಿ ಹೇಳುತ್ತಿದೆಯಲ್ಲಾ? ನೀನು ವಯಸ್ಸಾದವಳು/ರು ಅಂತ ಮರ್ಯಾದೆ ಸಿಕ್ಕೆ ಸಿಗುತ್ತೆ. ಅಲ್ಲಿ ನೀವು ಧೈರ್ಯ ಮಾಡಿ ಕ್ಯೂ ಓವರ್ ಟೆಕ್ ಮಾಡಿದರೆ ಯಾರೂ ನಿಮ್ಮನ್ನು ಹಿಂದೆ ಹಾಕುವ ಧೈರ್ಯ ಮಾಡಲ್ಲ. ಎರಡು ಹೆಜ್ಜೆ ಹಿಂದೆ ಸರಿದು – ಹೋಗಿ, ಹೋಗಿ ಅಂತ ಜಾಗ ಕೊಡುತ್ತಾರೆ. ಹೀಗೆ ಅನೇಕ ಕಾರಣಗಳಿಂದ ಒಳಿತು ಆದರೂ ಕೆಟ್ಟದೇನೂ ಆಗಿಲ್ಲ ಅನ್ನುವ ನಂಬಿಕೆ.

ಈಗ ಯೋಚನೆ ಮಾಡೋಣ ಹಾಯಾಗಿ ಬಿಳಿಕೂದಲೇ ಇರಲಿ ಅಂತ ಸುಮ್ಮನೆ ನೆಮ್ಮದಿ ಕಳೆದುಕೊಳ್ಳದೆ ಬೇಗ ''ಅಜ್ಜಿ'' ಪಟ್ಟ ಹೊತ್ತು ಮೆರೆಯೋಣವೇ? ಅಥವಾ ಅಯ್ಯೋ ಹಾಳಾದ್ದು ಬಿಳಿ ಕೂದಲು ''ಅಸಹ್ಯ'' ಅಂತ ಪ್ರತಿದಿನ ಕನ್ನಡಿ ಮುಂದೆ ನಿಂತು ವಾರಕ್ಕೆ 2-3 ಬಾರಿಯಾದರೂ ''ಚೆಲುವಿನ ಚಿತ್ತಾರ''ದ ಮೊರೆ ಹೋಗೋಣವೇ? ಯೋಚನೆ ಮಾಡಿ ಹೇಳಿ.

❁

# ಗಡ್ಡ ಮತ್ತ ಉಳ್ಳಾಗಡ್ಡಿ

**- ಬಾಲಚಂದ್ರ ಬಹದೂರ್ ದೇಸಾಯಿ**

ನಿಮಗೆ ಅನಿಸಿರಬಹುದು ಈ ಗಡ್ಡಕ್ಕೂ ಮತ್ತ ಉಳ್ಳಾಗಡ್ಡಿಗೂ ಏನ್ರಿ ಸಂಬಂಧ ಅಂತ? ಇದು ಇಮಾಮ ಸಾಬೀಗೂ ಮತ್ತ ಗೋಕಲಾಷ್ಟಮಿಗೂ ಏನ್ರಿ ಸಂಬಂಧ ಅಂದಂಗ ಅತ ಬಿಡ್ರಿ ಅಂದಕೊಬ್ಯಾಡಿ. ಇಲ್ಲೆ, ಗಡ್ಡಕ್ಕೂ ಮತ್ತ ಉಳ್ಳಾಗಡ್ಡಿಗೂ ಸಂಬಂಧ ಅದ, ಅದೇನಂದ್ರ ಕೆಲ ಧರ್ಮದವರು ಮತ್ತ ಬ್ರಾಹ್ಮಣರು ನೇಮ-ನಿತ್ಯ, ಜಪಾ-ತಪಾ, ಪೂಜಿ-ಪುನಸ್ಕಾರ, ಉಪವಾಸ-ವನವಾಸ ಅಂತ ಆಚರಣೆ ಮಾಡೋರು ತಮ್ಮ ವ್ರತ ಆಚರಣೆ ಕಾಲದೊಳಗೆ ಉಳ್ಳಾಗಡ್ಡಿ ತಿನ್ನೊದಿಲ್ಲಾ ಅವಾಗ ದಾಡಿ ಮಾಡಿಕೊಳ್ಳೋದರ ಬಗ್ಗೆ ಆಸಕ್ತಿ ವಹಿಸಿರೋದಿಲ್ಲಾ. ಹಿಂಗಾಗಿ ಆವಾಗ ಸುಮಾರು ಜನ ಗಡ್ಡಾ ಬಿಟ್ಟಿರತಾರ ಅಷ್ಟ ಈ ಆಧಾರದಮ್ಯಾಲೆ ಗಡ್ಡಕ್ಕೂ ಉಳ್ಳಾಗಡ್ಡಿಗೂ ಸಂಬಂಧ ಅದ ಅಂತ ಹೇಳೋದು. ಅಂವಾ ಗಡ್ಡಾ ಬಿಟ್ಟಾನ ಅಷ್ಟ...

> **ಅವ ಗಡ್ಡ ಬಿಟ್ಟಿದ್ದಿರಬಹುದು ಆದರೆ ಉಳ್ಳಾಗಡ್ಡಿ ಬಿಟ್ಟಿರಲಿಲ್ಲ....**


ಉಳ್ಳಾಗಡ್ಡಿ ಬಿಟ್ಟಿಲ್ಲಾ ಗಡ್ಡಾ ಬಿಟ್ಟಾನ ಅಂದ್ರ ಎಲ್ಲಾನೂ ಬಿಟ್ಟಾನ ಅಂತ ಅಲ್ಲಾ. ಸಾಧು-ಸಂತರು, ಕೆಲವೊಂದು ಧರ್ಮ, ಜನಾಂಗ ವ್ರತನಿಯಮಗಳನ್ನು ಹಿಡಿದವರು, ಬುದ್ಧಿ ಜೀವಿಗಳು, ವಿಜ್ಞಾನಿಗಳು, ಗಡ್ಡಾ ಮಾಡಿಕೊಳ್ಳಲಿಕ್ಕೆ ಟೈಮು ಇಲ್ಲದವರು, ನಿರ್ಗತಿಕರು, ಇತ್ಯಾದಿ ಇತ್ಯಾದಿ. ಅಲ್ಲದನ ಇಲ್ಲೆ ಒಂದ ಮಜಾ ಕೇಳ್ರಿಲ್ಲೆ ಗಡ್ಡಾ ಬಿಟ್ಟಿರೋ ನನ್ನ ದೋಸ್ತನ್ನ ಒಬ್ಬನ್ನ ಸುಮ್ನ ಕೇಳದೆ 'ಯಾಕೋ ದೋಸ್ತ ಗಡ್ಡಾಬಿಟ್ಟಿಯಲ್ಲೋ?' ಅಂತ ಅದಕ ಅಂವಾ 'ನಾ ಬಿಟ್ಟಿಲ್ಲೋ ಮಾರಾಯಾ ತಾವ ಬಂದಾವ' ಅನಬೇಕ!? ಇಂಥಾ ಎಲ್ಲಾ ಜನಾನೂ ಗಡ್ಡಾ ಬಿಟ್ಟವರ ಪೈಕೀನ ಬರತಾರ. ಹಂಗಂತ ಹೇಳಿ ಅವರು ಎಲ್ಲಾನೂ ಬಿಟ್ಟವರು, ಅಂದ್ರ ಸರ್ವಸಂಗ ಪರಿತ್ಯಾಗಿಗಳು ಅಂತ ಅರ್ಥ ಅಲ್ಲಾ. ಅಲ್ಲದನ ಗಡ್ಡಾ ತಗದವ್ರು ಏನೂ ಬಿಟ್ಟಿಲ್ಲಾ ಅಂತೂನೂ ಅರ್ಥ ಅಲ್ಲಾ. ಒಬ್ಬ ಮನುಷ್ಯ ನಡಕೊಳ್ಳೋ ರೀತಿ, ನೀತಿ, ನಡವಳಿಕಿ ಮ್ಯಾಲ ಅವನ ವ್ಯಕ್ತಿತ್ವ ಹಿಂಗ ಅದ ಅಂತ ಹೇಳಬಹುದ ವಿನಃ ಗಡ್ಡಾ ಬಿಟ್ಟಾನೋ ಇಲ್ಲೋ ಅನ್ನೋದರಮ್ಯಾಲಲ್ಲಾ.

ಒಟ್ಟಿನಮ್ಯಾಲ ಗಡ್ಡದ ವಿಷಯ ಅಂದ್ರ, ದೊಡ್ಡ ಕಥೀನ ಆದ.

ಒಮ್ಮೆ ಧಾರವಾಡಾಗ ನಮ್ಮ ಹುಚ್ಚಣ್ಣ ಮಾಮಾ ಅವರ ಮನಿಗೆ ಹೋಗಿದ್ದೆ. ಈಗ 85ರ ಹರೆಯದ ಅವರು ಭಾರಿ ಶ್ಯಾಣ್ಯಾರು ಸಾಹಸಿಗರು. ಭಾರತದ ದೂರವಾಣಿ ಇಲಾಖೆಯೊಳಗೆ ಅಗದೀ ಕನಿಷ್ಟ ಹುದ್ದೆಯೊಳಗೆ ಸೇರಿ ಅಗದೀ ದೊಡ್ಡ ಹುದ್ದೆ ಪಡಕೊಂಡು ರಿಟಾಯರ ಆಗಿ ತಮ್ಮ ವಿಶ್ರಾಂತಿ ಜೀವನದೊಳಗ ಮೊದಲ 12 ವರ್ಷ ವರದಹಳ್ಳಿ ಶ್ರೀ ಶ್ರೀಧರ ಆಶ್ರಮದಲ್ಲಿ ಸಾಧನಾ ಮಾಡಿ ಸಂತರಂತಾಗಿ ಮುಂಬಯಿಯಾಗ ಮಗನ ಮನಿಯೊಳಗ ಏಕಾಂತದಲ್ಲಿ ವಾಸಿಸುತ್ತಿದ್ದಾರೆ. ಅತ್ಯಂತ ಮೇಧಾವಿಗಳು, ಸಜ್ಜನರು, ಹಾಸ್ಯಪ್ರಜ್ಞೆಯನ್ನು ಹೊಂದಿರುವ ಈ ತತ್ವಜ್ಞಾನಿ 70ರ ದಶಕದೊಳಗ ಧಾರಾವಾಡದಾಗ ಅವರ ಮನಿಗೆ ಹೋದಾಗ ಮನಿ ಹತ್ರನ ಇರೊ ಅವರ ಗೆಳೆಯ ಅವರ ಮನಿಗೆ ಬಂದಿದ್ರು.

ಗಡ್ಡ ಬಿಟ್ಟಿದ್ದ ಅವರು ಬಿಳಿಲುಂಗಿ, ಮ್ಯಾಲ ಮಳಿ ಅದ ಅಂತ ಹೇಳಿ ಒಂದ ಸಣ್ಣ ಧೋತರ ಹೊತಗೊಂಡು ಬಂದಿದ್ರು. ಅವರ ಗುರ್ತು ಪರಿಚಯ ಮಾಮಿಗೆ ಇರ್ಲಿಲ್ಲೊ ಏನೋ ಏನಾದರೂ ತಿಂಡಿ ಚಹಾ ಮಾಡಿದರಾತು ಅಂತೋ ಏನೋ ಮಾಮಾನ್ನ ಒಳಗ ಕರದು, 'ಅಲ್ರಿ ಆ ನಿಮ್ಮ ಗೆಳಿಯಾ ಗಡ್ಡಾ ಬಿಟ್ಟಾರಲ್ಲಾ ಅವರು ಉಳ್ಳಾಗಡ್ಡಿ ತಿನ್ತಾರೋ ಇಲ್ಲ ಮತ್ತ?' ಅಂತ ಸಾವಕಾಶ ಕಿವಿಯೊಳಗ ಹೇಳೋದ್ರಾಗ ಹ,,ಹ,,ಹ,, ಅಂತ ಜೋರಾಗಿ ನಕ್ಕು ಕೇಕಿಹೊಡಕೋತ ''ಅಂವಾ ಗಡ್ಡಾ ಬಿಟ್ಟಾನ ಅಷ್ಟ ಉಳ್ಳಾಗಡ್ಡಿ ಬಿಟ್ಟಿಲ್ಲಾ'' ಅಂತ ಆ ಅತಿಥಿಗೂ ಕೇಳೋಹಂಗ ಹೇಳಿದ್ದಲ್ದೆ ಈ ಶೀನ್ಯಾ ಎಲ್ಲಮ್ಮನ ಗುಡ್ಡದ ಜ್ಯಾತ್ಯಾಗ ಮಂಡಕ್ಕಿ, ಮಿರ್ಚಿ, ಕಾಂದಾಬಜಿ ಎಲ್ಲೆ ಥೋಲೋ ಮಾಡ್ತಾರೋ ಅದನ್ನ ಹುಡಕ್ಯಾಡಿ ನಮ್ಮನ್ನ ಕರಕೊಂಡು ಹೋಗಿದ್ದು ನೆನಪಿಲ್ಲೇನ? ಅದ ಶೀನ್ಯಾನ ಇಂವಾ ಈಗ ಗಡ್ಡಾ ಬಿಟ್ಟಿದ್ದಕ್ಕೆ ನಿನಗ ಗೊತ್ತಹತ್ತಲಿಲ್ಲ ಅಷ್ಟ ಅಂವಾ ಉಳ್ಳಾಗಡ್ಡಿ ತಿಂತಾನ ನೀ ಬೇಕಾದ್ದ ತಿಂಡಿ ಮಾಡ ಏನ' ಅಂತ ಹೇಳೊಮುಂದ ಪಾಪ ಶೀನಪ್ಪಾ 'ಅಲ್ರಿ ವೈನಿಯವರ, ಈ ಹುಚ್ಚರಾಯ ಹೇಳೋದೆಲ್ಲಾ ಖರೇನ ಅದ. ಅದರ ನಾನು ಗಡ್ಡಾ ಬಿಟ್ಟಿದ್ದಕ್ಕೆ ಕಾರಣ ಬ್ಯಾರೆನ ಆದ ಬಿಡ್ರಿ' ಅಂತ ಅಡಿಗಿಮನಿಯೊಳಗಿರೊ ಮಾಮಿಗೆ ಕೇಳೋಹಂಗ ಒದರಿ ಗಡ್ಡಾಬಿಟ್ಟ ವಿಷಯಾನ ಹೇಳಿದಮ್ಯಾಲ ಮಾಮಾನ ಡೈಲಾಗ ನೆನಸಿಕೊಂಡು ನಕ್ಕಿದ್ದ..... ನಕ್ಕಿದ್ದು.......

## ಅವರವರ ಕೆಲಸ



ಅಗಸನ ಬಳಿ ನಾಯಿ ಮತ್ತು ಕತ್ತೆ ಇದ್ದವು. ಒಂದು ರಾತ್ರಿ ಕಳ್ಳ ಮನೆಗೆ ನುಗ್ಗಿದ. ಅಗಸನಿಗೆ ಗಾಢ ನಿದ್ದೆ. ಆದರೆ ನಾಯಿ ಮತ್ತು ಕತ್ತೆ ಎಚ್ಚರವಿದ್ದವು. ಒಡೆಯ ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಅಸಮಾಧಾನದಿಂದ ನಾಯಿ ಬೊಗಳಲಿಲ್ಲ. ಆದರೆ ಕತ್ತೆಗೆ ಚಿಂತೆ ಆಯಿತು. ಅದೇ ಜೋರಾಗಿ ಅರಚಿತು. ಸದ್ದಿಗೆ ಹೆದರಿದ ಕಳ್ಳ ಓಡಿದ ಆದರೆ ಅಗಸನಿಗೆ ನಿದ್ರಾಭಂಗ ಆಯಿತು. ಸುಮ್ಮಸುಮ್ಮನೆ ಸರಿರಾತ್ರಿಯಲ್ಲಿ ಅರಚಿ ನಿದ್ದೆ ಹಾಳು ಮಾಡಿದೆ ಎಂದು ಕೋಪದಿಂದ ಕತ್ತೆಗೆ ಎರಡೇಟು ಬಿಗಿದ.

***ನೀತಿ: ಅವರವರ ಕೆಲಸ ಅವರವರೇ ಮಾಡಬೇಕು.***

# ಜಡ್ಜ್‌ಮೆಂಟ್ ಡೇ

**- ಸಿ.ಆರ್. ಸತ್ಯ**

ಇತ್ತೀಚೆಗೆ ನನ್ನ ಅಕ್ಕಪಕ್ಕದವರೆಲ್ಲಾ ನಾನಾ ಕಾರಣಗಳಿಂದಾಗಿ ನಾನು ನಮ್ಮ ರೋಡ್‌ನಿಂದ ಮನೆ ಖಾಲಿ ಮಾಡಬೇಕು ಅಂತ ಸಿವಿಲ್ ಕೋರ್ಟ್‌ನಲ್ಲಿ ದ್ಯಾವೆ ಹೂಡಿದ್ರು. ಆಗ ನ್ಯಾಯಾಧೀಶರೇ ನನ್ನನ್ನು ಕಟಕಟೆಗೆ ಕರೆದು ಪ್ರಶ್ನೆಗಳನ್ನು ಕೇಳಿ ತೀರ್ಪನ್ನು ಕೊಟ್ಟರು. ಅಲ್ಲಿ ನಡೆದದ್ದು ಹೀಗೆ.

(ನ್ಯಾಯಾಧೀಶರು (ನ್ಯಾ) - ನಾನು (ನಾ))

ನ್ಯಾ : ಅಲ್ರೀ, ನೀವು ಮಧ್ಯಾಹ್ನ ಮತ್ತು ರಾತ್ರಿ ಹೊತ್ತಿನಲ್ಲಿ ಕುಂಭಕರ್ಣನ ಹಾಗೆ ಗೊರಕೆ ಹೊಡೆದು ಅಕ್ಕ ಪಕ್ಕದವರ ನಿದ್ದೆಯನ್ನೆಲ್ಲ ಕೆಡಿಸ್ತಿದೀರಿ ಅಂತ ನಿಮ್ಮ ಮೇಲೆ ಒಂದು ದೂರು ಇದೆ. ನಿಮ್ಮ ಗೊರಕೆ ಅಷ್ಟು ಜೋರೇನ್ರೀ?

ನಾ : ಯುವರ್ ಆನರ್, ನಿಮಗೆ ತಿಳಿದಿರುವ ಹಾಗೆ, ಪ್ರಕೃತಿ ನಿಯಮದ ಪ್ರಕಾರ ಗೊರಕೆ ಹೊಡೆಯುವವರಿಗೆ ಗೊರಕೆಯ ಶಬ್ಧವೇ ಕೇಳೋದಿಲ್ಲ. ಕೇಳಿದರೆ ಎಚ್ಚರವಾಗಿ ಮತ್ತೆ ನಿದ್ದೆ ಹೋಗುತ್ತಾರೆ ಅಷ್ಟೆ. ಇದು ಗೊರಕೆ ಕೇಳಿಸ್ಕೊಳ್ಳುವವರು ನಿರ್ಧರಿಸುವ ವಿಷಯ. ನಮ್ಮ ಮನೆಯ ಪಕ್ಕ ಅವ್ರು ವಾಸಿಸಬೇಕೋ ಬೇಡವೋ ಅನ್ನೋದು ಅವರಿಗೆ ಬಿಟ್ಟಿದ್ದು.

ನ್ಯಾ : ಯೂ ಹ್ಯಾವ್ ಎ ಪಾಯಿಂಟ್. ನಿಮ್ಮ ಮನೆ ನಾಯಿ ಸದಾ ಬೊಗಳುತ್ತಾ ಎಲ್ಲರ ಮನ ಶಾಂತಿಯನ್ನ ಕೆಡಿಸುತ್ತಿದೆಯಂತೆ, ನಿಜವೇನ್ರಿ?

ನಾ : ಅದು ಬೊಗಳೋದಂತೂ ನಿಜ ಯುವರ್ ಆನರ್. ಇತ್ತೀಚೆಗೆ ಮನುಷ್ಯರೇ ಅದು ಇದು ಬೊಗಳೋವಾಗ, ಪಾಪ, ನಾಯಿ ಸುಮ್ಮನೆ ಇರುತ್ತೆ? ಪ್ರಜಾ ಪ್ರಭುತ್ವದಲ್ಲಿ ನಾಯಿಗೆ ಬೊಗಳೋ ಹಕ್ಕಿದೆ. ಆದರೆ ಅದನ್ನ ಮೆತ್ತಗೆ ಬೊಗಳು ಅಂತ ಹೇಳೋದಕ್ಕೆ ನನಗೆ ನಾಯಿ ಭಾಷೆ ಗೊತ್ತಿಲ್ಲ. ಅದಕ್ಕೆ ನನ್ನ ಭಾಷೆ ಗೊತ್ತಿಲ್ಲ.

ನ್ಯಾ : ಒಪ್ಪಿದೆ. ನೀವು ಒಂದು ಹಸು ಸಾಕಿಕೊಂಡಿದೀರಂತೆ. ಅದನ್ನ ಹಾಲು ಕರೆದ ಮೇಲೆ, ನಿಮ್ಮ ರೋಡಿನಲ್ಲಿ ಅಡ್ಡಾಡೊದಕ್ಕೆ ಬಿಟ್ಬುಡ್ತೀರಂತೆ. ಅದು ಟ್ರಾಫಿಕ್ ಜ್ಯಾಮ್ ಮಾಡೋದಲ್ಲದೆ, ತೊಟ್ಟಿಗೆ ಬಾಯಿ ಹಾಕಿ ಕಸವನ್ನೆಲ್ಲಾ ಹರಡಿ ರಂಪ ಮಾಡ್ತಾ ಇದೆಯಂತೆ, ನಿಜವೇನ್ರಿ?

ನಾ : ಯುವರ್ ಆನರ್. ಹಸುವನ್ನು ಹೊರಗೆ ಬಿಡೋದು ನಿಜ. ಆದರೆ ನನ್ನ ಮೇಲೆ ದ್ಯಾವೆ ಹೋಡಿರೋ ಜನರೆಲ್ಲಾ ಬೇಜವಾಬ್ದಾರಿಯಿಂದ ಬಿಸಾಕೋ ಪ್ಲಾಸ್ಟಿಕ್ ಚೀಲಗಳನ್ನ ಪೇಪರ್ ವೇಸ್ಟ್‌ಗಳನ್ನ ಬಿ.ಬಿ.ಎಂ.ಪಿ. ತೊಗೊಂಡು ಹೋಗದೇ ಇರೋದು ನಿಮಗೆ ಗೊತ್ತೇ ಇದೆ. ನನ್ನ ಹಸು ಈ ತ್ಯಾಜ್ಯವನ್ನೆಲ್ಲಾ ತಿಂದು ಪರಿಸರ ಮಾಲಿನ್ಯವನ್ನು ಅಷ್ಟಾದರೂ ಕಮ್ಮಿ ಮಾಡ್ತಾ ಇದೆ. ಅದೂ ಅಲ್ಲದೆ

ಇವೆಲ್ಲವನ್ನೂ ತಿಂದೂ ನನಗೆ ಹಾಲು ಕೊಡ್ತಾ ಇದ್ಯಲ್ಲಾ, ಇದಕ್ಕಿಂತ ಶ್ರೇಷ್ಠ ಪ್ರಾಣಿ ಇನ್ನೆಲ್ಲಿದೆ ಯುವರ್ ಆನರ್? ಮೊನ್ನೆ, ನಮ್ಮ ರೋಡಿನಲ್ಲಿ ಟ್ರಾಫಿಕ್ ಕಂಟ್ರೋಲ್ಗೆ ಅಂತ ನಿಂತಿದ್ದ ಪೋಲೀಸ್ ಪ್ಯಾದೆ ಮೇಲೇನೆ ಒಬ್ಬ ಮೋಟಾರ್ ಬೈಕ್ ಬಿಟ್ಟಿದ್ದ. ಆದರೆ ನನ್ನ ಹಸು ಇದ್ದರೆ ಎಲ್ಲರೂ ಕಡ್ಡಾಯವಾಗಿ ನಿಧಾನವಾಗೇ ಚಲಿಸ್ತಾರೆ ಯುವರ್ ಆನರ್. ನನ್ನ ಹಸೂಗೆ, ಈ ವರ್ಷ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಿತ್ತು ಅಥವಾ ಪೋಲೀಸ್ ಮೆಡಲ್ ಕೊಡಬೇಕಿತ್ತು.

ನ್ಯಾ : ಕೇಳಿದ ಪ್ರಶ್ನೆಗೆ ಉತ್ತರ ಹೇಳಿ ಸಾಕು. ನೀವು ದಿನಾ ಮಧ್ಯಾನ್ಹ ಊಟ ಮಾಡಿ ಎಲ್ಲರೂ ನಿದ್ದೇ ಹೊಡಿಯೋ ಸಮಯದಲ್ಲಿ ಸಿಡಿಲು ಬಡಿದ ಹಾಗೆ ಸೀನುತ್ತೀರಂತೆ. ಇದು ಅಕ್ಕ ಪಕ್ಕದವರಿಗೆ ಕೇಳಿ ಗಾಬರಿಯಾಗೋದಲ್ಲದೆ, ನಿದ್ರೆಯಲ್ಲಿರೋ ಚಿಕ್ಕ ಮಕ್ಕಳು ಬೆಚ್ಚಿ ಬೀಳುತ್ವಂತೆ. ಇದಕ್ಕೆ ಏನು ಹೇಳ್ತೀರಿ?

ನಾ : ನಾನು ಸೀನೋದು ನಿಜ. ಅದಕ್ಕೆ ಕಾರಣ ಇಷ್ಟೆ. ಊಟ ಆದ ಮೇಲೆ ಚಿಂತಾಮಣಿ ಕಡಲೇಕಾಯಿ ತಿನ್ನೋದು ನನ್ನ ಚಟ. ಅದರ ಘಾಟು ಒರಿಜಿನಲ್, ಯುವರ್ ಆನರ್. ಅದಕ್ಕೆ ಅದನ್ನ ತಿಂದವರೆಲ್ಲಾ ಸೀನೇ ಸೀನುತ್ತಾರೆ. ಇದೂ ಪ್ರಕೃತಿ ನಿಯಮ. ಯಾರೂ ಸೀನೋದನ್ನ ತಡೆಯೋಕ್ಕೆ ಆಗೊಲ್ಲ. ಅದೂ ಅಲ್ಲದೆ ನಮ್ಮ ಪ್ರಜಾ ಪ್ರಭುತ್ವದಲ್ಲಿ, ಚಿಂತಾಮಣಿ ಕಡಲೇಕಾಯಿ ತಿನ್ನೋದಕ್ಕೆ ಯಾವ ನಿರ್ಬಂಧವೂ ಇಲ್ಲ. ಹೀಗಾಗಿ, ಅಕ್ಕ ಪಕ್ಕದವರು ಮತ್ತು ಅವರ ಚಿಕ್ಕ ಮಕ್ಕಳುಗಳು ಅವರವರ ಕಿವಿಗಳಲ್ಲಿ ಹತ್ತಿ ತುಂಬಿಕೊಂಡು ವಾಸಿಸಬೇಕು ಅಥವಾ ಬೇರೆಲ್ಲಾದರೂ ಮನೆ ಮಾಡಿಕೊಂಡು ಹೋಗಬೇಕು.

ನ್ಯಾ : ಬೆಳಗಿನಿಂದ ರಾತ್ರಿಯವರೆಗೂ ನಿಮ್ಮ ಮನೆ ಟೀವಿ ವಾಲ್ಯೂಂ ಸಿಕ್ಕಾ ಪಟ್ಟೆ ಜಾಸ್ತಿಯಾಗಿರುತ್ತಂತೆ. ಇದರಿಂದ ರೋಡಿನಲ್ಲಿ ಶಬ್ದ ಮಾಲಿನ್ಯ ಜಾಸ್ತಿ ಆಗಿದೆ ಅಂತ ಎಲ್ಲರೂ ಕಂಪ್ಲೈಟ್ ಮಾಡಿದಾರೆ. ಇದಕ್ಕೆ ಏನು ನಿಮ್ಮ ಉತ್ತರ?

ನಾ : ಯುವರ್ ಆನರ್. ನನಗೂ ನನ್ನ ಹೆಂಡತಿಗೂ ವಯಸ್ಸಾಗಿದ್ದು ನಮಗೆ ಸರಿಯಾಗಿ ಕಿವಿ ಕೇಳಲ್ಲ. ಇದೂ ಪ್ರಕೃತಿ ನಿಯಮ ಅಂತ ನಿಮಗೆ ನಾನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ನಮ್ಮ ಸರ್ಕಾರ ನಮಗೆ ಹಿಯರಿಂಗ್ ಏಡ್ ಭಾಗ್ಯ ಅಂತ ಬಿಟ್ಟಿ ಹಿಯರಿಂಗ್ ಏಡ್‌ಗಳನ್ನ ಕೊಡೋವರೆವಿಗೂ, ನಮಗೆ ಟೀವಿ ಕೇಳೋದಕ್ಕೆ ಹೈ ವಾಲೂಂ ಆಗಲೇಬೇಕು. ನನ್ನ ಮೇಲೆ ದೂರು ಕೊಟ್ಟವರಿಗೂ ವಯಸ್ಸು ಆಗಲಿ, ಆಗ ಅವರಿಗೆ ನಾನು ಏನು ಹೇಳ್ತಾ ಇದೀನಿ ಅಂತ ಅರ್ಥವಾಗುತ್ತೆ.

ನ್ಯಾ : ನೀವೂ ನಿಮ್ಮ ಹೆಂಡತಿ ನಿಮ್ಮ ಬಡಾವಣೆಯಲ್ಲಿರೋ ಪಾರ್ಕ್‌ನಲ್ಲಿ ವಾಕಿಂಗ್ ಹೋದರೆ, ವಾಕಿಂಗ್ ಪಾತ್‌ನ ಪೂರ್ತಿ ಅಡ್ಡಕಟ್ಟಿ ಮಿಕ್ಕಿದವರಿಗೆ ಹೋಗೋಕ್ಕೆ ಜಾಗ ಕೊಡಲ್ಲವಂತೆ, ಹೌದೇನ್ರಿ?

ನಾ : ಇದ್ದರೂ ಇರಬಹುದು, ಯುವರ್ ಆನರ್. ಸಾಧಾರಣವಾಗಿ ವಯಸ್ಸಾಗುತ್ತಾ ಎಲ್ಲರೂ ಎತ್ತರಕ್ಕೆ ಬೆಳೆಯುತ್ತಾರೆ. ಆದರೆ ಯಾಕೋ ನಾನೂ ನನ್ನ ಹೆಂಡತಿ ಅಡ್ಡ ಅಡ್ಡಕ್ಕೆ ಬೆಳಿತಿದೀವಿ. ಹೀಗಾಗಿ ಒಬ್ಬರ ಪಕ್ಕ ಒಬ್ಬರು ನಡೆದರೆ, ಸ್ವಲ್ಪ ಬ್ಲಾಕ್ ಆಗಬಹುದು. ಹಾಗಂತ ನಾನು ನನ್ನ ಹೆಂಡತಿ ಬದಲು ಇನ್ಯಾರದೋ ಹೆಂಡತಿ ಜೊತೆ ವಾಕಿಂಗ್ ಮಾಡಿದರೆ ಈ ಸಮಾಜ ಒಪ್ಪುತ್ತೈ, ಯುವರ್ ಆನರ್?

ನ್ಯಾ : ಒಬ್ಬರ ಹಿಂದೆ ಒಬ್ಬರು ನಡೆಯಬಾರದೇನ್ರೀ?

ನಾ : ಅದು ಹೇಗೆ ಸಾಧ್ಯ, ಯುವರ್ ಆನರ್? ನಮ್ಮ ಧರ್ಮದ ಪ್ರಕಾರ ನನ್ನ ಹೆಂಡತಿ ನನ್ನ ಅರ್ಧಾಂಗಿ. ಅವಳನ್ನ ಹಿಂದೆ ಬಿಡೋದಕ್ಕೆ ಆಗುತ್ತೈ?

ನ್ಯಾ : ನೋಡ್ರೀ, ನಿಮ್ಮ ಎಡಗಡೆ ಮನೆಯವರ ಪ್ರಕಾರ ನಿಮ್ಮ ಮನೆ ಅಡಿಗೆ ಮನೆಯಿಂದ ಸ್ಟ್ರಾಂಗ್ ಬೆಳ್ಳುಳ್ಳಿ ವಾಸನೆ ಬರುತ್ತೆ, ಅದನ್ನ ಅವರಿಗೆ ತಡಕೊಳ್ಳೋದಕ್ಕೆ ಆಗಲ್ಲವಂತೆ, ನಿಜಾನಾ?

ನಾ : ಬೆಳ್ಳುಳ್ಳಿ ವಾಸನೆ ಬರೋದಂತೂ ನಿಜ ಯುವರ್ ಆನರ್. ಬೆಳ್ಳುಳ್ಳಿಗೆ ವಾಸನೆ ಇರೋದಕ್ಕೆ ಅಲ್ಲವೆ ಎಲ್ಲಾರೂ ಅದನ್ನ ಉಪಯೋಗಿಸೋದು? ಅದರ ವಾಸನೆ ಬೇಡ ಅಂದರೆ, ಅವರು ಬೇಕಾದರೆ ಇನ್ನೊಂದು ಗೋಡೆ ಕಟ್ಟಿಕೊಳ್ಳಲಿ. ನನ್ನದೇನೂ ಅಭ್ಯಂತರವಿಲ್ಲ. ನಮ್ಮ ದೇಶದ ಸಂವಿಧಾನದ ಪ್ರಕಾರ ನಾವು ಬೆಳ್ಳುಳ್ಳಿಯನ್ನಾದರೂ ತಿನ್ನಬಹುದು. ಈರುಳ್ಳಿಯನ್ನಾದರೂ ತಿನ್ನಬಹುದು, ಕಾಡು ಬಳ್ಳಿಯನ್ನಾದರೂ ತಿನ್ನಬಹುದು. ಪ್ರಜಾ ಪ್ರಭುತ್ವದಲ್ಲಿ–

ನ್ಯಾ : ಈ ಕೋರ್ಟ್‌ಗೆ ಸಂವಿಧಾನ, ಪ್ರಜಾ ಪ್ರಭುತ್ವ ಅಂತ ಪಾಠ ಹೇಳೋದು ನಿಲ್ಲಿಸಿ. ಸಂಜೆ ಹೊತ್ತು ನಿಮ್ಮ ಮನೆಯಿಂದ ಹೊಹ್ಹೊಹ್ಹೋ, ಹಿಹ್ಹಿಹ್ಹೀ ಅಂತ ವಿಚಿತ್ರವಾಗಿ ನಗೋ ಶಬ್ದ ಬರುತ್ತಂತೆ, ಇದರಿಂದ ಸುತ್ತ ಮುತ್ತಲಿನವರಿಗೆ ಭೂ ಕಂಪ ಆದ ಅನುಭವ ಆಗುತ್ತಂತೆ. ಇದಕ್ಕೆ ಏನು ಹೇಳ್ತೀರಾ?

ನಾ : ಯುವರ್ ಆನರ್. ನಾನು ನನ್ನ ಹೆಂಡತಿ ಇಬ್ಬರೂ ಮನೆ ಹತ್ತಿರ ಇರೋ ಲಾಫಿಂಗ್ ಕ್ಲಬ್ ಮೆಂಬರುಗಳು. ಹಾಗಾಗಿ ದಿನಾ ನಾವು ನಗೋದನ್ನ ಪ್ರಾಕ್ಟೀಸ್ ಮಾಡ್ತೀವಿ. ನಾವು ಜೀವನದಲ್ಲಿ ನಗಲೇ ಬಾರದು ಅಂತ ಯಾರಾದರೂ ಹೇಳಿದಾರೆಯೆ? ಇತ್ತೀಚೆಗೆ ಸಮಾಜದಲ್ಲಿ ನಗುವವರೇ ಕಮ್ಮಿ ಇರೋವಾಗ ನಾವು ನಗು ನಗುತ್ತಾ ಇರೋದೂ ಒಂದು ರೀತಿಯ ಸಮಾಜ ಸೇವೆ ಅಂತ ಹೇಳಿದರೆ ತಪ್ಪಾಗಲಾರದು ಯುವರ್ ಆನರ್ ಡಿ.ವಿ.ಜಿ. ಅವರು ಮಂಕುತಿಮ್ಮನ ಕಗ್ಗದಲ್ಲಿ–

ನ್ಯಾ : ಕೇಳಿದಕ್ಕೆ ಉತ್ತರ ಹೇಳಿ, ಇಲ್ಲದಿದ್ದರೆ ನಿಮಗೆ ಕಂಟೆಂಪ್ಟ್ ಆಫ್ ಕೋರ್ಟ್ ಅಂತ ದಂಡ ವಿಧಿಸ್ತೀನಿ ಅರ್ಥವಾಯ್ತಾ? ಇದೊಂದು ಸೀರಿಯಸ್ ಕಂಪ್ಲೈಂಟ್. ನೀವೂ ನಿಮ್ಮ ಹೆಂಡತೀನೂ ನಿಮ್ಮ ಕೌಂಪೌಂಡ್ ಒಳಗೆ ನಿಂತ್ಕೊಂಡು ಸುಮಾರು ಒಂದು ಗಂಟೆ ಕಾಲ ಎಲ್ಲರಿಗೂ ಕಿವಿ ಚಿಟ್ಟು ಹಿಡಿಯೋ ಹಾಗೆ ಸಂಗೀತ

ಹೇಳ್ತೀರಂತೆ. ನಿಜ ಏನ್ರೀ? ಮನೆ ಒಳಗೆ ನಿಮ್ಮ ಸಂಗೀತ ಹೇಳ್ಕಳ್ಳೋಕೆ ನಿಮಗೇನು ಪ್ರಾಬ್ಲಮ್ಮು?

ನಾ : ಯುವರ್ ಆನರ್. ನನಗೂ ನನ್ನ ಹೆಂಡತೀಗೂ ಸಂಗೀತ ಎಂದರೆ ಬಹಳ ಇಷ್ಟ. ನಮಗೆ ಸಂಗೀತ ಹೇಳ್ಕೊಡೋಕ್ಕೆ ಯಾವ ಮೇಷ್ಟ್ರುಗಳೂ ಧೈರ್ಯ ಮಾಡಲಿಲ್ಲ. ಅದಕ್ಕೆ ನಮಗೆ ನಾವೇ ಪ್ರಾಕ್ಟೀಸ್ ಮಾಡಿಕೊಳ್ತೀವಿ. ಅಷ್ಟೇ ಅಲ್ಲ, ಯುವರ್ ಆನರ್. ನಾವು ತರಕಾರಿ ಚೆನ್ನಾಗಿ ಬೆಳೆಯೋಕ್ಕೆ ಸಂಗೀತ ಇದ್ದರೆ ಉತ್ತಮ ಅಂತ ಎಲ್ಲೋ ಓದಿದ್ದು, ದಿನಾ ನಾನು ನಮ್ಮ ತೋಟದಲ್ಲಿ ಇರೋ ಬದನೆಕಾಯಿ ಗಿಡದ ಮುಂದೆ ಹಾಡು ಹೇಳ್ತೀನಿ, ನನ್ನ ಹೆಂಡತಿ ಬೆಂಡೇ ಕಾಯಿ ಗಿಡದ ಮುಂದೆ ಹಾಡು ಹೇಳ್ತಾಳೆ. ನನಗೆ ಬದನೇಕಾಯಿ ಹುಳಿ ಅಂದರೆ ಬಲು ಇಷ್ಟ ಯುವರ್ ಆನರ್.

ನನ್ನ ಹೆಂಡತಿಗೆ ಬೆಂಡೇಕಾಯಿ ಗೊಜ್ಜು ಅಂದರೆ –

ನ್ಯಾ : ಕೇಸ್ ಡಿಸ್ಮಿಸ್ಡ್! ಕೋರ್ಟ್ ಅಡ್ಜರ್ನ್ಡ್!!

## ಕಾರಣ

ಸುರೇಶ ರಮೇಶ ನೆರೆಹೊರೆಯವರು. ರಮೇಶ ದೈವ ಭಕ್ತ. ಸುರೇಶ ನಾಸ್ತಿಕ. ಒಂದು ದಿವಸವೂ ದೇವಾಲಯಕ್ಕೆ ಹೋದವನಲ್ಲ. ಪೂಜೆ ಪುನಸ್ಕಾರದಿಂದ ದೂರ. ಆದರೆ ಇಡೀ ಕುಟುಂಬ ಖುಷಿಯಿಂದ ಇತ್ತು. ಮುದ್ದಾದ ಹೆಂಡತಿ ಮಕ್ಕಳು. ಎಲ್ಲ ಸೌಲಭ್ಯಗಳೂ ಇದ್ದವು. ಆದರೆ ರಮೇಶ ಇದಕ್ಕೆ ತದ್ವಿರುದ್ಧ. ಅವನು ಮಾಡಿದ ಪೂಜೆಗಳಿಲ್ಲ. ಹೋಗದ ದೇವಾಲಯಗಳಿಲ್ಲ. ಆದರೆ ಕುಟುಂಬದಲ್ಲಿ ನೆಮ್ಮದಿ ಇರಲಿಲ್ಲ. ಇದರಿಂದ ಅವನಿಗೆ ಜಿಜ್ಞಾಸೆ ಆಯಿತು. ಮಂದಿರಕ್ಕೆ ಹೋಗಿ ಅವಲತ್ತುಕೊಂಡ. "ದೇವರೇ, ನಾನೆಂತಹ ದೈವ ಭಕ್ತ ಎಂದು ನಿನಗೆ ಗೊತ್ತೇ ಇದೆ. ನಾನು ಪ್ರತಿ ದಿನ ಪ್ರಾರ್ಥನೆ ಮಾಡುತ್ತೇನೆ. ಪೂಜೆ ಮಾಡುತ್ತೇನೆ. ನಿನಗೆ ನನ್ನ ಎಲ್ಲ ಸಮಸ್ಯೆಗಳನ್ನೂ ಹೇಳಿಕೊಳ್ಳುತ್ತೇನೆ. ಆದರೆ ಸುರೇಶ ಎಷ್ಟು ಆರಾಮವಾಗಿದ್ದಾನೆ. ಹೀಗೇಕೆ?" ಎಂದು ಕೇಳಿದ. ಆಗೊಂದು ಅಶರೀರವಾಣಿ ಕೇಳಿಸಿತು: ಏಕೆಂದರೆ ಭಕ್ತಾ, ಹಿ ಡಸ್ ನಾಟ್ ಬಾದರ್ ಮಿ.

# ಊಟ ಕೊಟ್ಟಿರೋ ದೇವರು......

**- ಎಚ್. ಗೋಪಾಲಕೃಷ್ಣ**

**ಈ** ದೇಶಕಟ್ಟುವ ಕೆಲಸ ನಿಂತರೆ ನಾವು ಹೇಗೆ ಬದುಕುವುದು?

ಕ್ಯಾಂಟೀನಿನಲ್ಲಿ ಊಟ ಮುಗಿಸಿ ಬಂದು ಸೀಟಿನಲ್ಲಿ ಕೂತಿದ್ದೆ. ಫೋನು ಶಬ್ದ ಮಾಡಿತು. ಟೈಲರ್ ಕಾಶಿಪತಿ ನಿಮಗೆ ಗೊತ್ತಾ? ಅಂತ ಆ ತುದಿಯಿಂದ ಯಾವುದೋ ದನಿ ಮೊಳಗಿತು. ಫೋನಾಯಿಸುತ್ತಿರೋದು ಯಾರು ಅಂತ ಹೇಳದೇನೇ ಟೈಲರ್ ಕಾಶಿಪತಿ ನಿಮಗೆ ಗೊತ್ತಾ ಅಂದರೆ ಯಾರಿಗೆ ಅದೇನು ಅರ್ಥವಾಗುತ್ತೆ? ನೀವು ಯಾರು? ಅಂದೆ. ಕಾಶೀಪತಿ ಅಂತ ನನಗೆ ಗೊತ್ತಿರೋರು ಯಾರೂ ಇಲ್ಲ.

ನಾನು ಸಾರ್ ಎಲ್ಲಪ್ಪ ಅವರ ಫಸ್ಟ್ ಸನ್ನು ಅಂದ. ಯಾವ ಎಲ್ಲಪ್ಪ ಅಂತ ಕೇಳೋದಿಕ್ಕೆ ಹೋಗಲಿಲ್ಲ. ಯಾಕೆ ಅಂದರೆ ಈ ಹೆಸರಿನವರು ನನಗೆ ಇಡೀ ಜೀವಮಾನದಲ್ಲಿ ಪರಿಚಯವಾಗಿದ್ದೋರು ನನ್ನ ಸಹೋದ್ಯೋಗಿಯಾಗಿದ್ದವರು - ಇವರೊಬ್ಬರೇ. ಎಲ್ಲಪ್ಪ ಅವರು ನಿವೃತ್ತರಾದ ಎರಡು ವರ್ಷಕ್ಕೆ ಅವರ ಮಗ ಫೋನಾಯಿಸಿದ್ದ. ಕಾಶೀಪತಿ ಬಗ್ಗೆ ತಿಳಿದುಕೊಳ್ಳಲು! ಅಪ್ಪ ಹೇಗಿದ್ದಾರೆ ಅಂತ ಲೋಕಾಭಿರಾಮದ ಮಾತು ಶುರು ಹಚ್ಚಿದೆ.

ಹೇಗಿದ್ದಾರೆ ಫಾದರು? ಅಂದೆ.

ಅವರಿಲ್ಲ, ತೀರಿಹೋದರು.... ಅಂತ ಆ ಕಡೆಯಿಂದ ಕೇಳಿಸಿತು.

ಅಯ್ಯೋ ಹೌದೇ ಏನಾಗಿತ್ತು? ಅಂದೆ.

ಜಾಂಡೀಸ್ ಬಂತು ಅದರಲ್ಲೇ ತೀರಿದರು....

ಯಾವಾಗ ತೀರಿಹೋಗಿದ್ದು?

ಆಗಲೇ ಎರಡು ತಿಂಗಳಾಯ್ತು ಅಂಕಲ್.

ಛೇ ಅಂದೆ.

ಟೈಲರ್ ಕಾಶಿಪತಿ ನಿಮಗೆ ಗೊತ್ತಾ? ಅಂತ ಹುಡುಗ ಮತ್ತೆ ಕೇಳಿದ.

ಯಾರಪ್ಪಾ ಅದು? ಗೊತ್ತಿಲ್ಲವೇ? ಏನು ಸಮಾಚಾರಾ? ಅಂತ ಕೇಳಿದೆ.

ಅಪ್ಪನ ಲೆಕ್ಕದ ಪುಸ್ತಕ ತೆಗೆದು ನೋಡ್ತಾ ಇದ್ದೆ. ಅದರಲ್ಲಿ ಟೈಲರಿಗೆ ಅಂತ ಹತ್ತು ಸಾವಿರದ್ದು ಫಿಗರ್ ಇದೆ. ಅವರಿಗೇನಾದರೂ ಸಾಲ ಕೊಟ್ಟಿದ್ದಾರೋ..... ಅಂತ.

ಯಾರೋ ಟೈಲರ್ ವಿಷಯ ಅವರು ಹೇಳ್ತಾ ಇದ್ದರು ಆದರೆ ಅದು ಕಾಶೀಪತಿನೇ ಅಂತ ಗೊತ್ತಿಲ್ಲವೇ ಅಂದೆ.

ಟೈಲರ್ ಕಾಶಿಪತಿಗೆ ಅಪ್ಪ ಆಗಾಗ ದುಡ್ಡು ಕೊಟ್ಟಿದ್ದರಂತೆ, ನೀವು ಅವರ ಜತೇನೆ ಇದ್ದವರು ಅಲ್ವಾ? ನಿಮಗೆ ಗೊತ್ತಿರಬಹುದು ಅಂತ...... ಹುಡುಗ ರಾಗ ಎಳೆದ.

ಕಾಶೀಪತಿ ಸಿಕ್ಕಿದರೆ ಕೇಳು....

ಅವರು ಹೋದ ತಿಂಗಳು ತೀರಿಕೊಂಡರು ಅಂಕಲ್ ಅಂದ.

ಸರಿ ಬಿಡು. ಸತ್ತೋರ ಹತ್ತಿರ ಹೇಗೆ ಕೇಳೋದಿಕ್ಕೆ ಆಗುತ್ತೆ?

ಅವರ ಮಕ್ಕಳು ಇದಾರೆ, ಅಂಕಲ್. ಎಲ್ಲರೂ ಚೆನ್ನಾಗಿರೋರೇನೇ. ಐದು ಜನ ಮಕ್ಕಳೂ ಟೈಲರಿಂಗ್ ಕೆಲಸ ಮಾಡ್ತಾರೆ, ಐದಾರು ಅಂಗಡಿ ಇಟ್ಕೊಂಡಿದಾರೆ...

ಹೌದಾ ದೊಡ್ಡ ಬಿಸಿನೆಸ್ಸೇ....

ಹೌದು ಅಂಕಲ್ ಸೀರಿಯಲ್‌ಗಳಿಗೆ ಅವರು ಡ್ರೆಸ್ ಹೊಲೀತಾರಂತೆ..

ಸರಿ ಅವರ ಮಕ್ಕಳು ನಿನಗೆ ಗೊತ್ತಿದ್ದರೆ ಅವರನ್ನ ಕೇಳು, ನಮ್ಮಪ್ಪ ನಿಮ್ಮಪ್ಪಂಗೆ ಸಾಲ ಕೊಟ್ಟಿದ್ದರಾ? ಅದು ವಾಪಸು ಕೊಡಿ ಅನ್ನು.... ಅಂತ ನನಗೆ ಹೊಳೆದ ಐಡಿಯಾ ಕೊಟ್ಟೆ.

ಸರಿ ಅಂಕಲ್ ಹಾಗೇ ಮಾಡ್ತೀನಿ. ನಿಮ್ಮ ಸಹಾಯ ಬೇಕಾಗಬಹುದು, ಫೋನ್ ಮಾಡ್ತೀನಿ ಸ್ವಲ್ಪ ಹೆಲ್ಪ್ ಮಾಡಿ.... ಅಂತ ರಿಕ್ವೆಸ್ಟ್ ಮಾಡಿಕೊಂಡ. ಆಗಲಿ ಅಂತ ಫೋನಿನಲ್ಲಿ ಹೇಳಿ ತಲೆಯಾಡಿಸಿದೆ.

ಸೀರಿಯಲ್‌ಗಳಿಗೆ ಡ್ರೆಸ್ ಮಾಡುವವರು ಅಂದರೆ ತುಂಬಾ ಒಳ್ಳೇ ಬಿಸಿನೆಸ್ಸೇನೇ. ಪರವಾಗಿಲ್ಲ ಈಗಿನ ಹುಡುಗರು ಬದುಕುವ ದಾರಿಯನ್ನ ಚೆನ್ನಾಗೇ ಕಂಡುಕೋತಾರೆ, ನಮ್ಮ ಕಾಲದವರ ಹಾಗಲ್ಲ.... ಅಂತ ಅನಿಸಿ ಖುಷಿಯಾಯಿತು.

ಒಂದೆರೆಡು ತಿಂಗಳು ಈ ಹುಡುಗನಿಂದ ಏನೂ ಫೋನು ಇರಲಿಲ್ಲ. ದುಡ್ಡು ವಸೂಲಿ ಮಾಡಿಕೊಂಡಿದಾನೆ ಅಂದುಕೊಂಡು ನಾನು ನೆಮ್ಮದಿ ತಗೊಂಡೆ. ಮೂರನೇ ತಿಂಗಳು ಮತ್ತೆ ಹುಡುಗ ಫೋನಾಯಿಸಿದ. ಕಾಶೀಪತಿ ಮಕ್ಕಳು ಅವರ ಅಪ್ಪ ಇವರ ಅಪ್ಪನ ಹತ್ತಿರ ದುಡ್ಡು ಸಾಲ ಮಾಡಿರೋದು ಒಪ್ಪಿದರಂತೆ, ಆದರೆ ಸಧ್ಯಕ್ಕೆ ನಮ್ಮ ಹತ್ತಿರ ಕಾಸಿಲ್ಲ. ಒಂದೆರೆಡು ವರ್ಷ ತಡಕೋ... ಅಂದರಂತೆ. ಕಾಗದ ಪತ್ರ ಏನಿಲ್ಲ ಅದು ಹೇಗೆ ತಡಕೊಳ್ಳೋದು ಅಂತ ಇವನಿಗೆ ಯೋಚನೆ ಅಂತೆ. ನೀವು ಸ್ವಲ್ಪ ಅವರಿಗೆ ಬುದ್ಧಿ ಹೇಳಿ ಬನ್ನಿ ಅಂತ ಇವನ ಕೋರಿಕೆ.

ಅಯ್ಯೋ ಸರಿ ಬರ್ತೀನಿ ಅದಕ್ಕೇನು ಅಂದೆ.

ನ್ಯಾಯ ಪಂಚಾಯಿತಿ ಸೇರಿತು. ಅಪ್ಪ ಸಾಲ ಮಾಡಿದ್ದಾನೆ ಅದನ್ನ ನಾವು ಇಲ್ಲ ಅನ್ನೋಲ್ಲ. ನಮಗೂ ದೇವರು ಧರ್ಮ ಅಂತ ಇದೆ. ಪತ್ರ ಇಲ್ಲ ಕೊಡೋಲ್ಲ ಅಂದರೆ ನೀವು ಕೋರ್ಟಿಗೆ ಹೋದರೂ ಏನೂ ಸಿಗೋಲ್ಲ. ನಮ್ಮ ಹತ್ತಿರ ಈಗ ಕಾಸಿಲ್ಲ. ಸ್ವಲ್ಪ ತಡ್ಕೊಳ್ಳಿ ಖಂಡಿತ ವಾಪಸ್ ಮಾಡ್ತೀವಿ.... ಅಂತ ಕಾಶೀಪತಿ ಮಕ್ಕಳು.

ಇಷ್ಟು ದಿವಸ ಅಂತ ವಾಯಿದೆ ಹಾಕ್ಕೋಳ್ಳಿ, ಅವತ್ತು ಕೊಟ್ಟು ಬಿಡಿ....

ವಾಯಿದೆ ಆಗೋಲ್ಲ ಸಾರ್. ನಾವು ಮೋಸ ಮಾಡುಲ್ಲ ಅದನ್ನ ನೀವು ನಂಬಬೇಕು.

ಎಲ್ಲಪ್ಪನ ಮಗನ ಕಡೆ ನೋಡಿದೆ. ಏನು ಹೇಳ್ತೀಯಾಪ್ಪಾ... ಅಂದೆ.

ಸಾರ್ ಒಂದು ಪತ್ರ ಕೊಟ್ಟುಬಿಡಲಿ ಅವರು ಹೀಗೆ ಸಾಲ ತಗೊಂಡಿದೀವಿ ಅಂತ.

ಅರ್ಧದಲ್ಲೇ ಇವನ ಮಾತು ತಡೆದು ದೊಡ್ಡ ಹುಡುಗ ಹೇಳಿದ – ಪತ್ರಗಿತ್ರದ ಮಾತು ಬೇಡ. ನಮ್ಮದು ನಾಲಗೆ ಇದು ಸುಳ್ಳಾಡಕ್ಕಿಲ್ಲ. ಕಾಸು ಸೇರಿದ ಕೂಡಲೇ ಲೆಕ್ಕ ಚುಕ್ತಾ....

ಏನೂ ತೀರ್ಮಾನಕ್ಕೆ ಬರದೇ ಪಂಚಾಯಿತಿ ಮುಗೀತು.

ಐದಾರು ತಿಂಗಳಾದ ಮೇಲೆ ಪೇಟೆ ಬೀದೀಲಿ ಎಲ್ಲಪ್ಪನ ಮಗ ಸಿಕ್ಕ. ತುಂಬಾ ಖುಷೀಲಿದ್ದ ಹಾಗಿದ್ದ. ಸಾರ್ ಆರೋಗ್ಯಾನಾ ಸಾರ್. ಹೇಗಿದ್ದೀರೀ ಸಾರ್? ಬನ್ನಿ ಕೊಂಚ ತಂಪು ಮಾಡಿಕೊಳ್ಳೋಣಾ.... ಅಂತ ಕರೆದ.

ಹುಡುಗರು ಖುಷಿಯಾಗಿದಾರೆ ಅಂದರೆ ಯಾರಿಗೆ ಸಂತೋಷ ಆಗಲ್ಲ ಹೇಳಿ?

ತಂಪು ಮಾಡಿಕೊಳ್ತಾ ಅವನ ಖುಷೀಗೆ ಕಾರಣ ಹೇಳಿದ.

ಒಂದೆರೆಡು ವರ್ಷ ವಾಯಿದೆ ಕೇಳಿದರಲ್ಲಾ, ಇವನು ಬಿಡದೆ ಅವರ ಮನೇ ಹತ್ರ ವಾರಕ್ಕೆ ಎರಡು ಮೂರುಸಲ ಹೋಗೋದು, ಅಲ್ಲಿಕೂತು ಗೊಳೋ ಅಂತ ಅಳೋದೂ ಮಾಡ್ತಾ ಇದ್ದನಂತೆ. ಸೀರಿಯಲ್‌ನವರು ಡ್ರೆಸ್ ತಗೊಳ್ಳೋಕೆ ಅಂತ ಮನೆ ಹತ್ತಿರ ಬರ್ತಿದ್ದೋರು ಇವನ ಗೋಳನ್ನ ನೋಡ್ತಾ ಇದ್ದರಂತೆ. ಒಂದಿನ ಅವರಲ್ಲೇ ಒಬ್ಬ ಬಂದ. ವಾಡಾ ಎಂಗಳ್ ಕೂಡೆ ಅಂತ ಎಳೆದುಕೊಂಡು ಹೋದನಂತೆ.

ಇವನಿಗೆ ಅದೇನೋ ವೇಷ ಹಾಕಿದರಂತೆ. ಕ್ಯಾಮೆರಾ ಮುಂದೆ ನಿಲ್ಲಿಸಿದರಂತೆ. ಅಲ್ಲಿ ಅವರ ಮನೆ ಮುಂದೆ ಗೋಳಾಡಿದೆಯಲ್ಲಾ ಹಾಗೇ ಮಾಡು ಅಂದರಂತೆ.....

ಇವನು ಗೋಳಾಡಿದ.

ಹತ್ತಿಪ್ಪತ್ತು ಸಲ ಗೋಳಾಡಿಸಿ ಸಾವಿರ ಕೊಟ್ಟರಂತೆ. ದಿನಾ ಬಾ ಸಾವಿರ ಕೊಡ್ತೀವಿ. ಹೀಗೇ ಗೋಳಾಡಬೇಕು.... ಅಂದರಂತೆ.

ಆಯಪ್ಪ ಹತ್ತು ಸಾವಿರಕೊಡಬೇಕು ಅಂತ ಇವನು ಹೇಳಿದ.

ಅಲ್ಲಿ ನೈಟ್‌ಡ್ಯೂಟಿ ಮಾಡ್ಕೋ... ಅಂದರಂತೆ!

ದಿನಕ್ಕೆ ಸಾವಿರ ಕೊಡ್ತಾರೆ-ಊಟ ತಿಂಡಿ ಅಲ್ಲೇ ಆಗತ್ತೆ. ಹಾಯಾಗಿದೀನಿ... ಅಂದ.

ಮತ್ತೆ ಆ ಹತ್ತು ಬಿಟ್ಟು ಬಿಟ್ಟೆಯಾ... ಅಂದೆ.

ಅದು ಬಿಡ್ತೀನಾ ಅಂಕಲ್? ಊಟ ಕೊಟ್ಟಿರೋ ದೇವರು ಅದು....

ಮತ್ತೆ ವಸೂಲಿ ಹೇಗೆ?

ಅವರ ಮನೆ ಮುಂದೆ ರಾತ್ರಿ ಒಂದು ಗಂಟೆ ಗೋಳಾಡ್ತೀನಿ.... ಅಂದ.

ಅಕ್ಕ ಪಕ್ಕದವರು ಸುಮ್ಮನಿದ್ದಾರಾ?

ಆ ಟೈಮಲ್ಲಿ ಅದ್ಯಾವುದೋ ಸೀರಿಯಲ್ ಬರುತ್ತಂತೆ - ಅದರಲ್ಲಿ ಗೋಳಾಡೋ ಸೀನಂತೆ. ಅಕ್ಕ ಪಕ್ಕದವರು ರಿಹರ್ಸಲ್ ಇರಬೇಕು ಅಂತ ತೆಪ್ಪಗಿದ್ದಾರೆ.... ಅಂತ ಅವನ ಕತೆ ಹೇಳಿದ!

ಅಪ್ಪ ಅವನು ಸಾಲ ತೀರಿಸಿಬಿಟ್ಟರೆ ಅಕ್ಕ ಪಕ್ಕದವರು ಅದು ಹೇಗೆ ನಿದ್ದೆ ಮಾಡ್ತಾರೋ ನಿನ್ನಗೋಳು ಇಲ್ಲದೇ... ಅಂತ ಕನಿಕರ ತೋರಿಸಿದೆ. ನಮ್ಮನೆ ಅಕ್ಕ ಪಕ್ಕದಲ್ಲಿ ಮನೆ ಕೆಲಸ ಮೂರು ವರ್ಷದಿಂದ ನಡೀತಾಲೇ ಇದೆ. ಕುಟ್ಟೋದು, ಬಡಿಯೋದು, ಗರಗಸ ಆಡಿಸೋದು, ತೋಪ್ಡಾ ಹೊಡಿಯೋದು, ಕೂಲಿಗಳ ಜೋರು ಮಾತು.... ಇವಕ್ಕೆಲ್ಲಾ ಅಡ್ಜಸ್ಟ್ ಆಗಿಬಿಟ್ಟಿದ್ದೀವಿ. ಈ ದೇಶಕಟ್ಟುವ ಕೆಲಸ ನಿಂತರೆ ನಾವು ಹೇಗೆ ಬದುಕುವುದು ಅಂತ ನಮಗೆ ಚಿಂತೆ ಆವರಿಸಿದೆ. ಪಾಪ ಬೇರೆಯವರಿಗೆ ಈ ತರಹದ ತೊಂದರೆ ಆಗಬಾರದು ನೋಡಿ.....

# ಕಥಾ ಗಾಯಕನ ಎಳನೀರು ಪಾರ್ಟಿ

**- ಎಂ.ಕೆ. ಭಾಸ್ಕರ ರಾವ್**

ಆತ ಬಹುದೊಡ್ಡ ಗಾಯಕರಾಗಿದ್ದರೆಂದೇ ಬಹುತುಟ್ಟಿ ಗಾಯಕರೂ ಆಗಿದ್ದರು. ಹಾಸ್ಯ ಪಾತ್ರದಲ್ಲಿ ನಟಿಸುತ್ತಲೂ ಇದ್ದವರು. ಆಗೊಮ್ಮೆ ಈಗೊಮ್ಮೆ ನಿರ್ದೇಶಿಸುತ್ತ ಸತತ ಚಲಾವಣೆಯಲ್ಲಿದ್ದ ಜನಪ್ರಿಯ ವ್ಯಕ್ತಿಯೂ ಆಗಿದ್ದರು. ಯಾವುದೇ ಮುಲಾಜೂ ಇಲ್ಲದೆ ನಿರ್ಮಾಪಕರಿಂದ ಪೀಕುವ ಹಣದ ಡಿಮ್ಯಾಂಡ್ ಹೆಚ್ಚಿಸಲು ಬಹುಮುಖ್ಯ ಕಾರಣವಾಗಿ ಸುಮಧುರ ಕಂಠ ಅವರಿಗೆ ವರರೂಪವಾಗಿ ಬಂದಿತ್ತು. ಡಿಂಗೋ ಡಿಸ್ಕೋ ಮೋಜು ಮಸ್ತಿಯೇ ಹೂರಣವಾಗಿರುವ ಮಾಡರ್ನ್ ಸಿನಿಮಾಗಳ ಅಗತ್ಯಕ್ಕೆ ತಕ್ಕಂತೆ ಅಕರಾಳ ವಿಕರಾಳ ಹಾಡುವ ತಾಕತ್ತೂ ಇತ್ತು. ಹಿಂದಿಯೇತರ ಭಾಷಾ ಚಲನಚಿತ್ರಗಳಲ್ಲಿ ಒಂದೋ ಎರಡೋ ಹಾಡಿಗೆ ಧ್ವನಿ ನೀಡಿದ್ದರಿಂದ ಬಹುಭಾಷಾ ಗಾಯಕರೂ ಹೌದೆನಿಸಿದ್ದರು. ಒಟ್ಟು ಸಾರಾಂಶದಲ್ಲಿ ಹೇಳುವುದಾದರೆ ಅವರ ಸಂಗೀತ ಪ್ರತಿಭೆ ಮತ್ತು ಗಾಯನ ಸಾಮರ್ಥ್ಯಕ್ಕೆ ಸಲಾಮು ಹಾಕದವರೇ ಇರಲಿಲ್ಲ.

**ಸೂಚನೆ ಏಕೆ ಬರಲಿಲ್ಲ ಎಂದು ಗಾಯಕನಿಗೆ ತಿಳಿಯುವ ಹೊತ್ತಿಗೆ ತಡವಾಗಿತ್ತು.**

ದೇಶದ ಮೇಲೆ ಎಮರ್ಜೆನ್ಸಿ ಹೇರಿಕೆಯಾಗಿದ್ದ ಎಪ್ಪತ್ತರ ದಶಕದ ಕಥೆ ಇದು. ಆ ಗಾಯಕನ ನೆಪದಲ್ಲಿ ಈಗಲೂ ವ್ಯಾಪಕವಾಗಿರುವ ಸಂಗತಿಯ ಝಲಕ್ ಕೂಡಾ ಹೌದು ಎಂದು ಓದುಗ ಮಹಾಶಯರು ಭಾವಿಸಲು ನಮ್ಮದೇನೂ ತಕರಾರಿಲ್ಲ. ಏಕೆಂದರೆ ಆ ಕಲಾವಿದ ಹೆಸರಾಗಿದ್ದ ಅಥವಾ ಕು-ಖ್ಯಾತನಾಗಿದ್ದ ಆ ಒಂದೆರಡು ದಶಕದ ವ್ಯಾಪಾರ ವ್ಯವಹಾರ ಬೇರೆ ಬೇರೆ ರೂಪ, ಸ್ವರೂಪದಲ್ಲಿ ಈಗಲೂ ನಡೆಯುತ್ತಿದೆ. ಇದೊಂದು ಥರಾ ರಾಮಾಯಣ. ಹಳೆಯ ಕಥೆ ಎಂದು ದೂರ ತಳ್ಳಲಾಗದ ದಿನವೂ ನವನವೀನವಾಗುವ ಕಥೆ.

ನಮ್ಮ ಈ ಕಥಾ ಗಾಯಕ ಅಗದೀ ಕಂಜೂಸ್ ಮನುಷ್ಯ. ಒಂದೊಂದು ಹಾಡಿಗೂ ಲಕ್ಷಾಂತರ ಪಡೆಯುತ್ತಿದ್ದ ಇವರು ಹತ್ತು ರೂಪಾಯಿ ವೆಚ್ಚ ಎಂದರೆ ಜೀವ ಬಿಡುವಷ್ಟು ಸಂಕಟ ಪಡುತ್ತಿದ್ದರು. ಐದು ಹತ್ತು ಪೈಸೆ ನಾಣ್ಯ ಆಗಿನ್ನೂ ಚಲಾವಣೆಯಲ್ಲಿತ್ತು. ಈ ಮಹರಾಯ ಐದೈದು ಪೈಸೆಗೂ ಚೌಕಾಸಿ ಮಾಡುತ್ತಿದ್ದರಂತೆ. ಅವರನ್ನು ಅವರ ಗೆಳೆಯರೇ ಬೆನ್ನ ಹಿಂದೆ ನಿಂತು ''ಉಂಡ ಕೈಯಲ್ಲಿ ಕಾಗೆಯನ್ನೂ ಹಾರಿಸದ ಮನುಷ್ಯ ಈತ, ಕೈ ಝಾಡಿಸಿದರೆ ಎಲ್ಲಿ ಒಂದೆರಡು ಅಗುಳು ಅತ್ತ ಇತ್ತ ಆದೀತೋ ಎಂಬ ಯೋಚನೆಯಾತ'' ಎಂದೆಲ್ಲ ಆಡಿಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು ಎಂಬಂಥ ಕಥೆಗಳೂ ಇವೆ. ಅವರ ಜಿಪುಣತನಕ್ಕೆ ರಂಗು ರಂಗಿನ ಉದಾಹರಣೆಗಳಿದ್ದವು. ಆ ಪೈಕಿ ಒಂದು ಹೀಗಿದೆ.

ಮುಂಬೈಯಲ್ಲಿ ಐಷಾರಾಮೀ ಬಂಗಲೆ ಅವರದು. ಆ ವಿಶಾಲ ಮನೆಯಲ್ಲೇ ಅವರ ಮಗನ ಉಪನಯನ ಶಾಸ್ತ್ರ ಜರುಗಿತು. ಆ ಕಾಲದ ಬಹುತೇಕ ಹೀರೋಗಳಿಗೆ ಇವರದೇ

ಕಂಠ ಗಾಯನ. ಹಾಗಾಗಿ ದೊಡ್ಡ ದೊಡ್ಡ ನಟರೂ, ನಟಿಯರೂ, ನಿರ್ಮಾಪಕ, ನಿರ್ದೇಶಕರೂ ಆದಿಯಾಗಿ ಅವರು ಯಾರನ್ನೆಲ್ಲ ಆಹ್ವಾನಿಸಿದ್ದರೋ ಅವರೆಲ್ಲರೂ ದುಬಾರಿ ಉಡುಗೊರೆ ಹಿಡಿದು ಬಂದಿದ್ದರು. ಸಾಲುಗಟ್ಟಿ ನಿಂತು ವಟುವಿಗೆ ಆಶೀರ್ವಾದ ಮಾಡಿ ಉಡುಗೊರೆಯನ್ನಿತ್ತು ಫೋಟೋಕ್ಕೆ ಫೋಸು ಕೊಟ್ಟು ಊಟದ ಮನೆಯ ಕಡೆ ಹೆಜ್ಜೆ ಹಾಕಲು ನೋಡಿದರು.

ಎಲ್ಲಿದೆ ಊಟದ ಮನೆ...? ಊಟ ಮಾಡಿ ಹೋಗಿ ಎಂದು ಯಾರನ್ನೂ ಯಾರೂ ಒತ್ತಾಯಿಸಿದ್ದೂ ಕಾಣಿಸಲಿಲ್ಲ. ಒಗ್ಗರಣೆಯ ಪರಿಮಳವೇ ಇಲ್ಲ. ಯಾರೋ ಬಂದರು, ಅತಿಥಿಗಳ ಕೈಗೆ ತಲಾ ಒಂದರಂತೆ ಲೆಕ್ಕ ಹಾಕಿ ಎಳನೀರನ್ನು ಕೊಟ್ಟರು. ಬಂದವರಿಗೆ ಅರ್ಥವಾಗಲು ತಡವಾಗಲಿಲ್ಲ. ಎಳನೀರಷ್ಟೇ ಇಂದಿನ ಭಾಗ್ಯ ಎಂದುಕೊಂಡು ಗಾಯಕನ ಕೈಕುಲುಕಿ ಹೊರಗೆ ಊಟ ಅರಸಿ ಹೊರಟರು. ಮರು ದಿವಸ ಆ ಮುಂಬೈಯ ಆ ಇಂಗ್ಲಿಷ್ ಪತ್ರಿಕೆಯ ಮುಖಪುಟದಲ್ಲಿ ಗಾಯಕನ ಮಗನ ಉಪನಯನದ ಸುದ್ದಿ ಚಿತ್ರ ಸಹಿತ ಪ್ರಕಟವಾಯಿತು. ಅತಿಥಿಗಳಿಗೆಲ್ಲ ''ದುಬಾರೀ'' ಎಳನೀರು ಕೊಟ್ಟು ಉಪಚರಿಸಿದ್ದೂ ವರದಿಯಾಯಿತು.

ಮುಂಬೈ ಮಹಾನಗರಿಯಲ್ಲಿ ಆಗ ತಲಾ ಎಳನೀರಿನ ದರ ಐದು ರೂಪಾಯಿ ಎಂದೂ ಆ ವರದಿ ಹೇಳಿತ್ತು. ಆದರೆ ಅತಿಥಿಗಳು ಇನ್ನೂರು ಮುನ್ನೂರು ರೂಪಾಯಿಗೆ ಕಡಿಮೆ ಇಲ್ಲದ ಮೃಷ್ಟಾನ್ನ ಭೋಜನದ ನಿರೀಕ್ಷೆಯಲ್ಲಿ ಅಷ್ಟೇ ಬೆಲೆ (ಕೆಲವರು ಐದು ನೂರರ, ಸಾವಿರ ರೂಪಾಯಿಯದನ್ನೂ ಹಿಡಿದು ಬಂದಿದ್ದರು.) ಬಾಳುವ ಉಡುಗೊರೆಯೊಂದಿಗೆ ಹಾಜರಾಗಿ ಪೆಂಗನಂತಾಗಿದ್ದು ಎಲ್ಲರ ಬಾಯಲ್ಲೂ ಕಥೆಯಾಗಿ ನಲಿದಾಡಿತು.

ಕಂಜೂಸ್ ಗಾಯಕನದು ತನಗೆ ಬರಬೇಕಾದ ಹಣದ ವಿಚಾರದಲ್ಲಿ ಬಹಳ ಕಟ್ಟುನಿಟ್ಟು. ಕೊನೆಯ ಐದು ಪೈಸೆ ಬಾಕಿ ಇದ್ದರೂ ಹಾಡದೆ ಕೂರುವ ಸ್ವಭಾವ. ಎಲ್ಲ ನಿರ್ಮಾಪಕರಿಗೆ ಇದು ಗೊತ್ತಿದ್ದರೂ ಆಗೊಮ್ಮೆ ಈಗೊಮ್ಮೆ ಪೇಮೆಂಟ್ ಕೊನೆ ಘಳಿಗೆಯವರೆಗೂ ಆಗುತ್ತಿರಲಿಲ್ಲ. ನಿರ್ಮಾಪಕರು ಏನೇನೋ ಸಬೂಬು ಹೇಳುತ್ತಿದ್ದರೂ ಈ ಮಹರಾಯ ಮಾತ್ರ ಜಪ್ಪೆನ್ನುತ್ತಿರಲಿಲ್ಲ. ಹಾಡಿನ ಧ್ವನಿ ಮುದ್ರಣ ನಿಗದಿತ ದಿನ ನಡೆಯದಿದ್ದರೆ ಮತ್ತೆ ಆ ಗಾಯಕನ ಕಾಲ್‌ಶೀಟ್ ಸಿಗುವುದು ಯಾವಾಗಲೋ, ಸ್ಟುಡಿಯೋ ಸಿಕ್ಕೀತೆಂಬ ಖಾತ್ರಿಯಿಲ್ಲ ಇತ್ಯಾದಿ ಅಂಜಿಕೆಯಲ್ಲಿ ನಿರ್ಮಾಪಕರು ಸಮಯಕ್ಕೆ ಸರಿಯಾಗಿ ಪೇಮೆಂಟ್ ವ್ಯವಸ್ಥೆ ಮಾಡುತ್ತಿದ್ದರು.

ಸ್ಟುಡಿಯೋದ ಒಳಗೆ ಹೋಗುವವರೆಗೂ ಕೆಲ ನಿರ್ಮಾಪಕರು ಭಂಡತನದಲ್ಲಿ ಪಾವತಿಸದೆ ಇರುವ ಸಂದರ್ಭವೂ ಇದ್ದವು. ಅದೆಷ್ಟೇ ಗೆಳೆತನದ ನಿರ್ಮಾಪಕರಾಗಿದ್ದರೂ; ಒಂದೆರಡು ಸಾವಿರ ಕೊರತೆ ಬಿದ್ದಿದ್ದರೂ ಗಾಯಕನ ಗಂಟಲು ಕೈ ಕೊಡುತ್ತಿತ್ತು. ''ಗಂಟಲು ಕೆರೆಯುತ್ತಿದೆ, ಇಂದು ರೆಕಾರ್ಡಿಂಗ್ ಬೇಡ'' ಎಂದು ಸಂಗೀತ ನಿರ್ದೇಶಕರಿಗೆ ಹೇಳಿ ಕಾರನ್ನು ಏರುತ್ತಿದ್ದರು. ಹೀಗಿರುವಾಗ ಅದೊಂದು ದಿವಸ ಸ್ಟುಡಿಯೋಕ್ಕೆ ಅವರ ಸವಾರಿ ರೆಕಾರ್ಡಿಂಗ್‌ಗೆಂದು ಚಿತ್ತೈಸಿತು. ಅಲ್ಲೇ ಕಾದಿದ್ದ ಪಿಎ ನಮಸ್ಕಾರ ಹೊಡೆದು ಸ್ಟುಡಿಯೋದ ಬಾಗಿಲವರೆಗೂ ಯಜಮಾನರನ್ನು ಬಿಟ್ಟು ಹಿಂದೆ ಸರಿದ.

ಕೊನೆ ಪೈಸೆಯೂ ಪಾವತಿಯಾಗಿದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳುವುದಕ್ಕೆ ಗಾಯಕ ಒಂದು ಮಾರ್ಗವನ್ನು ಕಂಡಿಟ್ಟುಕೊಂಡಿದ್ದರು. ರೆಕಾರ್ಡಿಂಗ್ ಸ್ಟುಡಿಯೋದಲ್ಲಿ ಒಂದು ಗಾಜಿನ ಪರದೆ ಇರುತ್ತದೆ. ಅದರ ಒಳಗೆ ಧ್ವನಿಮುದ್ರಣ. ಹೊರಗೆ ಯಾರೂ ನಿಂತು ಅದನ್ನು ನೋಡಬಹುದು. ಸಾಮಾನ್ಯವಾಗಿ ಪಿಎ ಆ ಜಾಗದಲ್ಲಿ ನಿಲ್ಲುತ್ತಿದ್ದ. ಗಾಯಕ ತನ್ನ ಪಿಎಯತ್ತ ನೋಡಿದಾಗ ಈತ ತಲೆ ಆಡಿಸುತ್ತಿದ್ದ. ಅದರ ಅರ್ಥ, ಹಣ ಪೂರ್ತಿ ಸಂದಾಯವಾಗಿದೆ ಎಂದು. ಗಾಯಕ ಸಮಾಧಾನದಲ್ಲಿ ರೆಕಾರ್ಡಿಂಗ್ ಮುಗಿಸಿ ಹೊರ ಬರುತ್ತಿದ್ದರು.

ಅಂದು ಒಳ ಹೋಗಿ ಹಾಡಲು ಸಿದ್ಧರಾದವರೇ ಗಾಜಿನ ಪರದೆಯತ್ತ ನೋಡಿದರೆ ಅಲ್ಲಿ ತಲೆಯಾಡಿಸಲು ಪಿಎ ಕಾಣಿಸಲಿಲ್ಲ. ಬೇರೆ ರೂಪದಲ್ಲೂ ಸಂಜ್ಞೆ ಬರಲಿಲ್ಲ. ಗಾಯಕನಿಗೆ ಎಲ್ಲ ಅರ್ಥವಾಯಿತು. ನಿರ್ಮಾಪಕ ಕೊನೆ ಘಳಿಗೆಯಲ್ಲಿ ಕೈಕೊಟ್ಟು ತನ್ನೊಂದಿಗೇ ಆಟವಾಡುತ್ತಾನೆಯೇ ಎಂದು ಸಿಟ್ಟೂ ಬಂತು. ಆದರೆ ಅದು ಸಿಟ್ಟಿನ ಪ್ರದರ್ಶನದ ಜಾಗವಾಗಿರಲಿಲ್ಲ. ಆದರೆ ಅವರದೇ ಮಾರ್ಗ ಉಂಟಲ್ಲ; ಗಾಯಕನ ಗಂಟಲ ಕೆರತ ಶುರುವಾಯಿತು. ಎರಡು ಮೂರು ಸಲ ಗಾಯಕ ಕ್ಯಾಕರಿಸಿದ್ದನ್ನು ನೋಡಿದ ಸಂಗೀತ ನಿರ್ದೇಶಕ ಇಂದು ಇಷ್ಟೇ ಸೈ ಎಂಬ ತೀರ್ಮಾನಕ್ಕೆ ಬಂದ. ಗಂಟಲು ಕೈಕೊಡ್ತಾ ಇದೆ. ಇಂದು ರೆಕಾರ್ಡಿಂಗ್ ಬೇಡ ಎಂಬ ಗಾಯಕನ ಮಾತಿಗೆ ನಿರ್ದೇಶಕ ಪ್ರತಿ ಆಡಿ ಬದುಕಲುಂಟೇ. ರೆಕಾರ್ಡಿಂಗ್ ರದ್ದಾಗಿ ಪ್ಯಾಕ್ ಅಫ್‌ಗೆ ಸೂಚನೆ ಹೋಯಿತು.

ಗಾಯಕ ಬುಸುಗುಡುತ್ತ ಹೊರಕ್ಕೆ ಬಂದರು. ಓಡಿ ಬಂದ ಪಿಎ, ಏನಾಯ್ತು ಸರ್? ಎಂದ. ಸೂಚನೆ ಬರಲಿಲ್ವಲ್ಲ ಎಂದು ಗಾಯಕ ಹೇಳಿದಾಗ ಪಿಎ ಗರಬಡಿದು ಹೋದ. ಈ ಚಿತ್ರಕ್ಕೆ ನೀವೇ ನಿರ್ಮಾಪಕರು ಸರ್ ಎಂದು ನೆನಪಿಸಿದ. ಈಗ ಮೂರ್ಛೆ ಹೋಗುವ ಸರದಿ ಗಾಯಕನದಾಯಿತು. ಸ್ಟುಡಿಯೋ ಬಾಡಿಗೆ ತನ್ನ ಕುತ್ತಿಗೆಗೇ ಬಂತಲ್ಲ ಎಂದು ಕಂಜೂಸ್ ಗಾಯಕ ಮಮ್ಮಲ ಮರುಗಿದನೆಂಬಲ್ಲಿಗೆ ಕಥೆ ಮುಕ್ತಾಯವು.

❋

## ಸುಳ್ಳು ಪರೀಕ್ಷೆ

1. ನಾಲಿಗೆಯನ್ನು ಹೊರಚಾಚಿ ಸೂರು ನೋಡಲು ಯಾರಿಗೂ ಸಾಧ್ಯವಿಲ್ಲ.
2. ಇದನ್ನು ಓದಿದ ಎಲ್ಲ ಮೂರ್ಖರೂ ಪರೀಕ್ಷಿಸುತ್ತಾರೆ.
3. ಅದು ಸುಳ್ಳೆಂದು ಅರಿಯುತ್ತಾರೆ.
4. ನೀವು ನಗುತ್ತಿದ್ದೀರಿ ಏಕೆಂದರೆ ನೀವೊಬ್ಬ ಮೂರ್ಖರಾದಿರಿ ಈಗ.
5. ಈಗ ಇದನ್ನು ನೀವು ಇನ್ನೊಬ್ಬ ಮೂರ್ಖನಿಗೆ ಇಮೇಲ್ ಮಾಡುತ್ತೀರಿ.